(SRI K. HANUMANTHAIYA)

finished. But there are some questions like question No. 250 where constitutional rights of the minorities are involved. Such questions may be given some more time.

Mr. SPEAKER.—I always bear that suggestion in view, and I also add that I have given time for that. When Sri Hanumanthaiya put the question, I did give enough time because it involved constitutional rights. But in some cases, in a hurry, I might not have done justice to some questions. I always put before the House and the Hon'ble Members my own difficulties. Unless the Hon'ble Members co-operate with me, it will not be possible for me to carry on the business and the Hon'ble Members will also bear with me when I say that I am always a little bit anxious that the whole list should be finished within one hour allotted for questions and answers. Otherwise it might happen that I would have to take only 5 or 6 questions, and other questions would lapse. I want that the Hon'ble Members should put restraints on themselves rather than I should do it.

10 A.M.

ಶ್ರೀ ಕೆ. ಎಚ್. ವೆಂಕಟರೆಡ್ಡಿ (ಗೌರಿಬಿದನೂರು).—ಇಲ್ಲಿ ಅ ಪೋಜಿಷನ್ ಮೆಂಬರುಗಳು ಬಂದಿರುವುದು ರೂಲಿಂಗ್ ಪಾರ್ಟಿಯವರು ಮಾಡಿರುವ ತಪ್ಪುಗಳನ್ನು ತೋರಿಸಿಕೊಡುವುದಕ್ಕೆ ಮತ್ತು ಅವರಿಗೆ ಬುದ್ಧಿಹೇಳುವುದಕ್ಕೆ.

ಅಧ್ಯಕ್ಷರು.—ಬುದ್ಧಿಹೇಳುವುದಕ್ಕೆ ಹೋಗಬೇಡಿ.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ನಿಜಾಂಶವನ್ನು ತಿಳಿಸುವುದಕ್ಕೆ ಎಂದು ತೆಗೆದುಕೊಳ್ಳಿ. ಪ್ರಶ್ನೋತ್ತರಗಳ ಕಾಲದಲ್ಲಿ ರೂಲಿಂಗ್ ಪಾರ್ಟಿಯವರಿಗೆ ಮಾತನಾಡುವುದಕ್ಕೆ ಹೆಚ್ಚಿಗೆ ಅವಕಾಶ ಕೊಡುತ್ತಿದ್ದೀರಿ. ನಾನು ಒಂದು ಪ್ರಶ್ನೆಯನ್ನು ಕೇಳಬೇಕು ಎಂದು ಬಹಳ ಹೊತ್ತಿನಿಂದ ಪ್ರಯತ್ನ ಮಾಡುತ್ತಿದ್ದೇನೆ. ಆದರೂ ಅವಕಾಶ ಕೊಡಲಿಲ್ಲ. ಶ್ರೀ ಹನುಮಂತಯ್ಯನವರಿಗೆ ಕೇಳುತ್ತಲೇ ನಾಲ್ಕು ಸಾರಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. 250ನೆಯ ಪ್ರಶ್ನೆಯನ್ನು ಕೇಳಬೇಕು ಎಂದು ಅದನ್ನು ತಂದೆ. ಅಂಥ ಪ್ರಶ್ನೆಯನ್ನು ತಳ್ಳಿಹಾಕುತ್ತ ಹೋದರೆ ಏನು ಮಾಡುವುದು ?

ಅಧ್ಯಕ್ಷರು.—ಈ ಬಗೆಯ ಆಪಾದನೆಗೆ ಅವಕಾಶವಾಗಬಾರದು ಎನ್ನುವ ದೃಷ್ಟಿಯಿಂದ ಎಲ್ಲರಿಗೂ ಪ್ರತಿ ದಿವಸ ಇಷ್ಟಿಷ್ಟು ಕಾಲವನ್ನು ಕೊಡುತ್ತಿದ್ದೇನೆ. ವ್ಯಕ್ತಿಶಃ ಮೆಂಬರುಗಳು ತಮಗೆ ಸಾಕಷ್ಟು ಕಾಲ ಸಿಕ್ಕುವುದಿಲ್ಲ ಎನ್ನುವ ಮಾತು ಹೇಳುವುದಾದರೆ ಒಪ್ಪಿಕೊಳ್ಳುತ್ತೇನೆ. 208 ಜನ ಮಾನ್ಯ ಸದಸ್ಯರುಗಳನ್ನು ಸಮಾಧಾನಪಡಿಸುವುದಕ್ಕೆ ಶಕ್ಯವಾಗುವುದಿಲ್ಲ. ಒಂದು ವೇಳೆ ಇಪ್ಪತ್ತು ಸಲ ಎದ್ದವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಶ್ರೀ ವೆಂಕಟರೆಡ್ಡಿಯವರಿಗೆ ಅವಕಾಶ ಕೊಟ್ಟಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಕಾಂಗ್ರೆಸ್ ಪಾರ್ಟಿಯವರಿಗೆ ರೂಲಿಂಗ್ ಪಾರ್ಟಿಯವರಿಗೆ ಜಾಸ್ತಿಕಾಲ ಕೊಡುತ್ತೇನೆ. ಅಪೋಜಿಷನ್ ಪಾರ್ಟಿಯವರಿಗೆ ಕೊಡುವುದಿಲ್ಲ ಎಂದರೆ ರೂಲಿಂಗ್ ಪಾರ್ಟಿಯವರು ಎಷ್ಟು ಜನ ಇದ್ದಾರೆ ಎನ್ನುವುದನ್ನು ನೋಡಬೇಕು. ಆ ದೃಷ್ಟಿಯಿಂದ ನೋಡಿದರೆ ಅವರಿಗೆ ಕಡಮೆ ಅವಕಾಶ ಸಿಕ್ಕುತ್ತದೆ. ಪ್ರತಿ ದಿವಸ ಎರಡು ಪಾರ್ಟಿಯವರಿಗೂ ಎಷ್ಟೆಷ್ಟು ಕಾಲವನ್ನು ಕೊಡುತ್ತಿದ್ದೇನೆ, ನೋಡಿ. ಉದಾಹರಣೆಗೆ ನಿನ್ನೆಯ ದಿವಸ ಎಂಟು ಗಂಟೆ ಹದಿನೈದು ನಿಮಿಷಗಳನ್ನು ಅಪೋಜಿಷನ್ ಪಾರ್ಟಿಯವರಿಗೆ ಕೊಟ್ಟಿದ್ದೇನೆ. ಇದನ್ನೆಲ್ಲಾ ತಾವು ಲಕ್ಷದಲ್ಲಿ ಇಟ್ಟುಕೊಳಬೇಕು. ತಾವು ತಿಳಿದುಕೊಂಡಿರುವುದು ತಪ್ಪು. ಶ್ರೀ ವೆಂಕಟರೆಡ್ಡಿಯವರಿಗೆ ಅವಕಾಶ ಕೊಡಬಾರದು ಎಂದು ಇಲ್ಲ. 20 ಜನ ನಿಂತುಕೊಂಡು ಇಂಡಿವಿಜುಯಲ್ ಆಗಿ ನನ್ನನ್ನು ನೋಡಲಿಲ್ಲ ಎಂದರೆ ಹೇಗೆ? ನನ್ನ ಚೇಂಬರಿಗೆ ಬಂದು ಹೇಳಿದರೆ ನಾನು ಅದನ್ನು ಸರಿಪಡಿಸಲು ತಯಾರು ಇದ್ದೇನೆ. ಯಾವ ಕೆಲಸವನ್ನೇ ಆಗಲಿ ಒಳ್ಳೆಯ ರೀತಿಯಿಂದ ಮಾಡಬೇಕಾಗುತ್ತದೆ. ಎರಡು ಪಟ್ಟು ಮೂರು ಪಟ್ಟು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿದರೆ ಅದು ಬಹಳ ಕಷ್ಟವಾಗುತ್ತದೆ.

BUDGET ESTIMATES FOR 1959-60—GENERAL DISCUSSION—(Contd.)

[Sri A. MOHAMED SAIT (Mysore City North) raised a point in Urdu.]

ಶ್ರೀ ಬಿ. ಡಿ. ಜತ್ತಿ (ಮುಖ್ಯಮಂತ್ರಿಗಳು).—ತಾವು ಹೇಳುವ ಮಾತು ಸರಿ. ಅದರ ಬಗ್ಗೆ, ಈ ವಿದ್ಯೆಯನ್ನು ತಿಳಿದವರು ಹೈದರಾಬಾದಿನವರು ಯಾರಾದರೂ ಇದ್ದರೆ ಅವರನ್ನು ನೇಮಕ ಮಾಡಿಕೊಳ್ಳಲಿಕ್ಕೆ ಸ್ಪೀಕರ್ ಮೂಲಕ ಏರ್ಪಾಡು ಮಾಡುತ್ತೇವೆ.

[Sri A. MOHAMED SAIT Spoke in Urdu Summary of his speech in English is given below.]

"Let me take the opportunity to compliment the Finance Minister on the efficient handling and presentation of the Budget. It has shown signs of recovery compared with last year's estimates.

The Hon'ble Minister has to be congratulated on his decision to lift the Sales Tax from fruits and perishable foodstuffs. The levy of percentage tax on passenger and goods traffic is an indirect tax. It affects one and all. The passenger levy is just a levy on the nationalised transport and may tend to reduce the earnings. With the

increased levy on diesel oil and motor tyres by the Central Government, the percentage levy will tend to increase living cost by affecting all transport commodities. In view of the increases forced by the Centre and to allow the private sector to develop fully which is doing yeoman service in the face of cheaper rates of Railways, the Hon'ble Minister would reconsider and reduce the levy if he cannot withdraw it. To copy the neighbouring State where the road transport is fully developed in a place where it is still in the infant stage would be to kill it before it can attain maturity.

The Hon'ble Minister has tackled the problem of deficit finance and brought out this time a grand surplus in the Revenue Receipts. One remarkable feature of the comparative figures furnished by the Hon'ble Minister in his speech under the Revenue and Capiatl receipts and expenditure is the conspicuous absence of budget estimates of 1958-59. I take it not to be a deliberate omission but that it is due to lack of space to put additional columns.

I put it that Budget Estimates should find a place always with revised estimates to enable the Hon'ble Members of this House to have immediate comparative data. Let me just draw out a comparison between the budget estimates, revised estimates and accounts for 1957-58 and that of budget estimates (figures in lakhs of rupees.) and revised estimates for 1958-59.

			Budget Estimates	Revised Estimates	Accounts
1957-58	Receipts	...	3,717 73	4,377 95	4,495 10
	Expenditure	...	4,653 72	4,548 24	3,991 24
	Surplus—Deficit	...	935 99+	70 57+	503 86
1958-59	Receipts	...	5,096 65	5,135 57	
	Expenditure	...	5,082 62	4,895 39	
		+	14 05	+ 240 18	
1959-60	Receipts	...	5,568 98		
	Expenditure	...	5,520 58		
			48 40		

In 1957-58 what was the deficit of 936 lakhs in the stage of the estimate has turned out to be a surplus of 71 lakhs. The variation between the budget estimate stage and the revised estimate is of the order of 1,000 lakhs. By the time we sail through the accounts our surplus rises to 1,500 lakhs. Well, such a vast variation in estimate and actuals can hardly be helpful in assessing the actual requirement of the coming year.

Taking the figures for 1958-59, the surplus is made to appear very large rising from 14 lakhs to 240 lakhs. This will please any layman. We are shown to be prosperous; our dark days are now over. This increase is explained by the Hon'ble Minister as any merchant would do as increase in revenue and decrease in expenditure. Such explanation does hardly accord with facts. The Hon'ble Minister has said that the seasonal conditions were unfavourable and that a grant of 9 lakhs was sanctioned for relief works. On our economic situation the Minister was pleased to give an extract of the Hon'ble Finance Minister's speech in Indian Parliament about drop in agricultural production, etc., and to say that it summed up the economic situation in the State also. We offered our thanks to the Governor for having pointed out the unfortunate position of Industries in the private sector. The decrease in expenditure can hardly be believed unless there has been appreciable cut

(SRI A. MOHAMED SAIT)

in services but on the other hand we find from the speech of the Finance Minister that the evolution of new pay scales, and the granting of additional benefit with a view to promo the welfare of employees have cost the State Exchequer well above four crores of rupees. Without any more detailed examination of the budget it can be said that the explanation for the surplus are only plausible and are not true as they stand.

The vast surplus is obviously due to incorrect estimation, incorrect appreciation of the position. The real financial position can at best be a guess in the absence of close approximation.

Under Ways and Means the Hon'ble Minister is pleased to observe that the comfortable position in accounts was highly satisfying. The position is rendered clear by the surplus being wiped out in the overall position which again is based on the revised Capital Expenditure estimates in respect of which figures of 1958-59 do not compare with the figures of 1957-58 as given in the outlay under capital.

Neither the estimates for receipts nor for expenditure for which we sit here and deliberate days together are any close to facts. The Hon'ble Finance Minister should give us more realistic estimates comparing them with accounts.

The estimates should be very close by approximate to accounts. The Departments should keep up to what is passed by the House. The estimates should not be burst and appropriation resorted to in all demands as is generally the case. Estimates widely varying with actuals can hardly be called budgeting. It will be just wasting the time of the House and it is not clear what sanctity is attached to the Legislative budget orders when in each case the expenditure goes beyond the estimate. The old system of rush of expenditure during the last months should be discontinued. Let there be an even flow of expenditure. The Legislature considers at all times the just and reasonable demands of expenditure When we are planning for five years at a stretch, there can be no lapse in a year but a throw forward in the next year without affecting the position under ways and means.

Government has budgeted this year for a vast increase in the school expenditure and primary education facilities are proposed to be stepped up. It is an accepted principle that primary education should be through the mother tongue. In areas populated largely by the Muslim community, where a large number of childern of primary classes exist, the Government should open classes in Urdu by posting Urdu teachers. It is an obligation of the Government but up till now there is no response to this from the Government. Even in high schools with adequate number of Urdu boys, it is seen that an Urdu tutor is not provided. If it is the intention of Government to stifle Urdu which is a recognised Indian language, it is better the Government is plain about it so that the Muslim masses may know and adjust themselves.

In the total population of the State, Muslims are the biggest minority totalling 25 lakhs working out to 12 per cent of the total population. Last year I had observed that they are denied their share in services. It is observed from publications of statistics that hardly about two to three per cent is given employment. In this very House they are not having half the representation which they should have on population basis. The eight Muslims drawn from party ranks do hardly command the confidence of the public. At best they can nod to the party behests. I wish to mention that a deep sense of frustration is being felt. Will the party Government be good enough to cater to national interests than purely to party and personal ends?

Government have increased the expenditure under Police but they have failed to keep the public peace. Incidents as those which occurred at Bagalkot where mosques were burnt and innocent Muslims were killed, beaten and harassed, can hardly infuse confidence in the Police force. It is more an object of contempt than praise if it cannot afford protection to innocent men, if it is not carrying out the orders

of Government but remains like a spectator when the properties of Muslims are looted and their sacred places are demolished and holy scriptures burnt. Either he be a Hindu, Muslim or Christian, all should be given equal protection. This is justice apart from Constitution. Government should compensate the sufferers and restore the mosques at the cost of Government.

In the fight for Independence the country stood united. After the achievement of independence men in the ranks made use of this Independence to gain personal ends. To them Independence was a noval way of loot. In the bickerings for sharing it, parties have multiplied, one vying with the other for dominance. The dominant party men are not free from gaining their party ends and personal ends. This has resulted in the defection of the party men in the lifetime of Nehruji. Service conditions demand of the Government servants to furnish statistics of assets while entering service and additions thereto. This healthy system should apply to all those who hold a gainful occupation under Government irrespective of a Minister or Chaprasi. I would suggest the Ministers filing the list of assets that they had while entering on the duties of Ministership and what they acquired thereafter with the Speaker of the House which should be made available along with that of the Officers within six months for the perusal of members of this House.

It is gratifying to note that the Central Government has allotted Rs. 10 crores for the development of the port of Mangalore. It has been a long felt necessity. Mysore lacks in an all weather port though it has a large coastline. The fisheries side also has not developed though the Minister was hopeful of it in his Budget speech of last year. It is imperative that Mangalore should be linked with Bangalore by Railway. When Mangalore was part of Madras State, the case for development was not very strong and now with its forming part of the Mysore unit the place should definitely be linked with Bangalore. The Government of Mysore should take up with the Centre for an early Railway link without which the development of the port will not be worthwhile nor could the areas in between Mangalore and Hassan be opened up for trade.

I may mention that Mysore, the hub of activity of the old State and the capital of the State is being badly neglected. Even if the old regime had continued the State capital would have got by now its rail to Satyamangalam on the one side and to Coorg on the other side. The link of Bangalore—Salem line is a traffic necessity. Both the areas are vast in natural wealth and they remain undeveloped. The Government of India should be pressed to allow a Mysore Railway as the Andhra State is pressing for an Andhra Railway so that local requirement could be immediately looked after by local men instead of from a distance of 1,500 miles by men who utterly lack in local knowledge and requirement. Recently it is understood that a serious accident was averted at Lokapavani bridge. What does the Railway Board feel if a large number of passengers die? The burden falls on the tax payer to meet the compensation and losses. This is the result of the remote control and deserves to be reorientated.

The adverse seasonal condition has affected local economy considerably. The masses are unable to find employment and what little they earn out of employment is not enough to meet the bare daily necessities. The living index has gone so high with the runaway prices that prevail that the daily wages of a man fail to fetch him two meals a day. It is better the Government fixes a ceiling for prices of foodstuffs and take stringent measures where it is violated if it is considered that Government cannot open Fair Price Shops to ameliorate the condition of the masses.

The National Congress in its Karachi session of 1931 resolved that no servant of the State should be paid more than Rs. 500 per month. We have marched a long way since then. The National Government has also marched far from it. The scales of pay are maintained at a very high level. We are an agrarian nation. Our economy is

(SRI A. MOHAMED SAIT)

agrarian. The ceilings now proposed on agrarian holdings and earnings should be enforced on the services. The vast disparity in pay between the lower and higher rate is not in line with democratic principles. The State's resources are largely being spent on the pay of its employees. Hardly one third goes back to the tax payer to better his position. The position has to be reviewed and steps taken to equalise the pay scales.

Land reforms are being pressed in the name of socialism. True socialism lies where every one is engaged in a gainful occupation. To put some have-nots to manage institutions of co-operative farming which are built out of the expropriated land holdings of others can hardly achieve the object of increased production. This is communist farming emerging in the grip of socialistic equation. Communist farming as compared to individual holdings is at a premium in the yield also. The objective is doubtful in the absence of an experiment. Government would do well to experiment on this farming in one or two taluks before in embarks on wholesale introduction of a slogan. The yield of land is not enough to meet the need of the masses. It would be wrong to introduce an untried scheme of doubtful value.

We sit and deliberate on estimates which are unreasl. The forecasts should be as accurate as possible. I have shown that the estimates are any body's guess. The economy of the State has not improved. Larger production is only statistical. No industries have been opened to give employment. Even the private sector is closing its industries one after the other under the burden of taxation. The Five-Year Plan is an assemblage under the name of Plan of what was to be normally done for the taxpayer. The Plan as given to the South has neither a Bakhra nor a Bhilai. It is time the legislature takes note of it and prevails on the Centre for allotment for a major work for the Mysore State. Otherwise our economy will be harnessed to that of the North and we have to rest on it for our daily dole.

It is no exaggeration when I say I am speaking the mind of the masses. Others may have to obey the party whip. I am unattached. I speak of the pain and anguish of the poor unemployed masses especially of my community. With the voice at my command I have endeavoured to place before the Government the need to hold the balance even, to turn a new page in the party rule. Make the community feel secure and you will also be secure. Insecurity will rebound on you a hundredfold. Let not Kerala be an example. I close this with my thanks to the Speaker for his kindness and patience."

10-30 A.M.

ಶ್ರೀ ಎ. ಮಹಮದ್ ಸೇಟ್.—ನಮ್ಮ ದೇಶದಲ್ಲಿ ಬಡ ಜನಗಳಿಗೆ ಬಹಳ ತೊಂದರೆ ಇದೆ. ಇದನ್ನೆಲ್ಲಾ ಬಹಳ ಕಡಮೆ ಮಾಡಬೇಕಾಗುತ್ತದೆ. "ಜನಗಳ ಸೇವೆಯೇ ಜನಾರ್ದನ ಸೇವೆ" ಎಂದು ಬಾಯಿಯಲ್ಲಿ ಹೇಳಿ ಕೊಂಡು ನನ್ನ ಸೇವೆ ಎಂದುಕೊಂಡು ನೀವು ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದೀರಾ? ದಯವಿಟ್ಟು ಇದನ್ನು ಬಿಟ್ಟು ಬಿಡಬೇಕು. ಆದರಿಂದ ನಮ್ಮ ದೇಶದ ಏಳಿಗೆಯೇ ಹೋಗಿ ಬಿಡುತ್ತದೆ. ದೇಶದ ಉದ್ಧಾರ ಮಾಡುವುದಕ್ಕೋಸ್ಕರ ನಾವೆಲ್ಲಾ ಎಷ್ಟೋ ಪ್ರಯತ್ನ ಮಾಡಿದೆವು. ಜೈಲಿಗೆ ಹೋದೆವು ಎಂದು ಹೇಳುತ್ತಾ ಇದ್ದವರು ಈಗ ದೊಡ್ಡ ದೊಡ್ಡ ಬಂಗಲೆಗಳು, ದೊಡ್ಡ ದೊಡ್ಡ ಮಂಚಗಳು, 20-30 ರೂಮುಗಳಿರುವ ಒಂದೊಂದು ಮನೆ, ಫರ್ನೀಚರ್, ರೇಡಿಯೋ—ಇವೆಲ್ಲಾ ಇವೊತ್ತು ಬೇಕಾಗಿವೆ ಎಂದು ಹೇಳುತ್ತೀರಾ? ಇದೇನು? ಇದನ್ನೆಲ್ಲ ಏಕೆ ಮಾಡಬೇಕು? ಇದೆಲ್ಲಾ ನಿಮಗೆ ಇದ್ದೇ ತೀರಬೇಕೇ? ಸುಖ ಪಡೆಯುವುದಕ್ಕೆ ಇಲ್ಲಿಗೆ ಬಂದಿದ್ದೀರಾ? ಕಷ್ಟಮಾಡಿ ಅದರಲ್ಲಿ ಜೀವ ಕೊಡಿ. ದೇವರು ನಿಮಗೆ ಮೋಕ್ಷವನ್ನು ಕೊಡುತ್ತಾನೆಂದು ನಾನು ಸರ್ಕಾರಕ್ಕೆ ಸೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎ. ಆರ್. ಕರಿಸಿದ್ದಪ್ಪ (ಅರಸೀಕೆರೆ).—ಸ್ವಾಮಿ ಸಭಾಪತಿಗಳೆ, ಈಗ ಸಭೆಯ ಮುಂದೆ ಮಂಡಿಸಿರತಕ್ಕ 1959-60ನೆಯ ಸಾಲಿನ ಬಡ್ಜೆಟ್ ಎಸ್ಟಿಮೇಟನ್ನು ಸ್ವಾಗತಿಸುತ್ತ ಈ ಸಂದರ್ಭದಲ್ಲಿ ನಾನು ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಹೆಚ್ಚು ಕೂಲಂಕಷವಾಗಿ ವಿಚಾರ ಮಾಡುವುದಕ್ಕೆ ಹೋಗದೆ ಸಂಕ್ಷಿಪ್ತವಾಗಿ ಮೊದಲು ಆಡಳಿತ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ದೇಶದ ಆಡಳಿತವನ್ನು ನಡೆಸತಕ್ಕ ಈ ಒಂದು ಅಡ್ಮಿನಿಸ್ಟ್ರೇಷನ್ ಮೆಷನರಿಯೆಂಬುದಾಗಿ ಏನಿದೆಯೋ ಇದು ಹುಟ್ಟಿದಲಾಗಾಯ್ತಿನಿಂದಲೂ ಇದಕ್ಕೆ ಕೆಲವು ಕಾಯಿಲೆಗಳಿದ್ದೇ ಇರುತ್ತವೆಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರವಾಗಿದೆ. ಆಡಳಿತ ವರ್ಗದಲ್ಲಿ ರೆಡ್‌ಟೇಪಿಸಂ, ಕರಪ್ಷನ್ ಮತ್ತು ಇನ್‌ಎಫಿಷಿಯೆನ್ಸಿ—ಈ ಮೂರು ಕಾಯಿಲೆಗಳೂ ಆಡಳಿತವೆಂಬುದು ಯಾವಾಗ ಹುಟ್ಟಿತೋ ಆಗಿನಿಂದಲೂ ಬೆಳೆದುಕೊಂಡು ಬರುತ್ತಲೇ ಇವೆ; ಇದು ಎಲ್ಲರಿಗೂ ಗೊತ್ತಿದೆ. ಈಗಿನ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರು ಅಧಿಕಾರ ಸೂತ್ರವನ್ನು ವಹಿಸಿಕೊಂಡ ತರುಣದಲ್ಲಿ ಈ ಆಡಳಿತ ವರ್ಗದಲ್ಲಿರುವ ಅದಕ್ಷತೆ, ಲಂಚಗುಳಿತನ, ರೆಡ್ ಟೇಪೀಸಂ—ಇವುಗಳನ್ನು ನಿರ್ಮೂಲ

ಮಾಡುವುದಕ್ಕೇನೇನು ಪ್ರಯತ್ನಗಳನ್ನು ಮಾಡಬೇಕೋ ಅವುಗಳನ್ನೆಲ್ಲ ಮಾಡಿ ಈ ದೋಷಗಳನ್ನು ಹೋಗಲಾಡಿಸತಕ್ಕ ಬಗ್ಗೆ ಸರ್ವ ಪ್ರಯತ್ನಗಳನ್ನು ಮಾಡುತ್ತೇವೆಂದು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಆದರೆ ಇಲ್ಲಿಯವರೆಗೂ ಸರ್ಕಾರದಲ್ಲಿರತಕ್ಕ ಇನ್‌ಎಫಿಷಿಯೆನ್ಸಿ, ಕರಪ್‌ಷನ್‌, ರೆಡ್ ಟೇಪಿಸಂಗಳನ್ನು ಕಡಮೆ ಮಾಡಲು ಅವರು ಸರ್ವಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಆದರೆ ಈ ದೋಷಗಳು ಏಕೋ ಏನೋ ಕೆಲವು ಇಲಾಖೆಗಳಲ್ಲಿ ಮಾತ್ರ ಅವು ಕಡಮೆಯಾಗುವುದಕ್ಕೆ ಬದಲು ಇನ್ನೂ ಜಾಸ್ತಿಯಾಗುತ್ತಿವೆಯೆಂದು ನಾನು ತಿಳಿಸಲಿಚ್ಛಿಸುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಲಂಚರುಷವತ್ತುಗಳನ್ನು ತೆಗೆದುಕೊಳ್ಳದಿರುವಂಥ ಜನರು ಯಾರಾದರೂ ಇದ್ದಾರೆಯೇ ಎನ್ನುವುದನ್ನು ನಾವು ಹುಡುಕಿ ನೋಡಬೇಕಾಗಿದೆ. ಪೋಲೀಸ್ ಸಿಬ್ಬಂದಿಯಲ್ಲಿ ಕಾನ್ಸ್ಟೇಬಲ್ ದರ್ಜೆಯಿಂದ ಹಿಡಿದು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಹುದ್ದೆಯವರೆಗೂ ಲಂಚರುಷವತ್ತುಗಳ ಚಟವಿಲ್ಲದಂಥ ನೌಕರರಿದ್ದಾರೆಯೇ ಎಂದರೆ ಈ ದಿವಸ ಅಂಥವರು ಯಾರೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಇಲಾಖೆಯಲ್ಲಿ ಲಂಚಗುಳಿತನವೆಂಬುದು ಇನ್ನೂ ಇದೆ. ಅಷ್ಟೇ ಅಲ್ಲ, ಅದಿನ್ನೂ ಜಾಸ್ತಿ ಆಗುತ್ತಿದೆ. ಆದರೆ ಮಾನ್ಯ ಮಂತ್ರಿಗಳು ಮಾತೆತ್ತಿದರೆ ನಾವು ರೆಡ್ ಟೇಪಿಸಂ, ಇನ್‌ಎಫಿಷಿಯೆನ್ಸಿ, ಕರಪ್‌ಷನ್ ಇತ್ಯಾದಿಗಳನ್ನು ಹೋಗಲಾಡಿಸಿ, ಆಡಳಿತದ ಕೆಲಸಕಾರ್ಯಗಳು ಬಹಳ ದಕ್ಷತೆಯಿಂದ ಕಾಲವಿಳಂಬಕ್ಕೆ ಅವಕಾಶ ಕೊಡದಂತೆ ನಡೆಸಿಕೊಂಡು ಹೋಗಲು ಸರ್ವ ಪ್ರಯತ್ನಗಳನ್ನೂ ಮಾಡುತ್ತಲೇ ಇದ್ದೇವೆಂದು ಹೇಳುತ್ತಲೇ ಇರುತ್ತಾರೆ. ಆದಾಗ್ಗೂ ಕೆಲಸಗಳು ಕಾಲ ಕಾಲಕ್ಕೆ ಸರಿಯಾಗಿ ನಡೆಯದೆ ಈ ವಿಳಂಬವಿನ್ನೂ ಜಾಸ್ತಿಯಾಗುತ್ತಿದೆ ಎಂದು ನಾನು ಹೇಳುತ್ತೇನೆ. ಈ ದಿವಸ ಈ ವಿಳಂಬವೆಂಬುದು ಪ್ರತಿಯೊಂದು ಜಿಲ್ಲಾಧಿಕಾರಿಗಳ ಮಟ್ಟದಲ್ಲೂ, ಇಲಾಖೆಯ ಮೊಖ್ತೇಸರರುಗಳ ಮಟ್ಟದಲ್ಲೂ ಮತ್ತು ಸೆಕ್ರೆಟೇರಿಯೆಟ್ ಆಡಳಿತದ ಮಟ್ಟದಲ್ಲೂ ಹೀಗೆ ಎಲ್ಲೆಲ್ಲೂ ಇದ್ದೇ ಇದೆ ಯೆಂಬುದನ್ನು ಸೂಚಿಸತಕ್ಕ ಬಗ್ಗೆ ನಾನು ಒಂದೆರಡು ಉದಾಹರಣೆಗಳನ್ನೀಗ ಕೊಡಬಯಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಈಗ ಎನ್.ಇ.ಎಸ್. ಬ್ಲಾಕ್ ಇದೆ. ಅದು ಕೆಲಸ ಮಾಡುತ್ತಿದೆ. ಈ ಎನ್.ಇ.ಎಸ್. ಬ್ಲಾಕಿನಾಶ್ರಯದಲ್ಲಿ ಮತ್ತು ಅಲ್ಲಿರತಕ್ಕ ಹಳ್ಳಿಯ ಜನರ ಸಹಾಯದಿಂದ ಎರಡು ಮೈಲಿಯುದ್ದದ ಒಂದು ಅಪ್ರೋಚ್ ರಸ್ತೆಯನ್ನು ಮಾಡಬೇಕೆಂದು ಇಲ್ಲಿಗೆ ಸುಮಾರು ಒಂದು ವರ್ಷದಿಂದಲೂ ಕೆಲಸವನ್ನು ಪ್ರಾರಂಭ ಮಾಡಿ ನಡೆಸುತ್ತಿದ್ದಾರೆ. ಆ ಎರಡು ಮೈಲಿ ಉದ್ದವಿರತಕ್ಕ ರಸ್ತೆಯಲ್ಲಿ ಎರಡು ಫರ್ಲಾಂಗ್ ಉದ್ದದ ರಸ್ತೆ ಅಲ್ಲಿರತಕ್ಕ ಒಂದು ಅಮೃತಮಹಲ್ ಕಾವಲಿನಲ್ಲಿ ಹಾದು ಹೋಗಬೇಕಾಗಿದೆ. ಅದಕ್ಕಾಗಿ ಅಲ್ಲಿಯ ಕಾವಲಿನ ಅಧಿಕಾರಿಗಳು ಸರ್ಕಾರದ ಅನುಮತಿಯಿಲ್ಲದೆ ಅಲ್ಲಿ ರಸ್ತೆಮಾಡಕೂಡದೆಂದು ಅಡ್ಡಿ ಮಾಡಿರುತ್ತಾರೆ. ಸರ್ಕಾರಕ್ಕೆ ಅಲ್ಲಿರತಕ್ಕ ಎನ್.ಇ.ಎಸ್. ಬ್ಲಾಕಿನ ಅಧಿಕಾರಿಗಳೂ ಮತ್ತು ಆ ಪ್ರದೇಶದಲ್ಲಿರತಕ್ಕ ಹಳ್ಳಿಯಜನರೂ ಆ ಅಮೃತಮಹಲ್ ಕಾವಲಿನಲ್ಲಿ ಆ ಎರಡು ಫರ್ಲಾಂಗ್ ರಸ್ತೆಗಾಗಿ ಬೇಕಾಗುವ ಜಾಗವನ್ನು ಬಿಟ್ಟು ಕೊಡಬೇಕೆಂದು ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿದ್ದಾರೆ. ಆ ಮನವಿಗಳು ಸರ್ಕಾರಕ್ಕೆ ಬಂದು ಒಂದು ವರ್ಷದ ಮೇಲಾಯಿತು. ಈಗಿನ ಅಗ್ರಿಕಲ್‌ಚರಲ್ ಶಾಖೆಯ ಮಂತ್ರಿಗಳಾದ ಶ್ರೀ ಕೆ. ಎಫ್. ಪಾಟೀಲರು ಅರಸೀಕೆರೆಗೆ ಮೊನ್ನೆ ಬಂದಿದ್ದಾಗ ನಾನೇ ಅವರನ್ನು ಭೇಟಿಮಾಡಿ ಈ ಎರಡು ಫರ್ಲಾಂಗ್ ರಸ್ತೆ ಆಗದಿದ್ದರೆ ಆ ರಸ್ತೆ ಪೂರ್ತಿಯಾದಂತೆ ಆಗುವುದಿಲ್ಲ, ಆ ಅಮೃತಮಹಲ್ ಕಾವಲಿನಲ್ಲಿ ಅದಿಷ್ಟು ಜಾಗವನ್ನು ಬಿಟ್ಟುಕೊಡಿ, ಅದರಿಂದ ಸರ್ಕಾರಕ್ಕೇನೂ ಅಂಥ ನಷ್ಟವಾಗುವುದಿಲ್ಲ ಎಂದು ಹೇಳಿ ಸ್ಥಳದಲ್ಲೇ ಈ ಬಗ್ಗೆ ಒಂದು ತೀರ್ಮಾನ ಕೊಟ್ಟು ಹೋಗಬೇಕೆಂದು ಕೇಳಿಕೊಳ್ಳಲು ಅದಕ್ಕೆ ಅವರು ಅವರ ಹತ್ತಿರವಿದ್ದ ಪಿ.ಎ.ಗೆ ನೀವು ಹೆಡ್ ಕ್ವಾರ್ಟರ್ಸಿಗೆ ಹೋದ ಕೂಡಲೇ ಈ ಬಗ್ಗೆ ತಕ್ಷಣ ಕಾರ್ಯಕ್ರಮ ಕೈಗೊಂಡು ಇದನ್ನು ಬಿಡಿಸಿಕೊಡಲು ಪ್ರಯತ್ನ ಮಾಡಿ ಎಂದು ಹೇಳಿದರು. ಹಾಗೆ ಅವರು ತಿಳಿಸಿದ ಮೇಲೆ ಎರಡು ತಿಂಗಳಾದರೂ ಏನೂ ಉತ್ತರವೇ ಬರಲಿಲ್ಲ. ಕಳೆದ ನವೆಂಬರ್ ತಿಂಗಳಲ್ಲಿ ನಡೆದ ಅಧಿವೇಶನಕ್ಕೆ ನಾನು ಇಲ್ಲಿಗೆ ಬಂದಿದ್ದಾಗ್ಗೆ ನಾನೇ ಮಂತ್ರಿಗಳ ಛೇಂಬರಿಗೆ ಹೋಗಿ, ಏನು ಸ್ವಾಮಿ, ಅಮೃತಮಹಲ್ ಕಾವಲಿನಲ್ಲಿ ಕೆಲಸ ನಡೆಯದೆ ನಿಂತಿರುವ ರಸ್ತೆಯ ವಿಚಾರದಲ್ಲಿ ತಾವು ಯಾವ ಆರ್ಡರನ್ನೂ ಸಹ ಇದುವರೆಗೂ ಕಳುಹಿಸಲೇ ಇಲ್ಲವೆಂದು ಕೇಳಿದ್ದಕ್ಕೆ, ಏನೋ ಸ್ವಲ್ಪ ಸಾವಕಾಶ ಆಯಿತು, ಇನ್ನು ತಡಮಾಡುವುದಿಲ್ಲ. ಕಳುಹಿಸುತ್ತೇವೆಂದು ಹೇಳಿದರು ಆಯಿತು ಎಂದು ಹೇಳಿ ನಾನು ಅಸೆಂಬ್ಲಿ ಮುಗಿದ ನಂತರ ಊರಿಗೆ ಹೊರಟು ಹೋದೆನು. ನಾನು ಮೊನ್ನೆ ತಾನೆ ಈಗ ಹಾಲಿ ನಡೆಯುತ್ತಿರುವ ಅಧಿವೇಶನಕ್ಕೆ ಬಂದ ಅನಂತರ ಮತ್ತೊಮ್ಮೆ ಮಾನ್ಯ ಮಂತ್ರಿಗಳ ಛೇಂಬರಿಗೆ ಹೋಗಿ ನೋಡಬೇಕಾಯಿತು. ಆ ವೇಳೆಯಲ್ಲಿ ಅವರ ಛೇಂಬರಿನಲ್ಲೇ ಆ ಇಲಾಖೆಗೆ ಸಂಬಂಧಪಟ್ಟ ಎಂದರೆ ಅನಿಮಹರ್ ಹಸ್ ಬೆಂಡ್ರಿ ಇಲಾಖಾಧಿಕಾರಿಗಳೂ ಇದ್ದರು. ಆಗ ಏನು ಸ್ವಾಮಿ, ಹಳ್ಳಿಯ ಜನರಿಗೇನೋ ಆ ಎರಡು ಫರ್ಲಾಂಗ್ ರಸ್ತೆ ಕೆಲಸವೇ ಒಂದು ದೊಡ್ಡ ಕಾರ್ಯ, ಆದರೆ ಅದು ಸರ್ಕಾರದವರ ದೃಷ್ಟಿಯಲ್ಲಿ ತೀರಾ ಚಿಕ್ಕ ಕೆಲಸವೆಂಬುದಾಗಿ ಭಾವಿಸಿರಬಹುದು. ಇದಕ್ಕೋಸ್ಕರವಾಗಿ ನಾನು ತಮ್ಮಲ್ಲಿಗೆ ಮೂರಾವರ್ತಿ ಬರಬೇಕಾಯಿತು. ಆದರೂ ಇನ್ನೂ ಆರ್ಡರ್ ತಾವು ಮಾಡಲಿಲ್ಲ ಎಂದು ತಿಳಿಸಿದೆ. ಆಗ ಮಂತ್ರಿಗಳು ಅಲ್ಲೇ ಹಾಜರಿದ್ದ ಇಲಾಖಾ ಮೊಖ್ತೇಸರರಿಗೆ ಅವರ ಡೈರಿಯಲ್ಲಿ ಈ ವಿಚಾರ ನೋಟ್ ಮಾಡಿಸಿ ಬೇಗ ಆರ್ಡರ್ ಕಳುಹಿಸುವಂತೆ ಹೇಳಿದರು. ಆದರೆ ಇದುವರೆಗಿನ್ನೂ ಆ ಬಗ್ಗೆ ಯಾವ ಆರ್ಡರೂ ಆ ಸಂಬಂಧಪಟ್ಟ ಎನ್.ಇ.ಎಸ್. ಬ್ಲಾಕಿನ ಅಧಿಕಾರಿಗಳಿಗೆ ಬಂದಿರುವುದಿಲ್ಲ. ಇದು ಒಂದು ದಕ್ಷತೆಯೇನು? ಇನ್ನು 1952ರಲ್ಲಿ ಒಂದು N. T. M. ಸ್ಕೂಲ್ ಕಟ್ಟಡ ಕಟ್ಟಿಸತಕ್ಕ ಬಗ್ಗೆ ಸರ್ಕಾರದವರು ಹಾಲಿ ಜಾರಿಯಲ್ಲಿರತಕ್ಕ ಪ್ರಕಾರ ಗ್ರಾಂಟ್ ಕೊಡುತ್ತೇವೆಂದು ಹೇಳಿ ಜನರಿಗೆ ಆ ಕಟ್ಟಡ ಕಟ್ಟಲು ಆಜ್ಞೆಮಾಡಿದರು. ಅಲ್ಲಿಯ ಜನರು ಸರ್ಕಾರದಿಂದ ಅರ್ಧ ಹಣ ಗ್ರಾಂಟ್ ರೂಪದಲ್ಲಿ ದೊರೆಯುತ್ತದೆಂಬ ಭರವಸೆಯ ಮೇಲೆ ಸಾಲ-ಸೂಲ ಮಾಡಿ 1952-53ರಲ್ಲೇ ಆ ಕಟ್ಟಡವನ್ನು ಪೂರ್ತಿ ಕಟ್ಟಿಬಿಟ್ಟರು. ಅದರ ಬೆಲೆಯನ್ನು ಅಂದಾಜು ಮಾಡಿಸಿದಾಗ ಅದು 13–14ಸಾವಿರ ರೂಪಾಯಿಗಳಾಯಿತು. ಆದರೆ ಸರ್ಕಾರದವರು ಆ ಬಗ್ಗೆ ಕೊಡಬೇಕಾಗಿದ್ದ ತಮ್ಮ ಭಾಗದ ಅರ್ಧ ಹಣದ ಬಗ್ಗೆ ಎರಡು-ಮೂರು ಸಾವಿರ ರೂಪಾಯಿಗಳನ್ನು ಒಂದು ಪಾರ್ಟ್‌ಪೇಮೆಂಟಾಗಿ ಕೊಟ್ಟರು. ಅನಂತರ ಉಳಿದ ಹಣವನ್ನು ಇಲ್ಲಿಗೆ ಆರು–ಏಳು ವರ್ಷಗಳು ಕಳೆದಾಗ್ಗೂ ಆ ಹಳ್ಳಿಯ ಜನರಿಗೆ ಕೊಟ್ಟಿರುವುದಿಲ್ಲ. ಕೇಳಿದರೆ ರೆಕಾರ್ಡು ಮೇಲಕ್ಕೆ ಹೋಗಿದೆ, ಕೆಳಕ್ಕೆ ಹೋಗಿದೆಯೆಂದು ಹೇಳುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಯಾವ ಸ್ಕೂಲು?

ಶ್ರೀ ಎ. ಆರ್. ಕರಿಸಿದ್ದಪ್ಪ.—ಚಿಕ್ಕೂರು N.T.M. ಸ್ಕೂಲು, ಅರಸೀಕೆರೆ ತಾಲ್ಲೂಕು ನಾನು ಈ ವಿಚಾರವನ್ನೀಗ ಏಕೆ ಹೇಳುತ್ತಿದ್ದೇನೆಂದರೆ ಸರ್ಕಾರದವರೇನೋ ಇಫಿಷಿಯೆನ್ಸಿ, ಕರಪ್ಷನ್‌ಗಳನ್ನು ಹೋಗಲಾಡಿಸತಕ್ಕ ಬಗ್ಗೆ ಪ್ರಯತ್ನಗಳನ್ನು ನಡೆಸುತ್ತಿದ್ದಾಗ್ಲೂ ಇಷ್ಟಗಳಿನ್ನೂ ವಾಯವಾಗಿಲ್ಲವೆಂಬುದನ್ನು ತಿಳಿಸಿ ಆ ಬಗ್ಗೆ ನನ್ನ ಕೆಲವು ಸಲಹೆಗಳನ್ನು ಕೊಡಬೇಕೆಂಬ ಉದ್ದೇಶದಿಂದ ಇಷ್ಟೆಲ್ಲವನ್ನೂ ಹೇಳಬೇಕಾಯಿತು. ಜಿಲ್ಲಾ ಲೆವಲ್‌ನಲ್ಲಿರತಕ್ಕ ಇಲಾಖಾ ಮುಖ್ಯಾಧಿಕಾರಿಗಳೇನಿದ್ದಾರೆ—ಈ ಡೆಪ್ಯುಟೀ ಕಮಿಷನರು ಡಿ. ಎಂ., ಡಿ.ಎಸ್. ಪಿ., ಡಿ. ಎಫ್. ಒ. ಮತ್ತು ಡಿ.ಇ.ಓ. ಇವರುಗಳೂ ಮತ್ತು ದೇಶದ ಪ್ರತಿಯೊಂದು ಶಾಖೆಗೂ ಇರತಕ್ಕ ಸ್ಟೇಟ್ ಆಫೀಸರುಗಳೂ ಇವರು ಮೊದಲು ಕರಪ್ಟ್ ಅಧಿಕಾರಿಗಳಹುದೇ ಅಲ್ಲವೆ ಎನ್ನುವುದನ್ನು ತಾವು ಮೊದಲು ನೋಡಬೇಕಾದದ್ದು ಬಹು ಮುಖ್ಯವಾದದ್ದು. ಈಗ ಉದಾಹರಣೆಗೆ ಹಾಸನ ಜಿಲೆಯಲ್ಲಿರತಕ್ಕ ಡಿ. ಎಸ್. ಪಿ. ಒಬ್ಬಾತ ಕರಪ್ಟ್ ಆಫೀಸರಾದರೆ ಆತನ ಕೈಕೆಳಗಿರತಕ್ಕ ಇನ್ನುಳಿದೆಲ್ಲಾ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಜಮಾದಾರ್, ದಫೆದಾರ್, ಕಾನ್ಸ್ಟೇಬಲ್ ಎಲ್ಲರೂ ಕರಪ್ಟ್ ಆಗದೆ ಉಳಿಯಲು ಸಾಧ್ಯವೇ ಇಲ್ಲ. ಆದುದರಿಂದ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಹಾಕತಕ್ಕ ಆಫೀಸರುಗಳೇನಿದ್ದಾರೆ ಅವರು whether they are free from curruption; ಮತ್ತು ಅವರು ನಿಷ್ಠೆಯಿಂದ ಕೆಲಸಮಾಡತಕ್ಕವರೇ ಎಂಬುದನ್ನು ನೋಡಿ ಅವರನ್ನು ಆರಿಸಿ ಹಾಕಬೇಕಾದದ್ದು ಬಹು ಮುಖ್ಯವಾದದ್ದು. ಈಗಾಗಲೇ ನಮ್ಮ ಜಿಲ್ಲೆಗೆ ಒಬ್ಬಿಬ್ಬರು ಹೊಸ ಅಧಿಕಾರಿಗಳು ಬಂದಿದ್ದಾರೆಂದು ಇಟ್ಟುಕೊಳ್ಳೋಣ. ಆದರಿಂದ ಆಡಳಿತ ನಿಜವಾಗಿಯೂ ಎಷ್ಟೋ ಸುಧಾರಿಸಿದೆ. ಆದುದರಿಂದ ಡಿಸ್ಟ್ರಿಕ್ಟ್ ಆಫೀಸರುಗಳನ್ನು ಹಾಕಬೇಕಾದರೆ ಸರ್ಕಾರದವರು ನಿಜವಾದ ಸ್ಥಿತಿಗತಿಗಳನ್ನು ತಿಳಿದುಕೊಂಡು, ಅಧಿಕಾರಿಯು ಯಾವ ಮಟ್ಟದವನು ಎಂದು ತಿಳಿದುಕೊಂಡು ಹಾಕಿದರೆ ಜಿಲ್ಲಾ ಮಟ್ಟದಲ್ಲಿಯಾದರೂ ಆಡಳಿತ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಭಾವಿಸಿ ಕೊಂಡಿದ್ದೇನೆ.

ಪಾನನಿರೋಧವನ್ನು ಇಡಿಯ ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂದು ನಮ್ಮ ಸರ್ಕಾರದವರು ಮಾಡುತ್ತಿದ್ದಾರೆ, ಇದನ್ನು ಬಹಳ ಸದುದ್ದೇಶದಿಂದ ಮಾಡುತ್ತಿದ್ದಾರೆ. ನಮ್ಮ ವಿರೋಧ ಪಕ್ಷದ ಮಿತ್ರರು ಇದನ್ನು ವಿರೋಧಿಸುತ್ತಾರೆ. ಪಾನನಿರೋಧವನ್ನು ಜಾರಿಗೆ ತರದೆ prohibition scrap ಮಾಡಬೇಕೆಂದು ವಾದ ಮಾಡುತ್ತಾರೆ. ಆದರೆ ಪಾನನಿರೋಧವನ್ನು ಬಹಳ ಸದುದ್ದೇಶದಿಂದ ಮಾಡುತ್ತಿರುವುದರಿಂದ ನಾನು ಒಂದು ವಿಷಯವನ್ನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ಸದುದ್ದೇಶದಿಂದ ಪಾನನಿರೋಧವನ್ನು ಜಾರಿಗೆ ತರುತ್ತಿದ್ದೀರೋ ಅದನ್ನು ಕಾರ್ಯಗತ ಮಾಡಬೇಕಾದರೆ ಕೆಲವು ಕಷ್ಟಗಳು ಬರುತ್ತವೆ. ಆದರೂ ಕೂಡ ಪಾನನಿರೋಧವನ್ನು ಇಡಿಯ ದೇಶದಲ್ಲಿ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಪಾನನಿರೋಧವನ್ನು ಸುಮಾರು 1953-54ನೆಯ ಇಸವಿಯಿಂದಲೂ ಕೆಲವು ಕಡೆ ಜಾರಿಗೆ ತಂದರು. ಆ ಮೇಲೆ ಇದೇ ಅಸೆಂಬ್ಲಿಯಲ್ಲಿ ಪಾನನಿರೋಧವನ್ನು ಇಡಿಯ ದೇಶದಲ್ಲಿ ಜಾರಿಗೆ ತರಬೇಕು ಅಥವಾ ಪಾನನಿರೋಧವನ್ನು ತೆಗೆಯಬೇಕೆಂಬ ಕೂಗು ಇದ್ದರೂ ಕೂಡ ಎಲ್ಲೋ ಒಂದು ಕಡೆ, ಹಾಸನ ಜಿಲ್ಲೆಯ ಒಂದು ಚಿಕ್ಕ ತಾಲ್ಲೂಕಿನಲ್ಲಿ ಈ ವರ್ಷ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಮಾಡಿದ್ದಾರೆ. ತೆಗೆದ ಹಾಗೂ ಇರಬೇಕು, ತೆಗೆಯದ ಹಾಗೂ ಇರಬೇಕು ಎನ್ನುವಂಥ ಒಂದು ನೀತಿಯನ್ನು ಸರ್ಕಾರ ಇಟ್ಟುಕೊಂಡಿದೆ ಎಂದು ಹೇಳುತ್ತೇನೆ. ನಾನು Excise ಮಂತ್ರಿಗಳಲ್ಲಿ ಒಂದು ವಿಷಯವನ್ನು ಕೇಳಿಕೊಳ್ಳುತ್ತೇನೆ. The Minister for Public Works is a bold minister. Really he takes very bold action and very quick action. ಅದೇ ರೀತಿಯಲ್ಲಿಯೇ ನಮ್ಮ ಎಕ್ಸೈಸ್ ಮಂತ್ರಿಗಳೂ ಸಹ ಇವೊತ್ತು ಪಾನನಿರೋಧವನ್ನು ಜಾರಿಗೆ ತರಬೇಕೆಂದಿದ್ದೇನೆ ಎಂದು ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಹೇಳಬೇಕು. ಇದನ್ನು ಜಾರಿಗೆ ತಂದೇತೀರಬೇಕು. ಅದರಿಂದ ಹಣದ ಮುಗ್ಗಟ್ಟು ಬರುತ್ತದೆಂದು ಹೇಳಬಹುದು. ಇವೊತ್ತು ಒಂದು ಸಣ್ಣ ತಾಲ್ಲೂಕಿನಲ್ಲಿ ಜಾರಿಗೆ ತರಬೇಕೆಂದಿರುವುದರ ಅರ್ಥವೇನು? ಇಡಿಯ ದೇಶದಲ್ಲಿ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ತೊಂದರೆ ಇದ್ದರೆ ಕೊನೆಯಪಕ್ಷ ನಮ್ಮ ಹಾಸನ ಜಿಲ್ಲೆಯಲ್ಲಾದರೂ ಕೂಡ ಪೂರ್ಣ ಪಾನನಿರೋಧವನ್ನು ಜಾರಿಗೆ ತರಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

Needs of the rural area ಎಂದರೆ ಹಳ್ಳಿಗಳಿಗೆ ಬೇಕಾದ ಆವಶ್ಯಕತೆಗಳ ವಿಚಾರವಾಗಿ ನಿನ್ನೆಯ ದಿನ ಮಾತನಾಡಿದ ಮಾನ್ಯ ಸ್ನೇಹಿತರಾದ ಶಿವಪ್ಪನವರು ಮತ್ತು ಇತರರೂ ಇದರ ಬಗ್ಗೆ ಹೇಳಿದ್ದಾರೆ. ಮಾನ್ಯ ಶಿವಪ್ಪನವರು communications ಆವಶ್ಯಕತೆ ಇದೆ ಎಂದು ಹೇಳಿದರು. ಮಾನ್ಯ ಕೌಜಲಗಿಯವರು ಕುಡಿಯುವ ನೀರಿನ ಅವಶ್ಯಕತೆಯ ವಿಚಾರವಾಗಿ ಹೇಳಿದರು, ಹಳ್ಳಿಗಳು ಸರ್ವತೋಮುಖವಾದ ಅಭಿವೃದ್ಧಿಗಾಗಿ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಬೇಕಾದಷ್ಟು ಮಾಡುತ್ತಿದ್ದೇವೆಂದರೂ ಎಲ್ಲರೂ ಹೇಳುತ್ತಿದ್ದಾರೆ. ನಾನು ಹೇಳುವುದಾರೆ ನಿಜವಾಗಿಯೂ ನೀವು ಏನೇನು ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರೊ ಅದರಲ್ಲಿ ಎರಡಾಣೆಯಷ್ಟನ್ನಾದರೂ ಮಾಡಿದ್ದೀರೋ ಇಲ್ಲವೋ ಎಂದು ಯೋಚನೆ ಮಾಡಬೇಕಾಗಿದೆ. ಏನನ್ನೂ ಮಾಡಿಲ್ಲವೆಂದು ನಾನು ಭಾವಿಸಿ ಕೊಂಡಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ 360 ಹಳ್ಳಿಗಳಿವೆ. ಅದರಲ್ಲಿ state fund ರಸ್ತೆ ಪಕ್ಕದಲ್ಲಿರುವ ಗ್ರಾಮಗಳಿಗೆ ಮಾತ್ರ ರಸ್ತೆಯ ಸೌಕರ್ಯವಿದೆ. ರಸ್ತೆಯಿಂದ ದೂರವಿರುವ ಹಳ್ಳಿಗಳಿಗೆ ಒಂದಕ್ಕೂ ರಸ್ತೆಗಳಿಲ್ಲ. ಹಳ್ಳಿಗಳಿಗೆ approach roads ಒಂದಕ್ಕೂ ಇಲ್ಲ. ಹಳ್ಳಿಯನ್ನು ಉದ್ಧಾರ ಮಾಡುತ್ತೇವೆಂದು ಹೇಳತಕ್ಕ ನಾವು ಹಳ್ಳಿಗಳಿಗೆ ಅತಿಮುಖ್ಯವಾಗಿ ಬೇಕಾಗಿರತಕ್ಕ, ಎಲ್ಲತರಹ ಅಭಿವೃದ್ಧಿಗೂ ಅತಿಮುಖ್ಯವಾಗಿ ಬೇಕಾಗಿರತಕ್ಕ ಅಪ್ರೋಚ್ ರೋಡ್ ಇಲ್ಲದೆ ಇದ್ದರೆ ಯಾವ ಅಭಿವೃದ್ಧಿ ಕಾರ್ಯವೂ ಸಾಧ್ಯವಾಗುವುದಿಲ್ಲ. An approach road is an eye opener for the all round development of the village. ಹಳ್ಳಿಗೆ ಅಪ್ರೋಚ್ ರಸ್ತೆ ಆಗಿಯೇ ತೀರಬೇಕು. ಈ ರಸ್ತೆಗಳ ಮುಖಾಂತರ ಹಳ್ಳಿಗಳಿಗೆ ಬೇಕಾಗಿರತಕ್ಕ ಅಭಿವೃದ್ಧಿ ಕಾರ್ಯಗಳೆಲ್ಲ ಬರುತ್ತವೆಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದು ಇಷ್ಟೆ. ಎಷ್ಟು ಹಳ್ಳಿಗಳಿಗೆ ರಸ್ತೆಗಳಿವೆ, ಎಷ್ಟು ಕಡೆ ರಸ್ತೆಗಳ ಸೌಕರ್ಯವಿಲ್ಲ, ಇವನ್ನೆಲ್ಲ ಗಮನಕ್ಕೆ ತೆಗೆದುಕೊಳ್ಳಿ. ಬಡ್ಜೆಟ್ಟಿನಲ್ಲಿ ರೂರಲ್ ಡೆವಲಪ್‌ಮೆಂಟಿಗೆ ಒದಗಿಸಿರುವ ಹಣದಲ್ಲಿ ಉಳಿತಾಯವಾಗಿರುವುದನ್ನು ನೋಡಿದರೆ ಸರ್ಕಾರಕ್ಕೆ ಈ ಕಾರ್ಯದಲ್ಲಿ ಎಷ್ಟು ಆಸಕ್ತಿ ಇದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ ಈ ರೀತಿಯಾದ

ಅನಾದರಣೆಯನ್ನು ಹಳ್ಳಿಗಳ ವಿಚಾರದಲ್ಲಿ ತೋರಿಸದೆ ಹಳ್ಳಿಗಳ ಆವಶ್ಯಕತೆಗಳೇನಿವೆ ಎಂಬುದನ್ನು ತಿಳಿದು ಕೊಳ್ಳಬೇಕು. ಅದರಲ್ಲಿ ಅಪ್ರೋಚ್ ರಸ್ತೆಗಳನ್ನು ಮೊದಲು ಮಾಡಬೇಕೆಂದು ನಾನು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಈಚೆಗೆ ನಮ್ಮ ಸರ್ಕಾರದವರು ಒಂದು ಸಾಧನೆಯನ್ನು ಮಾಡಿದ್ದಾರೆ. ಹಳ್ಳಿಗಾಡಿನಲ್ಲಿ ಹೋಗುತ್ತಿದ್ದ ಡಿಸ್ಟ್ರಿಕ್ಟ್ ಫಂಡ್ ರಸ್ತೆಗಳ ಪೈಕಿ 3,800 ಮೈಲಿಯಷ್ಟು ರಸ್ತೆಯನ್ನು ಸರ್ಕಾರಕ್ಕೆ ಸೇರಿಸಿಕೊಂಡಿದ್ದಾರೆ. ಈ ಬಗ್ಗೆ ಅವರನ್ನು ಅಭಿನಂದಿಸಬೇಕು. ಮುಖ್ಯವಾಗಿ ಮರಾಮತ್ ಶಾಖೆಯ ಮಾನ್ಯ ಮಂತ್ರಿಗಳಿಗೆ ನಮ್ಮ ಅಭಿನಂದನೆಗಳು ಸಲ್ಲಬೇಕಾಗಿವೆ ಹಳ್ಳಿಗಾಡಿನ ರಸ್ತೆಗಳು ಚೆನ್ನಾಗಿಲ್ಲ, ಸೌಕರ್ಯವಿಲ್ಲ, ಅವುಗಳನ್ನು ಉತ್ತಮಪಡಿಸಬೇಕೆಂಬ ದೃಷ್ಟಿಯಿಂದ ಈ ರಸ್ತೆಗಳನ್ನು state fund ರಸ್ತೆಗಳನ್ನಾಗಿ ಮಾಡಿದ್ದಾರೆ. ಇದೇ ರೀತಿಯಾಗಿ ಎಲ್ಲ ಹಳ್ಳಿಗಳಿಗೂ ಅಪ್ರೋಚ್ ರೋಡ್ ಮಾಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆಂದು ನಂಬಿದ್ದೇನೆ.

ಸರ್ಕಾರದಲ್ಲಿ ನಮ್ಮ ದೇಶಕ್ಕೆ ಸೇರಿದಂಥ ಆಸ್ತಿಗಳೇನಿವೆ, ಅವು ಯಾವುದೋ ಹೆಸರಿನಲ್ಲಿ ಲೂಟಿಯಾಗುತ್ತಿವೆ. ಇದನ್ನು ಸರ್ಕಾರದವರು ಕಂಡುಹಿಡಿದು ಅವನ್ನು ಸಾಧ್ಯವಾದಷ್ಟು ತಪ್ಪಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಮೃತಮಹಲ್ ಇಲಾಖೆಯಲ್ಲಿ ಒಂದು ಸ್ಕೀಂ ಇದೆ. That is the aided cattle breeder's scheme. ಇದು ಏಕೆಂಬುದು ನನಗೆ ಇನ್ನೂ ಅರ್ಥವಾಗಿಲ್ಲ. ಅಮೃತ್‌ಮಹಲ್ ದನಗಳೇನಿವೆ ಅವುಗಳನ್ನು ಸರ್ಕಾರದವರು ಕೆಲವರಿಗೆ ಮಾರಿದ್ದಾರೆ. ಅವುಗಳನ್ನು ಮೇಯಿಸುವುದಕ್ಕೆ ಒಬ್ಬ aided cattle breeder ಎಂದು ಮಾಡಿದ್ದಾರೆ. ಅವರಿಗೆಲ್ಲ ಒಂದೊಂದು ಸಾವಿರ ಎಕರೆ ಜಮೀನನ್ನು ಕೊಟ್ಟಿದ್ದಾರೆ. ಈ ಸಾವಿರ ಎಕರೆ ಜಮೀನನ್ನು ಇಟ್ಟುಕೊಂಡು ಆತನು ಸರ್ಕಾರಕ್ಕೆ ನಾಲ್ಕಾಣೆಯಂತೆ ಗುತ್ತಿಗೆಯನ್ನು ನೀಡುತ್ತಿದ್ದಾನೆ.

11 A.M.

ಸರ್ಕಾರದವರು ಗ್ರೇಜಿಂಗ್ ಪರ್ಪಸ್‌ಗೋಸ್ಕರ ಕೊಟ್ಟಿದ್ದಾರೆ. ಅದನ್ನು ಅವನು ಬೇರೆಯವರಿಗೆ ಎತ್ತುಗಳನ್ನು ಮೇಯಿಸುವುದಕ್ಕೆ ಬಿಡುತ್ತಾನೆ. ಆರೀತಿ ಬಿಟ್ಟುಕೊಂಡು ಒಂದು ತಿಂಗಳಿಗೆ ಏನಿಲ್ಲಾ ಎಂದರೆ ಒಂದು ಬ್ರೀಡರ್‌ಗೆ ಒಂದು ಸಾವಿರ ರೂಪಾಯಿ ಉತ್ಪತ್ತಿ ಬರುತದೆ. ಬ್ರೀಡರ್ಸ್ 50 ಎಕರೆಯೊಳಗೆ ಫಾಡರ್ಸ್ ಬೆಳೆಯಬೇಕು, ಆದರೆ ಅವರು ಫಾಡರ್ಸ್ ಬೆಳೆಯುವುದಿಲ್ಲ. ಕಮರ್ಷಿಯಲ್ ಕ್ರಾಪ್ಸ್ ಹೆಸರು, ಉದ್ದು, ಗೋಧಿ ಇತ್ಯಾದಿಗಳನ್ನು ಬೆಳೆಯುತ್ತಿದ್ದಾರೆ. ಇವೊತ್ತು ದೇಶದಲ್ಲಿ ಜಮೀನು ಕೊಡಿ ಉತ್ತುಕೊಂಡು ಜೀವನ ಮಾಡುತ್ತೇವೆ ಎಂದು ಬೇಕಾದಷ್ಟು ಸಾವಿರಾರು ಜನ ಜಮೀನು ಇಲ್ಲದವರು ಬಡವರು ಕೇಳುತ್ತಾ ಇರಬೇಕಾದರೆ 14 ಜನ ಬ್ರೀಡರ್ಸ್‌ಗೆ ಕೊಟ್ಟಿದ್ದಾರೆ. ನಮ್ಮ ಸ್ಟೇಟಿನಲ್ಲಿ 14 ಸಾವಿರ ಎಕರೆ ಫರ್ಟೈಲ್ ಲ್ಯಾಂಡ್ ಎಂದರೆ ಉತ್ಕೃಷ್ಟ ಭೂಮಿ ಇವೆ. ಅದಕ್ಕೆ ಎಕರೆಯೊಂದಕ್ಕೆ 60 ಸಾವಿರ ರೂಪಾಯಿಗಳಷ್ಟು ಬೆಲೆ ಇದೆ. ಇಂಥಾ ಭೂಮಿಯನ್ನು ಬ್ರೀಡರ್ಸ್‌ಗೆ ಕೊಟ್ಟಿದ್ದಾರೆ. ಏಯ್‌ಡೆಡ್ ಕ್ಯಾಟಲ್ ಬ್ರೀಡರ್ಸ್ ಸ್ಕೀಮು ಏನು ಇದೆ, ಅದು ಉಪಯೋಗವಿಲ್ಲದ ಸ್ಕೀಮ್. ಅದನ್ನು ಅಬಾಲಿಷ್ ಮಾಡಿಬಿಟ್ಟು ಈಗ 14 ಸಾವಿರ ಎಕರೆ ಏನು ಕೊಟ್ಟಿದ್ದೀರಿ, ಅದನ್ನು ವಾಪಸ್ಸು ತೆಗೆದುಕೊಂಡು ಜಮೀನು ಇಲ್ಲದವರಿಗೆ ಉಳುವುದಕ್ಕೆ ಜಮೀನು ಕೊಟ್ಟರೆ ಉತ್ತಮರೀತಿಯಲ್ಲಿ ಜಮೀನು ಉಪಯೋಗಿಸಿದ ಹಾಗಾಗುತ್ತದೆ. ಸರ್ಕಾರದ ಆಸ್ತಿ ಏನು ಇದೆ, ಅದು ದುರುಪಯೋಗವಾಗುತ್ತಿದೆ. ಅದನ್ನು ತಪ್ಪಿಸಿದಹಾಗಾಗುತ್ತದೆ ಎಂದು ಹೇಳುತ್ತೇನೆ.

ಸರ್ಕಾರದವರು ಮೊದಲಿನಿಂದಲೂ ಹೇಳುತ್ತಿದ್ದಾರೆ. "The State wants more doctors" ಎಂದು. ದೇಶದಲ್ಲಿ ಇವೊತ್ತು 400 ಡಾಕ್ಟರುಗಳು ಬೇಕಾಗಿದ್ದಾರೆ. 200 ಜನ ಮೆಡಿಕಲ್ ಡಿಪಾರ್ಟ್‌ಮೆಂಟಿಗೆ ಮತ್ತು 200 ಜನ ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟಿಗೆ ಈಗ ಡಾಕ್ಟರುಗಳು ಇಲ್ಲ. ಆಸ್ಪತ್ರೆಯಲ್ಲಿ ಡಾಕ್ಟರು ಇಲ್ಲ ಎಂದು ಹೇಳುತ್ತಾರೆ. ಹೋದವರ್ಷ ಮತ್ತು ಆಚೆ ವರ್ಷದಿಂದಲೂ ಸದಸ್ಯರು ಡಾಕ್ಟರುಗಳು ಇಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರಕ್ಕೂ ಗೊತ್ತಿದೆ. ಡಾಕ್ಟರುಗಳು ಇಲ್ಲವೇ ಎಂದು ಯೋಚನೆ ಮಾಡಿದರೆ ಸಾವಿರಾರು ಜನ ಡಾಕ್ಟರುಗಳು ನಮ್ಮ ದೇಶದಲ್ಲಿ ಇದ್ದಾರೆ. ಆದರೂಕೂಡ ಈ ತರತಕ್ಕ ಡಾಕ್ಟರುಗಳು ಏತಕ್ಕೆ ಸರ್ಕಾರಿ ಕೆಲಸಕ್ಕೆ ಬರುವುದಿಲ್ಲ ಎಂದು ಸರ್ಕಾರದವರು ಯೋಚನೆ ಮಾಡಿರುವ ಹಾಗೆ ಕಾಣುವುದಿಲ್ಲ. ಇವರು ತಿಂಗಳಿಗೆ 75 ರೂಪಾಯಿ ಸಂಬಳ ಕೊಡುತ್ತಾರೆ. ಒಬ್ಬ ಡಾಕ್ಟರು ಪದವಿಗೆ ಓದಬೇಕಾದರೆ ಎಷ್ಟುದುಡ್ಡು ಖರ್ಚು ಮಾಡಿ ಓದುತ್ತಾನೆ. 75 ರೂಪಾಯಿ ಸಂಬಳವನ್ನು ರೋಡ್ ಟ್ರಾನ್ಸ್‌ಪೋರ್ಟಿನಲ್ಲಿ ಬಸ್ ಕಂಡಕ್ಟರಿಗೆ ಕೊಡುತ್ತಾರೆ. ಅವರ ಸಂಬಳ ಈ ಡಾಕ್ಟರುಗಳಿಗೆ ಇಲ್ಲ. ಡ್ರೈವರು, ಕಂಡಕ್ಟರುಗಳಿಗೆ ಸಂಬಳದ ಎರಡರಷ್ಟು ಮೂರರಷ್ಟು ಆದಾಯ ಬರುತ್ತದೆ. ಆದ್ದರಿಂದ ನಿಜವಾಗಿ ಸರ್ಕಾರದವರು ಯೋಚನೆ ಮಾಡಬೇಕು. ಹೆಲ್ತ್ ಮಿನಿಸ್ಟರು ಉತ್ತರ ಕೊಡುತ್ತಾ ಡಾಕ್ಟರುಗಳಿಗೆ ಸ್ವಲ್ಪ ಸಂಬಳವನ್ನು ಜಾಸ್ತಿ ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ ಎಂದು ಹೇಳಿದರು. 75 ರೂಪಾಯಿ ಇರುವುದನ್ನು 80 ರೂಪಾಯಿಗೆ ಜಾಸ್ತಿ ಮಾಡಿದ್ದೇವೆ ಎಂದು ಹೇಳುವುದನ್ನು ಬಿಟ್ಟು ಬಿಟ್ಟು ಸರಿಯಾದ ರೀತಿಯೊಳಗೆ ಹೆಚ್ಚುಮಾಡಿ. ಅದು ಲೂಕ್ರೆಟೀವ್ ಮತ್ತು ಅಟ್ರಾಕ್ಟಿವ್ ಆಗಿದ್ದು ಡಾಕ್ಟರುಗಳು ಕೆಲಸಕ್ಕೆ ಬರುವುದಕ್ಕೆ ಒಂದು ಆಶೆ ಹುಟ್ಟಿಸುವಂತೆ ಇರಬೇಕು. ಈ ರೀತಿ ಸಂಬಳ ಜಾಸ್ತಿಮಾಡಿ ಡಾಕ್ಟರುಗಳನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಅವರ ಸಂಬಳವನ್ನು ಎಷ್ಟೋ ದಿವಸಗಳಿಂದ ಜಾಸ್ತಿ ಮಾಡಬೇಕು ಎಂದು ಇದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ಜಾಸ್ತಿ ಮಾಡಿ ಡ್ಯಾಕ್ಟರುಗಳು ಇಲ್ಲ ಎನ್ನುವ ಶಬ್ದವನ್ನು ತಪ್ಪಿಸಿಬಿಡುತ್ತಾರೆಂದು ನಂಬಿದ್ದೇನೆ.

ಇನು ಒಂದು ವಿಚಾರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮತ್ತು ಕೇಡರ್ ರೆಗ್ಯುಲರೈಜ್ ಮಾಡುವುದು ಇದೆ. ಇದು ಬಹಳ ನಿಧಾನವಾಗಿ ನಡೆಯುತ್ತಿದೆ. ಕೂರ್ಗಿನಲ್ಲಿ ಸುಮಾರು 32, 33 ಜನ ಗ್ರ್ಯಾಜುಯೇಟ್ಸ್ ಡಾಕ್ಟರುಗಳು ಇಂಟಿಗ್ರೇಷನ್ ಆದಮೇಲೆ ನಮಗೆ ಸೇರಿದರು. ಇವೊತ್ತಿನ ದಿವಸದವರೆಗೂ ಸಬ್ ಅಸಿಸ್ಟೆಂಟ್ ಸರ್ಜನ್ಸ್, ಅಸಿಸ್ಟೆಂಟ್ ಸರ್ಜನ್ಸ್ ಒಂದೇ ಸಮನಾಗಿ ಸರ್ಕಾರಕ್ಕೆ ರೆಪ್ರೆಜೆಂಟೇಷನ್ ಮಾಡಿದ್ದರೂ ಅವರ ವಿಚಾರ ತೀರ್ಮಾನವಾಗಿಲ್ಲ. ಈಗ ಪ್ರೊಬೇಷನ್ಸ್ ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತಿದ್ದಾರೆ. ಆದರಿಂದ ಅವರಿಗೆ ಯಾವ ಸ್ಥಾನ ಕೊಡುತ್ತಾರೆ ಎಂದು ನಿರ್ಧಾರ ಮಾಡಬೇಕು. ಎಂಟತ್ತು ವರ್ಷಗಳಿಂದಲೂ ಕೆಲಸಮಾಡಿದವರು ಇರುತ್ತಾರೆ. ಆದ್ದ

(ಶ್ರೀ ಎ. ಆರ್. ಕರಿಸಿದ್ದಪ್ಪ)

ರಿಂದ ಸರ್ಕಾರದವರು ಅದನ್ನು ಕೂಲಂಕಷವಾಗಿ ನೋಡಿ ಆದಷ್ಟು ಜಾಗ್ರತೆ ನ್ಯಾಯವಾಗಿ ಸೀನಿಯಾರಿಟಿ ದೊರಕಿಸಿ ಕೊಡಬೇಕು. ಅದನ್ನು ದೊರಕಿಸಿಕೊಡುತ್ತಾರೆಂದು ನಂಬಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎ. ಎಸ್. ಪಾಟೀಲ್ (ನರಗುಂದ್).—ಮಾನ್ಯ ಹಣಕಾಸಿನ ಮಂತ್ರಿಗಳು ಸಾದರುಪಡಿಸಿದ ಚಾಲೂ ಸಾಲಿನ ಬಡ್ಜೆಟ್ಟನ್ನು ಸ್ವಾಗತಿಸಿ ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ. ಇದೂ ಅಲ್ಲದೆ ನಮ್ಮ ರಾಜ್ಯದಲ್ಲಿ ನಡೆದ ಆಡಳಿತಗಳಲ್ಲಿ ಕೆಲವು ಲೋಪ ದೋಷಗಳ ಬಗ್ಗೆ ಸೂಚನೆಗಳನ್ನು ನೀಡಬೇಕೆಂದು ನನ್ನ ಮನಸ್ಸಿದೆ. ಮೊದಲನೆಯದಾಗಿ ನ್ಯಾಯಾಂಗ ಖಾತೆಯಲ್ಲಿ ಸಿವಿಲ್ ಜಡ್ಜಸ್ ಮತ್ತು ಸೆಷನ್ ಜೆಡ್ಜಸ್‌ಗಳ ನೇಮಕದ ವಿಚಾರದಲ್ಲಿ ಸರ್ಕಾರದವರು ಕಳೆದ 2½ ವರ್ಷಗಳಿಂದ ಒಬ್ಬರನ್ನಾದರೂ ಪ್ರೊಬೇಷನರಿ ಜಡ್ಜಿಗಳಾಗಿ ನೇಮಿಸಿಲ್ಲ. ಕಾರಣ ಏನು ಎಂಬುದು ತಿಳಿಯುವಾಗಿದೆ. ಮುಂಬೈ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದಲ್ಲಿ ಆಗಲಿ ಪ್ರೊಬೇಷನರ್ಸ್‌ಗಳನ್ನು ನೇಮಿಸುವ ಪದ್ಧತಿಯನ್ನು ನಿಲ್ಲಿಸದೆ ಇರುವಾಗ ನಮ್ಮ ಮೈಸೂರು ಸರ್ಕಾರದವರು ಮಾತ್ರ ಬೇರೆ ದಾರಿಯಲ್ಲಿ ಹೋಗುತ್ತಿರುವಂತೆ ಭಾಸವಾಗುತ್ತದೆ. ಈಗಾಗಲೇ ನೌಕರಿಯಲ್ಲಿರತಕ್ಕ ಜನರ ವರ್ಚಸ್ಸಿನಿಂದ ನಡವಳಿಕೆ ನಡೆಯಲಿಕ್ಕೆ ಹತ್ತಿದ ಎಂದು ಎನಿಸುತ್ತದೆ. ಹೈಕೋರ್ಟಿನವರು ಕೋರ್ಟ್ ಕಚೇರಿಯಲ್ಲಿ ಇದ್ದಂಥ ಕೆಲವು ಸೀನಿಯರ್ ಕ್ಲಾರ್ಕ್‌ಗಳನ್ನು ಸಿವಿಲ್ ಜಡ್ಜ್‌ಗಳಾಗಿ ನೇಮಿಸಿದ್ದು ಬಾರ್‌ನಿಂದ ಎಂದರೆ ವಕೀಲರ ಸಂಘಗಳಿಂದ ಉತ್ತಮ ಕೆಲಸ ಮಾಡಿದಂಥವರು ಮತ್ತು ಹೆಚ್ಚು ದಕ್ಷತೆಯಿಂದ ದುಡಿದ ಜಡ್ಜಿಗಳಿಗೆ ಸಿವಿಲ್ ಜಡ್ಜ್ ಆಗುವ ಅವಕಾಶ ಸಿಕ್ಕದೆ ನಮ್ಮ ಭಾಗದಲ್ಲಿ ಕ್ಲಾರ್ಕ್ ಆಗಿ ಹೋಗುವುದು ಉತ್ತಮ ಪ್ರಾಕ್ಟೀಸ್ ವಗೈರೆ ಮಾಡಿ ಉತ್ತಮ ಕೆಲಸ ಮಾಡುವುದು ಸರಿಯಲ್ಲ ಎಂಬ ಭಾವನೆ ಬಂದಿದೆ.

ಇದರೊಳಗೆ ಇನ್ನೂ ಕಾಯಿದೆಯ ಸಮೀಕರಣವಿನ್ನೂ ಷುರುವಾಗಿರುವುದಿಲ್ಲ. ಅಲ್ಲದೆ ಒಂದೊಂದು ಭಾಗದಲ್ಲಿ ಒಂದೊಂದು ತರಹ ಪಗಾರದ ವ್ಯವಸ್ಥೆಯಿದೆ. ಅದನ್ನೆಲ್ಲ ನೋಡಿ ಯಾವರೀತಿಯ ಕಾಯಿದೆಗಳಿವೆಯೋ ಅವುಗಳನ್ನು ಸರಿಪಡಿಸಬೇಕು. ಈ ಎಲ್ಲ ಕಾಯಿದೆಗಳೂ ಐದು ಭಾಗಗಳಿಗೂ ಒಂದೇ ರೀತಿಯಾಗಿ ಅನ್ವಯವಾಗುವಂತೆ ಆ ತರಹದ ಕಾಯಿದೆಗಳನ್ನು ಮಾಡಬೇಕು. ಒಂದೊಂದು ಕಡೆಯಲ್ಲಿ ಜಾರಿಯಲ್ಲಿರುವಂತಹ ಕಾಯಿದೆಗಳು ಬೇರೆ ಬೇರೆಯಾಗಿವೆ. ವಿದ್ಯಾಭ್ಯಾಸದ ಪದ್ಧತಿ ಒಂದೊಂದುಕಡೆ ಒಂದೊಂದು ರೀತಿಯಲ್ಲಿದೆ. ಇವನ್ನೆಲ್ಲ ಪರಿಶೀಲಿಸಿ ಸಮೀಕರಣವನ್ನು ಸಾಧಿಸುತ್ತಾರೆಂದು ನಂಬುತ್ತೇನೆ. ಈ ಬಗ್ಗೆ ನ್ಯಾಯಾಂಗ ಮಂತ್ರಿಗಳಿಗೆ ಬಿನ್ನಹ ಮಾಡುತ್ತಾ ಈ ಕೆಲಸ ಇನ್ನು ಎಷ್ಟು ದಿವಸಗಳಲ್ಲಿ ಬರಬಹುದು ಎನ್ನುವುದನ್ನು ಕೇಳುತ್ತಿದ್ದೇನೆ. ಇದಕ್ಕಾಗಿ ಹೊಸದಾಗಿ ಇಲಾಖೆಯನ್ನು ತೆರೆದು ಎರಡು ವರ್ಷಗಳಿಂದಲೂ ಈ ನ್ಯಾಯಾಂಗಕ್ಕೆ ಅವಶ್ಯಕವಾಗಿರುವ ಕಾಯಿದೆಗಳನ್ನು ಸಮೀಕರಣ ಮಾಡುತ್ತಿದ್ದಾರೆ. ಇನ್ನು ಮುಂದೆ ರಾಜ್ಯಾಂಗಕ್ಕೆ ಅನ್ವಯಿಸತಕ್ಕಂತಹ ಕಾಯಿದೆಗಳನ್ನು ತಯಾರಿಸುವುದು ಅತ್ಯಾವಶ್ಯಕ; ಮತ್ತು ಈಗ ನಮಗೆ ಬಂದಿರುವ ಐದು ಭಾಗಗಳಲ್ಲಿ ಒಂದು ತರಹದ ಕಾಯಿದೆಗಳು ಉಪಯೋಗದಲ್ಲಿವೆ. ಆದುದರಿಂದ ಈಗ ಸಮೀಕರಣ ಮಾಡುವಾಗ ಹೆಚ್ಚಿನ ಗಮನವಿತ್ತು ಆದಷ್ಟು ತೀವ್ರತೆಯಿಂದ ಮಾಡಬೇಕಾಗಿತ್ತು. ಇದರ ಪ್ರಯತ್ನ ಇನ್ನೂ ಹಾಗೆಯೇ ಉಳಿದಿದೆ.

ಶ್ರೀ ಟಿ. ಸುಬ್ರಹ್ಮಣ್ಯ (ನ್ಯಾಯಾಂಗ, ಕಾರ್ಮಿಕ ಮತ್ತು ಸ್ಥಳೀಯ ಪ್ರಜಾಧಿಕಾರ ಶಾಖೆಗಳ ಮಂತ್ರಿಗಳು).—ಕಾಯಿದೆಗಳೆಲ್ಲ ಸಿದ್ಧವಾಗಿವೆ. ಆದರೆ ನಮ್ಮ ಮುಂದೆ ಬಂದಿಲ್ಲ ಅಷ್ಟೆ.

ಶ್ರೀ ಎ. ಎಸ್. ಪಾಟೀಲ್.—ತಾವು ಈ ಬಗ್ಗೆ ಹೆಚ್ಚಿನ ಲಕ್ಷ್ಯಕೊಟ್ಟು ಇಡೀ ರಾಜ್ಯಕ್ಕೆ ಮಹತ್ವವಾದ ಕಾಯಿದೆಗಳನ್ನು ಸರ್ವರಿಗೂ ಅನುಕೂಲವಾಗುವಂತೆ ಸಮನ್ವಯಮಾಡಿ ಜಾಗ್ರತೆ ಆಗುವಂತೆ ಮಾಡಬೇಕು. ಇದರ ದೆಸೆಯಿಂದ ಒಂದು ಕಾಲಕ್ಕೆ ಮೂರುತಿಂಗಳ special sessionನ್ನು ಕರೆದರೂ ಅಡ್ಡಿಯಿಲ್ಲ. ಕಾಯಿದೆಗಳನ್ನು ಸಮನ್ವಯಗೊಳಿಸದಿದ್ದರೆ ದೇಶದಲ್ಲಿ ಒಂದೊಂದು ಕಡೆಯಲ್ಲಿರುವ ಕಾಯಿದೆಗಳನ್ನು ಒಂದೊಂದು ರೀತಿಯ ಅರ್ಥ ಬರುವಂತೆ interpret ಮಾಡುವಂತಹ ವ್ಯವಸ್ಥೆ ಬರುವುದರಿಂದ ಆಡಳಿತ ನಡೆಸುವುದಕ್ಕೆ ಶಕ್ಯವಿಲ್ಲದಂತಾಗುತ್ತದೆ. ಇವನ್ನೆಲ್ಲ ನಮ್ಮ ನ್ಯಾಯಾಂಗ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ ಇದಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕಾದುದು ಅಗತ್ಯ.

ಎರಡನೆಯದಾಗಿ ಬಹಳ ಮುಖ್ಯವಾದ ನಮ್ಮ ಆಹಾರ ಧಾನ್ಯದ ಕೊರತೆಯ ಮಹತ್ವವಾದ ಜಟಿಲವಾದ ಪ್ರಶ್ನೆಯನ್ನು ಯಾವರೀತಿಯಾಗಿ ಪರಿಹರಿಸಬೇಕೆಂಬ ಬಗ್ಗೆ ಎಷ್ಟೋ ಪ್ರಯತ್ನಗಳನ್ನು ಈ ಸಭೆಯಲ್ಲಿ ಮಂಡಿಸಿದ್ದಾರೆ. ಆದರೆ ನಮ್ಮ ಭಾಗಗಳಲ್ಲಿ ಎಂದರೆ ಧಾರವಾಡ ಜಿಲ್ಲೆಯಲ್ಲಿ ಈಗಲೂ ಪರಂಪರೆಯಾಗಿ ಕಷ್ಟಕ್ಕೆ ಸಿಕ್ಕುತ್ತಿರುವ ಪ್ರದೇಶಗಳನ್ನು ನೋಡಿದರೆ ಇದರಕಡೆ ಹಳೆಯ ರಾಜ್ಯ ಸರ್ಕಾರದವರು ಹೆಚ್ಚು ಲಕ್ಷ್ಯ ಕೊಟ್ಟಿಲ್ಲವೆಂದೆನಿಸುತ್ತದೆ. ಈ ರೀತಿ ಕಷ್ಟಕ್ಕೊಳಗಾಗಿರುವ ಭಾಗಗಳಲ್ಲಿ ಅನೇಕಸಲ ಅಲ್ಲಿಯ ಜನ ಕಾಯಿಲೆಗೆ ತುತ್ತಾಗಿ ಬರಗಾಲದಿಂದ ತೀವ್ರವಾದ ಸಂಕಟಗಳಿಗೆ ಒಳಗಾಗಿರುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತು. ಈ ಸಾರಿ ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಅರವಿಂದ ಪೇಟಕ್ಕೆ ಬಂದಿದ್ದಾಗ ಅಲ್ಲಿನ ಎಷ್ಟೋ ಹಳ್ಳಿಗಳಲ್ಲಿ ಸಂಚಾರ ಕೈಗೊಂಡು ಎಷ್ಟೋ ಹಳ್ಳಿಗಳನ್ನು ನೋಡಿಕೊಂಡು ಬಂದರು. ಅದರಲ್ಲೂ ಮುಖ್ಯವಾಗಿ ಬರಗಾಲಕ್ಕೆ ಸಿಕ್ಕಿದ ಬಿಜಾಪುರ, ಧಾರವಾಡ ಮತ್ತು ಬೆಳಗಾಂ ಪ್ರದೇಶಗಳಿಗೆ ಸಾಕಷ್ಟು ಪರಿಹಾರಕ್ಕೆ ಅವಕಾಶ ಕೊಡುತ್ತಿಲ್ಲ. ಈಚೆಗೇನೋ ಇದನ್ನು ಕೊಡುತ್ತಿದ್ದಾರೆ. ಪ್ರತಿವರ್ಷವೂ ಬರಗಾಲ ಬೆನ್ನು ಹತ್ತಿರುವುದೇ ವಿನಾ ಬಿಟ್ಟಿದ್ದಲ್ಲ. ಇದಕ್ಕೆ ಉತ್ತಮವಾದ ಶಾಶ್ವತವಾದ ಪರಿಹಾರ ಮಾಡುವುದು ಸರಕಾರದ ಮುಖ್ಯ ಕರ್ತವ್ಯ. ಈ ಬಗ್ಗೆ ಮಾನ್ಯ ರಾಮಮೂರ್ತಿ ಕಮಿಟಿಯವರು ಕೂಡ ಸರಕಾರಕ್ಕೆ ಶಿಫಾರಸುಮಾಡಿದ್ದಾರೆ. ಈ ಧಾರವಾಡ ಮತ್ತು ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಿಗೆ ಮುಖ್ಯವಾಗಿ ಮಲಪ್ರಭಾ ಯೋಜನೆಯನ್ನು ಕೈಗೊಳ್ಳಬೇಕೆಂದು ರಾಮಮೂರ್ತಿ ಕಮಿಟಿಯವರೂ ಬರೆದಿದ್ದಾರೆ; ಅದರಂತೆ ಮಲಪ್ರಭಾದ ಯೋಜನೆ ತಯಾರುಮಾಡಿಯೂ ಇಟ್ಟಿದ್ದಾರೆ. ಅನಂತರ ನಮ್ಮ ಹಿಂದಿನ ಮಂತ್ರಿಮಂಡಲದವರು 1957ನೆಯ ಇಸವಿಯಲ್ಲಿ ಪೂರ್ಣವಾದ ಮಲಪ್ರಭಾಯೋಜನೆಯ ಕರಡನ್ನೂ ನಮ್ಮ ಈಗಿನ ಮಂತ್ರಿಗಳ ಕಡೆಗೂ ಕಳುಹಿಸಿ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರೂ ಇದನ್ನು ಪೂರೈಸುವುದಕ್ಕಾಗಿ technical sanctionಅನ್ನೂ ಕೂಡ ಇದರ ಬಗ್ಗೆ ಕೊಡುವುದಾಗಿದೆ ಎಂದು ಹೇಳಿದ್ದಾರೆ.

ಇದು ಈಗ Planning Commissionನ್ನಿನ ಮುಂದಿದೆ. ಈಗಿನಿಂದಲೇ ಇದನ್ನು ಒತ್ತಾಯಮಾಡಿ ಪ್ರಯತ್ನ ಮಾಡಬೇಕಾದುದು ಸರಕಾರದ ಕರ್ತವ್ಯ. ಇವು ಬರಗಾಲದ ಪ್ರದೇಶಗಳು. ಅದಕ್ಕಾಗಿ ಇಲ್ಲಿಗೆ ನೀರಾವರಿಯೋಜನೆಯಿಂದ ಅನುಕೂಲವಿದೆ. ಅಲ್ಲಿ ಗೋಧಿ, ಹತ್ತಿ ಬೆಳೆಯಲುನುಕೂಲವಾಗುವಂತಹ black cotton soil ಇದೆ. ಮತ್ತು ಸಾಕಷ್ಟು ಗೋಧಿಯನ್ನು, ಇಡೀ ರಾಜ್ಯಕ್ಕೆ ಆಗುವಷ್ಟನ್ನು, ಬೆಳೆಯುವಂತಹ ಸುವರ್ಣಭೂಮಿ ಇದೆ. ಇಂತಹ ಉತ್ತಮವಾದ ಭೂಮಿಗೆ ನೀರು ದೊರಕಿಸಿಕೊಡುವ ಜವಾಬ್ದಾರಿ ರಾಜ್ಯಸರಕಾರಕ್ಕೆ ಮಹತ್ವದ್ದಾಗಿದೆ. ಈ ಮಲಪ್ರಭಾಯೋಜನೆಯಂತಹ ನೀರಾವರಿಗಳಿಂದ ಸರಕಾರಕ್ಕೆ ಹೆಚ್ಚಿನ ಖರ್ಚೇನೂ ಆಗುವುದಿಲ್ಲ. ಇಲ್ಲಿ ಒಂದು ಎಕರೆಗೆ ಸುಮಾರು 500 ರೂಪಾಯಿಗಳಷ್ಟು ಖರ್ಚು ಬೀಳತಕ್ಕದ್ದು ಬೇರೆ ಕಡೆ ಯೋಜನೆಗಳಲ್ಲಿ ಒಂದು ಎಕರೆಗೆ 1,000 ರೂಪಾಯಿಗಳ ಮೇಲೆ ಖರ್ಚುಬೀಳುತ್ತದೆ. ಇದಲ್ಲದೆ, ಮೂರುಲಕ್ಷ ಎಕರೆಗಳಿಗಾಗುವಷ್ಟು ನೀರು ನಮ್ಮ ಕಡೆಯಲ್ಲಿರುವ ನವಲುಗುಂದ, ರೋಣ ಮುಂತಾದ ಜಾಗಗಳಿಗೆ ಮತ್ತು ಬಾದಾಮಿ ಕಡೆ ಎಂಬತ್ತುಸಾವಿರ ಎಕರೆ ಪ್ರದೇಶಗಳಿಗೆ ಉಪಯೋಗವಾಗುತ್ತದೆ. ದೇಶದಲ್ಲಿರುವ ಆಹಾರದ ಪರಿಸ್ಥಿತಿಯ ಕೊರತೆ ಇದರಿಂದಲೇ ಸಂಪೂರ್ಣವಾಗಿ ನೀಗಲಿಕ್ಕೆ ಸಾಧ್ಯವೆಂದು ನಿಮಗೆ ಹೇಳಲು ನನ್ನ ಇಚ್ಛೆಯಾಗಿದೆ. ಅದರಂತೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ಹೆಚ್ಚುಶ್ರಮ ತೆಗೆದುಕೊಂಡು ನವಿಲುತೀರ್ಥ, ನವಲುಗುಂದದ ಬಳಿ ಇರುವುದು, ಇದರ ಯೋಜನೆಯನ್ನು ಮಾಡಿದರೂ ದೇಶಕ್ಕೆ ಪ್ರತಿವರ್ಷವೂ ಬರುವ ಬರಗಾಲವನ್ನು ನಿವಾರಣೆ ಮಾಡಲು ಅನುಕೂಲವಾಗುತ್ತದೆ. ಇದರ ಬಗ್ಗೆ ತೀವ್ರವಾಗಿ ಈ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮೂರನೆಯದಾಗಿ, ವೈದ್ಯಕೀಯದ ಬಾಬು ಎಂದರೆ Medical services ಹಳ್ಳಿಯೊಳಗೆ ಹೇಗಿದೆ ಎನ್ನುವುದನ್ನು ನಮ್ಮ ಮಾನ್ಯ ಮಿತ್ರರಾದ ಡಾ॥ ಕರಿಸಿದ್ದಪ್ಪನವರು ಈಗತಾನೇ ಹೇಳಿದರು. ಅರೀತಿಯಾಗಿ ನಮ್ಮ ಗ್ರಾಮಾಂತರ ಭಾಗಗಳಲ್ಲಿಯೂ ವೈದ್ಯಕೀಯ ಸೇವೆ ಅಥವಾ ಡಾಕ್ಟರುಗಳು, ಜನಾರೋಗ್ಯದ ವ್ಯವಸ್ಥೆ ಬಹಳ ಕಡಮೆ ಎಂದು ಈ ಸಭೆಯ ಮುಂದೆ ಇಡಬೇಕಾಗಿದೆ. ಮುಖ್ಯವಾಗಿ ನಮ್ಮಲ್ಲಿ ಸಾಧಾರಣವಾಗಿ ಮೂವತ್ತು ಸಾವಿರ ಜನಸಂಖ್ಯೆಗೆ ಒಬ್ಬ ಡಾಕ್ಟರಿರುತ್ತಾರೆ. ಹಳೆಯ ಮೈಸೂರಿನಲ್ಲಿ ಎಂಟು ಹತ್ತು ಸಾವಿರ ಜನಕ್ಕೆ ಒಬ್ಬ ಡಾಕ್ಟರಿದ್ದಾರೆ ಎಂದು ಲೆಕ್ಕಗಳಿಂದ ತಿಳಿದುಬರುತ್ತದೆ. Health units ಬೆಂಗಳೂರು ಜಿಲ್ಲೆಯಲ್ಲೇ 14 ಇವೆ. ಮೈಸೂರಿನಾ 14 ಇವೆ. ನಮ್ಮ ಕಡೆಗಳಲ್ಲಿ ಎಂದರೆ ಧಾರವಾಡ, ಬಿಜಾಪುರ ಮತ್ತು ಬೆಳಗಾಂ ಕಡೆಗಳಲ್ಲಿ ಏಳಿವೆ. ಶಿವಮೊಗ್ಗದಲ್ಲಿ 52 health unitsಗಳಿವೆ. ಇನ್ನು ನಮ್ಮ ಕಡೆಯ ಮಲೆನಾಡು ಭಾಗಗಳಾದ ಮೂರು ಜಿಲ್ಲೆಗಳಲ್ಲಿ ನೋಡಿದರೂ ಇಪ್ಪತ್ತೈದಕ್ಕಿಂತಲೂ ಕಡಮೆ ಇದೆ. ಇನ್ನು ಹೊಸದಾಗಿ ನಮ್ಮಕಡೆಗೆ ಕಣ್ಣಿಟ್ಟು ತೀವ್ರವಾಗಿ ಈ ರೀತಿಯಾದ ಹೆಲ್ತ್‌ಯೂನಿಟ್ಟುಗಳನ್ನು ಸ್ಥಾಪಿಸಬೇಕೆಂದು ನಾನು ಇಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ವೈದ್ಯಕೀಯ ಶಿಕ್ಷಣದ ಬಗ್ಗೆ ಹೇಳುವುದಾದರೆ, ವಿದ್ಯಾರ್ಥಿಗಳಿಗೆ ಓದಲು ಜಾಗಗಳು ಸಿಕ್ಕದೆ ಎಷ್ಟೋಕಡೆಗಳಿಂದ ತ್ರಾಸುಪಟ್ಟು ಇಲ್ಲಿಗೆ ಬಂದು ಡಾಕ್ಟರುಗಳಾಗಬೇಕು ಎಂದು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಈಗ ನಮಗೆ ಸುಮಾರು 400-500 ಮಂದಿ ಡಾಕ್ಟರುಗಳಾದರೂ ಬೇಕು ಎಂದು ಸರಕಾರ ಹೇಳುತ್ತಿರುವಾಗ ಸಾಕಷ್ಟು ಕಾಲೇಜುಗಳಲ್ಲಿ ಅವಕಾಶಗಳು ಸಿಕ್ಕಿದ್ದರೆ ನಮ್ಮ ಬಳ್ಳಾರಿ ಜಿಲ್ಲೆಯಲ್ಲೇ ಹೆಚ್ಚಿನ ಜನರಿಗೆ ಉಪಯೋಗವಾಗುತ್ತಿತ್ತು. ಈ ರೀತಿಯ ತೊಂದರೆಗಳಿರುವುದರಿಂದ ಬಳ್ಳಾರಿಯಲ್ಲಿಯೂ ಕೂಡ ಒಂದು Medical Collegeನ್ನು ಸ್ಥಾಪಿಸಬೇಕೆಂದು ಸೂಚಿಸುತ್ತೇನೆ. ಇದಕ್ಕಾಗಿ ಹೆಚ್ಚಿನ ಖರ್ಚಾದರೂ ಚಿಂತೆಯಿಲ್ಲ. ಈ ಬಾಬಿನಲ್ಲಿ ಉಳಿತಾಯ ಮಾಡಬಾರದು. ಆದ್ದರಿಂದ ಇಂತಹ Medical College ಅತ್ಯಾವಶ್ಯಕವೆಂದು ನಾನು ಹೇಳುತ್ತೇನೆ.

ಇನ್ನು ಈ ಇಲಾಖೆಯೊಳಗೆ Hubli Medical Collegeನಲ್ಲಿ ಅಲ್ಲಿಯ staff ಮತ್ತು doctorsಗಳಿಗೆ ಕೊಡುತ್ತಿರುವ ಪಗಾರ ಎಂದರೆ ಸರಿಯಾದ Scales ಗಳನ್ನು ಕೊಡದೆ ಇರುವುದರಿಂದ ಅವರ ಮನಸ್ಸಿಗೆ ಬಂದಂತೆ ಕೆಲಸಗಳು ನಡೆಯುತ್ತಿವೆ. ಅಲ್ಲಿಯ ವಿದ್ಯಾರ್ಥಿಗಳಿಂದ, ಎಷ್ಟೋ ಸಾರ್ವಜನಕರಿಂದ ದೂರುಗಳು ಬಂದರೂ ಕೂಡ ಅದರ ಕಡೆ ಅಷ್ಟು ಲಕ್ಷ್ಯ ವಹಿಸಿಲ್ಲ. ಈ ಮೆಡಿಕಲ್ ಕಾಲೇಜಿನಲ್ಲಿ ಅಲ್ಲಿನ staffಗೆ ಸರಿಯಾದ scale ಕೊಟ್ಟಿಲ್ಲ. ಅದರ ಬಗ್ಗೆ ಆರೋಗ್ಯ ಮಂತ್ರಿಗಳಿಗೆ ನಾನು ಎಷ್ಟೋ ಹೇಳಿದರೂ ಅವರು ಗಮನಕೊಟ್ಟಿಲ್ಲ. ಇನ್ನಾದರೂ ಶೀಘ್ರದಲ್ಲೇ ಉತ್ತಮ staff ಅಲ್ಲಿಗೆ ಕೊಡಬೇಕಲ್ಲದೆ ಸರಿಯಾದ ಪ್ರೊಫೆಸರುಗಳನ್ನೂ ಡೆಮಾನ್‌ಸ್ಟ್ರೇಟರುಗಳನ್ನೂ ನೇಮಿಸಿ ಸರಿಯಾದ ಸ್ಕೇಲುಗಳನ್ನು sanctionಮಾಡಿ ಅದನ್ನು ಪರಿಪೂರ್ಣವಾದ ವಿದ್ಯಾಸಂಸ್ಥೆಯನ್ನಾಗಿಮಾಡಿ ಜನರಿಗೆ ಅನುಕೂಲ ಮಾಡಬೇಕೆಂದು ಹೇಳುತ್ತೇನೆ. ಅದರಂತೆಯೇ ನಮ್ಮ ಕಡೆ ಹಳ್ಳಿಯ ಜನರಿಗೆ ಹೆಚ್ಚಿನ ವೈದ್ಯಕೀಯ ಸಹಾಯ ಬೇಕೆಂದು ಕೇಳುತ್ತಿದ್ದೇವೆ. ಇನ್ನಾದರೂ ಆ ಬಗ್ಗೆ ಗಮನಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶಿಕ್ಷಣದ ವಿಷಯವನ್ನು ಕುರಿತು ಒಂದೆರಡುಮಾತುಗಳನ್ನು ಹೇಳಬಯಸುತ್ತೇನೆ. ಶಿಕ್ಷಣ ಪದ್ಧತಿಯೆಂಬುದು ನಮ್ಮ ಇಡೀ ರಾಜ್ಯಕ್ಕೆ ಅನ್ವಯಿಸುವುದಾದಂಥ ಅತಿ ಮಹತ್ವದ ಪ್ರಶ್ನೆ. ಇದನ್ನು ಹಿಂದಿನ ಮಂತ್ರಿ ಮಂಡಳದವರೇ ಅತ್ಯಂತ ತೀವ್ರಗತಿಯಿಂದ ಮಾಡಬೇಕಾಗಿತ್ತು. ಅಂಥಾದ್ದು ಇನ್ನೂ ಕುಂಠಿತವಾಗಿ ಉಳಿದಿದೆ. ಈ ಸಂಬಂಧದಲ್ಲಿ ಹಿಂದೆಯೇ ಇಂಟಿಗ್ರೇಷನ್ ಕಮಿಟಿಯೆಂದು ಮಾಡಿತ್ತು. ಅದರ ರಿಪೋರ್ಟ್ ಏನಾಯಿತು, ಅದೇನಾದರೂ ಕಾರ್ಯಕ್ರಮ ನಡೆಸಿತೇ, ಇಲ್ಲವೇ ಎಂಬುದಾವುದೂ ಈ ಸಭೆಯ ಮುಂದೆ ಬಂದಿಲ್ಲ. ಇಂದು ಮೈಸೂರು ದೇಶದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಶಿಕ್ಷಣ ಯಾವ ರೀತಿಯಿದೆ ಎಂದರೆ, ಮೈಸೂರುದೇಶದಲ್ಲಿ ಐದು ತೆರದ ರೀತಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ನಡೆಯುತ್ತಿದೆ. ಇವನ್ನೆಲ್ಲಾ ಸಮನ್ವಯಗೊಳಿಸುವುದಕ್ಕೆ ಎಷ್ಟು ವರ್ಷಗಳು ಬೇಕು? ಈಗಾಗಲೇ ಎರಡುವರ್ಷಗಳಾದವು. ಇನ್ನೂ ಎರಡುವರ್ಷಬೇಕೆಂದರೆ, ಇದುವರೆಗೂ ಮಾಡಿದ್ದೇನು? ಪ್ರೈಮರಿ ವಿದ್ಯಾಭ್ಯಾಸದ ಆಕ್ಟು ಇನ್ನೂ ತಯಾರಿಸಿಲ್ಲವಲ್ಲ! ಅದರ ರೂಪರೇಖೆಗಳೂ ತಯಾರಾಗಿಲ್ಲವಲ್ಲ! ನಾನು ಒಂದೆರಡುಸಾರಿ ವಿದ್ಯಾಮಂತ್ರಿಗಳಲ್ಲಿಗೆ ಹೋಗಿ ಹೇಳಿದ್ದಕ್ಕೆ ಅವರು ಹೇಳಿದರು "Government will take over primary education" ಎಂದು. In what way thay take over ಎಂದು ಗೊತ್ತಾಗುತ್ತಿಲ್ಲ. ನಮ್ಮ ಕಡೆ District Board schools ಎಂದು ಇದ್ದು ಅವು ತಕ್ಕಷ್ಟು ಉತ್ತಮವಾಗಿ ನಡೆಯುತ್ತಿದ್ದುವು.

(ಶ್ರೀ ಎ. ಎಸ್. ಪಾಟೀಲ್)

ಹೀಗಿರುವಲ್ಲಿ ಈಗ ಸರ್ಕಾರದವರು ಅದರ ಅಧಿಕಾರವನ್ನೆಲ್ಲಾ ತಾವೇ ವಹಿಸಿಕೊಂಡು, non-official control ಇದ್ದುದನ್ನು ತೆಗೆಯುವುದಾದರೆ, ಆ ರೀತಿ ನಮ್ಮ ಭಾಗಕ್ಕೆ ಒಗ್ಗುವುದಿಲ್ಲ. ಜನಸಾಮಾನ್ಯರಿಗೆ ಇವುಗಳ ಮೇಲೆ ಇದುವರೆಗೂ ಯಾವ control ಹಕ್ಕಿತ್ತು, ಸ್ಥಳೀಯ ಸಂಸ್ಥೆಗಳಿಗೆ ಈ ಸ್ಕೂಲುಗಳ ಮೇಲ್ವಿಚಾರಣೆಯ ವಿಷಯದಲ್ಲಿ ಏನು ಹಕ್ಕಿತ್ತು ಅದನ್ನು ತಾವು ನಿರ್ನಾಮಮಾಡಬಾರದು.

ಶ್ರೀ ಅಣ್ಣಾರಾವ್ ಗಣಮುಖಿ (ವಿದ್ಯಾ ಇಲಾಖೆಯ ಮಂತ್ರಿಗಳು).—ಏನಾದರೂ ಸಲಹೆ ಹೇಳಲಿಲ್ಲವಲ್ಲ! ಅಲ್ಲಿಯ ಪದ್ಧತಿ ಇಲ್ಲಿಗೆ ಬರಬೇಕೆಂತಲೇ, ಇಲ್ಲಿಯ ಪದ್ಧತಿ ಅಲ್ಲಿಗೆ ಬರಬೇಕೆಂತಲೇ ನೀವು ಹೇಳುವುದು ?

ಶ್ರೀ ಎ. ಎಸ್. ಪಾಟೀಲ್.—ನಮ್ಮಲ್ಲಿ ತಾಲ್ಲೂಕ್ ಬೋರ್ಡ್ ಎಂದಿದೆ. ಇಲ್ಲಿ ನೀವು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಎಂದು ಮಾಡಿದ್ದೀರಿ. ತಾವು ಆ ತಾಲ್ಲೂಕ್ ಬೋರ್ಡಿಗೆ ಪ್ರಾತಿನಿಧ್ಯ ಕೊಟ್ಟು ಅಥವಾ ನಾಮಿನೇಷನ್ ಆದರೂ ಮಾಡಿ, ಆ ಬೋರ್ಡಿನ ಘಟನೆಯನ್ನು ಉಳಿಸಬೇಕೆಂದು ನಾನು ಸವಿನಯದಿಂದ ಪ್ರಾರ್ಥಿಸುತ್ತೇನೆ. ತಾವೀಗ ಸರ್ಕಾರಿ ಅಧಿಕಾರಿಗಳನ್ನಿಡುತ್ತೇವೆ, ಈ ಪ್ರೈಮರಿ ಶಾಲೆಗಳೆಲ್ಲವನ್ನೂ ನಾವೇ ಮೇಲ್ವಿಚಾರಣೆ ನಡೆಸುತ್ತೇವೆ ಎಂದು ಹೇಳುವುದಾದರೆ, ಜನಸಾಮಾನ್ಯರಿಗೆ ಇಂಥ ಸ್ಕೂಲುಗಳ ಮೇಲೆ ಇದ್ದ ಅಧಿಕಾರ ಹೋಗಿ ಅವುಗಳ ಆಡಳಿತ ಸರಿಯಾಗಿ ನಡೆಯುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಈಗಲೂ ಪ್ರೈಮರಿ ಎಜುಕೇಷನ್ ಇಲಾಖೆ ಸರ್ಕಾರದವರ ಕೈಯಲ್ಲೇ ಇದೆಯಲ್ಲ!

ಶ್ರೀ ಎ. ಎಸ್. ಪಾಟೀಲ್.—ಸರ್ಕಾರದವರು ಯೂನಿವರ್ಸಿಟಿ ವಿದ್ಯಾಭ್ಯಾಸವನ್ನು ಜನರ ಆಡಳಿತಕ್ಕೆ ಕೊಡುತ್ತೇವೆ. ಪ್ರೈಮರಿ ವಿದ್ಯಾಭ್ಯಾಸವನ್ನು ತಾವು ತೆಗೆದುಕೊಳ್ಳುವುದಾಗಿ ಹೇಳುತ್ತಿದ್ದೀರಿ. ಇದು ಸರಿಯಲ್ಲ. ಏಕೆಂದರೆ, ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವೆಂಬುದು ಜನಸಾಮಾನ್ಯರಿಗೆ ಸಂಬಂಧಪಟ್ಟಂಥ ಪ್ರಶ್ನೆ. ಇಂಥದರ ಮೇಲೆ ಜನರ ಅಧಿಕಾರವಿರಬೇಕೇ ಹೊರತು, ನಮ್ಮ ಊರಿನ ಪ್ರಾಥಮಿಕ ಶಾಲೆಯ ಪರಿಸ್ಥಿತಿ ಏನು ಎಂದು ವಿಚಾರಿಸಿಕೊಳ್ಳುವ ಹಕ್ಕು ಅವರಿಗೆ ಇರಬೇಕೇ ಹೊರತು, ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದ ವಿಷಯದಲ್ಲಿ ಅಧಿಕಾರವಿದ್ದು ಹೆಚ್ಚಿನ ಪ್ರಯೋಜನವಾಗಲಾರದು. ಆದ್ದರಿಂದ ಪ್ರಾಥಮಿಕ ಶಾಲೆಗಳ ಮೇಲಿನ ಹಕ್ಕು ಸಾರ್ವಜನಿಕರಿಗೆ ಇರುವಂತೆ ಮಾಡಬೇಕೆಂದು ಹೇಳುತ್ತೇನೆ.

ವ್ಯವಸಾಯದ ಬಗ್ಗೆ ಕೆಲವು ಸೂಚನೆಗಳನ್ನು ಸಭೆಯ ಮುಂದಿಡಬೇಕೆಂದು ನಾನು ಇಚ್ಛಿಸುತ್ತೇನೆ. ನಮ್ಮ ಭಾಗದಲ್ಲಿ ವ್ಯವಸಾಯ ಇಲಾಖೆಯವರು ನಡೆಸುತ್ತಿರುವ ಆಡಳಿತದ ಬಗ್ಗೆ, ಅವರು ಏರ್ಪಡಿಸುತ್ತಿರತಕ್ಕ ಸಂಶೋಧನಾ ಸಮಿತಿಗಳ ಬಗ್ಗೆ ಮತ್ತು seed farms ಬಗ್ಗೆ ರೈತರಿಗೆ ಹೆಚ್ಚಿನ ನಿರಾಶೆಯುಂಟಾಗಿದೆ. ನಮ್ಮ ಮುಂಬಯಿ ಭಾಗದಲ್ಲಿ ಉತ್ತಮ ರೀತಿಯಲ್ಲಿ ಇದ್ದಂಥ ರಿಸರ್ಚ್ ಫಾರಮ್‌ಗಳ ಆಡಳಿತ ಈಗ ಯಾವ ಕಾರಣದಿಂದಲೋ ಹೀನಸ್ಥಿತಿಗೆ ಬಂದಿದೆ. ಗೋಧಿ ನಮ್ಮ ಕಡೆ ಒಂದು ಮುಖ್ಯ ಬೆಳೆ. ಧಾರವಾಡ ಕೇಂದ್ರದಲ್ಲಿ ಗೋಧಿಯ ಬಗ್ಗೆ ಸಂಶೋಧನೆ ನಡೆಯುತ್ತಿತ್ತು. ಇತ್ತೀಚೆಗೆ ವ್ಯವಸಾಯದ ಅಧಿಕಾರಿಗಳು ಈ ಬಗ್ಗೆ ಏನೂ ಮನಸ್ಸು ಕೊಟ್ಟಿಲ್ಲವೆಂದು ಕಾಣುತ್ತವೆ. ನಿಫಾ. ನಂ (4) ಗೋಧಿಯ ವಿಚಾರದಲ್ಲಿ ಸಂಶೋಧನೆ ನಡೆಸಿ ಗೋಧಿ ಬೆಳೆಗೆ ಬರತಕ್ಕ ರೋಗವನ್ನು ತಡೆಗಟ್ಟುವುದನ್ನು ಪರಿಶೀಲಿಸುತ್ತಿದ್ದರು. ಗೋಧಿಯು ನಮಗೆ ಆಹಾರದ ಬೆಳೆಯೇ ಅಲ್ಲದೆ, ಹಣಬರುವ ಬೆಳೆಯೂ ಆಗಿದೆ. ಇದರ ಸಂಶೋಧನೆಯ ಬಗ್ಗೆ 1000 potಗಳನ್ನು ಮಹಾಬಲೇಶ್ವರಕ್ಕೆ ಕಳುಹಿಸಿಕೊಡಬೇಕೆಂದಿದ್ದುದು ಈಗ್ಗೆ 200 potsಮಾತ್ರ ಕಳುಹಿಸಿ ಎಂದು ಹೇಳಿದ್ದಾರೆ. ಇದನ್ನು ನೋಡಿಕೊಂಡು ನಾವೇ ಒಂದು ರಿಸರ್ಚ್ ಸೆಂಟರನ್ನು ಮಾಡಬೇಕಾಗಿತ್ತು. ಅದನ್ನು ಮಾಡಿಲ್ಲ. ಅದರಂತೆಯೇ ನಮ್ಮ ಭಾಗದಲ್ಲಿ ಜೋಳಕ್ಕೆ ಒಂದುತರದ ರೋಗ ಬರುತ್ತಿದೆ. ಹತ್ತಿಯಲ್ಲೂ ಜಯಧರ್ ಮತ್ತು ಲಕ್ಷ್ಮಿ ಹತ್ತಿಗೆ ಸಿಡಿರೋಗವೆಂಬುದು ಪದೇ ಪದೇ ಬರುತ್ತಿದೆ. ಇದರ ಕಡೆಗೆ ತಾವು ಗಮನಕೊಟ್ಟಿಲ್ಲ. ಆದ್ದರಿಂದ ಸರ್ಕಾರದವರು ಈ ಸಂಶೋಧನೆಗಳ ಕಡೆಗೆ ಹೆಚ್ಚಿಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ. ಹಣಕಾಸಿನ ಮಂತ್ರಿಗಳನ್ನು ಈ ಬಗ್ಗೆ ಕೇಳಿದಾಗ ಅವರು ಹೇಳಿದರು, ಬಡ್ಜೆಟ್ಟಿನಲ್ಲಿ ಅದಕ್ಕೆ provisionಮಾಡಿದ್ದೇವೆ ಎಂದು. ನಾನು ಬಡ್ಜೆಟ್ಟನ್ನೆಲ್ಲಾ ಹುಡುಕಿದ್ದರಲ್ಲಿ ಬಡ್ಜೆಟ್ ಮೆಮೊರಾಂಡಮ್ಮಿನ 123ನೆಯ ಪುಟದಲ್ಲಿ 1957-58ಕ್ಕೆ ನ್ಯಾಷನಲ್ ವಾಟರ್‌ಸಪ್ಲೈ ಸ್ಕೀಮಿಗೆಂದು 2,34,000 ರೂಪಾಯಿಗಳನ್ನು ಕೊಟ್ಟಿರುವಂತೆ ಕಾಣುತ್ತದೆ. 1959-60ಕ್ಕೆ ಏನೂ ಕೊಟ್ಟೇ ಇಲ್ಲ.

ಶ್ರೀ ಟಿ. ಸುಬ್ರಹ್ಮಣ್ಯ.—156ನೆಯ ಪುಟವನ್ನು ನೋಡಿ. ಹಾಗೆಯೇ 264ನೆಯ ಪುಟವನ್ನೂ ನೋಡಿ. Grants for water supply ಎಂದು ಕೊಟ್ಟಿದೆ.

ಶ್ರೀ ಎ. ಎಸ್. ಪಾಟೀಲ್.—ಆಮೇಲೆ, ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಮ್ಮ ಭಾಗದಲ್ಲಿ ಸ್ಟೇಟ್ ರೋಡ್‌ಟ್ರಾನ್ಸ್‌ಪೋರ್ಟಿನ ವ್ಯವಸ್ಥೆ ಒಂದು ನಮೂನೆಯಾಗಿದೆ. ನಮ್ಮ ಭಾಗದಲ್ಲಿ ಲೈಸೆನ್ಸ್ ತೆಗೆದುಕೊಂಡು ರೋಡ್‌ಟ್ರಾನ್ಸ್‌ಪೋರ್ಟ್ ನಡೆಸಬೇಕೆಂದಿದೆ. ಮೈಸೂರು ದೇಶದಲ್ಲಿ ಎಲ್ಲಕಡೆಯಲ್ಲಿಯೂ ಒಂದೇ ರೀತಿಯಲ್ಲಿನ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಈ ಬಗ್ಗೆ ಆದಷ್ಟು ತೀವ್ರವಾಗಿ ದಕ್ಷತೆಯನ್ನು ವಹಿಸಿ ರೋಡ್‌ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನನ್ನು ಮಾಡಬೇಕೆಂದು ಹೇಳುತ್ತೇನೆ. ಒಂದು ಕಡೆ ಲೈಸೆನ್ಸ್ ಇರಬೇಕೆಂದು ವಿಧಿಸಿರುವುದು, ಇನ್ನೊಂದು ಕಡೆ ಲೈಸೆನ್ಸ್ ಬೇಕಿಲ್ಲವೆನ್ನುವುದು ಸರಿಯಲ್ಲ.

ಶ್ರೀ ಬಿ. ಡಿ ಜತ್ತಿ.—ಲೈಸೆನ್ಸ್ ಬಗ್ಗೆ ತಾವು ಏನು ಹೇಳುತ್ತಿದ್ದೀರೋ ಅದನ್ನು ಸರಿಯಾಗಿ ಹೇಳಿ.

11-30 A.M.

ಶ್ರೀ ಎ. ಎಸ್. ಪಾಟೀಲ್.—ಇಲ್ಲಿ ಪ್ರೈವೇಟ್ ಆಪರೇಟರುಗಳಿಗೆ ಕೊಡುತ್ತೀರಿ. ಪ್ರಭಾವವುಳ್ಳ ಜನರು ಸರ್ಕಾರದ ಎದುರಿಗೆ ಬಂದರೆ, ಇಲ್ಲಿ ಕೊಟ್ಟು ಬಿಡುತ್ತೀರಿ. ಅತ್ತಲಾಗಿ ತೆಗೆದುಹಾಕಿಬಿಡುತ್ತೀರಿ.

ಶ್ರೀ ಬಿ. ಡಿ. ಜತ್ತಿ.—ಸರ್ಕಾರದವರು ಲೈಸೆನ್ಸ್ ಕೊಡುವುದಿಲ್ಲ. R.T.A., S.T.A. ಕೊಡುತ್ತಾರೆ.

ಶ್ರೀ ಎ. ಎಸ್. ಪಾಟೀಲ್.—ಯಾರೇ ಕೊಡಲಿ, ಅವರು ಸರ್ಕಾರಕ್ಕೆ ಸೇರಿದವರು. ರೋಡ್ ಟ್ರಾನ್ಸ್‌ಪೋರ್ಟನ್ನು ತೀವ್ರವಾಗಿ ರಾಷ್ಟ್ರೀಕರಣಮಾಡಬೇಕು. ಚೀಫ್ ಮಿನಿಸ್ಟರು ರಾಷ್ಟ್ರೀಕರಣಮಾಡಲಿಕ್ಕೆ ಒಲ್ಲೆ ಅನ್ನುವುದಿಲ್ಲ. ನನಗೆ ಗೊತ್ತು. ಆದರೆ ಜಾಗ್ರತೆ

ಮಾಡಬೇಕು. ಯಾವ ರೀತಿ ಅಡಚಣೆಗಳು ಅದಕ್ಕೆ ಬರುತ್ತಿವೆ ಎನ್ನುವುದು ನಮಗೆ ಗೊತ್ತಿಲ್ಲ. ಲೈಸೆನ್ಸು ಹೋಲ್ಡರುಗಳಿಗೆ ಫಾರಿನ್ ಎಕ್ಸ್ಚೇಂಜ್ ಕಷ್ಟದಿಂದ ಮೋಟಾರು ಪಾರ್ಟುಗಳು ಸಿಕ್ಕುವುದಿಲ್ಲ. ರಾಷ್ಟ್ರೀಕರಣವನ್ನು ಅರ್ಥವಾರ್ಥಮಾಡಬಾರದು. ಬಸ್ ಜನರುಗಳಿಗೆ ಫಾಯಿದೆ ಇರಬಾರದು. ರಾಷ್ಟ್ರೀಕರಣ ಮಾಡುವ ಉದ್ಯಮಗಳನ್ನು ತೀವ್ರಗತಿಯಿಂದ ರಾಷ್ಟ್ರೀಕರಣಮಾಡಬೇಕು.

ಇವತ್ತಿನ ದಿವಸ, ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟ ಸಭಾಧ್ಯಕ್ಷರನ್ನು ಅಭಿನಂದಿಸುತ್ತೇನೆ.

ಶ್ರೀ ಬಿ. ಜಿ. ಖೋತ್ (ಸಾದಲ್ಗ).—ಮಾನ್ಯ ಅಧ್ಯಕ್ಷರೆ, ಈ ಬಡ್ಜೆಟ್ ದೆಶೆಯಿಂದ ಒಂದು ನಾಲ್ಕು ಮಾತು ಹೇಳತಕ್ಕದ್ದಿದೆ. ಈ ಪೂರ್ವದಲ್ಲಿ ನನ್ನ ಮಿತ್ರರೆಲ್ಲರೂ ತಮಗೆ ಏನು ಹೇಳಬೇಕಾಗಿದೆಯೋ ಅದನ್ನು ಹೇಳಿಬಿಟ್ಟಿದ್ದಾರೆ. ನಾನು ಹೇಳುವುದೂ ಹೇಳಿಬಿಟ್ಟಿದ್ದಾರೆ. ಎಲ್ಲರ ಊಟ ಆದನಂತರ ಉಳಿದಿದ್ದನ್ನೇ ಊಟಮಾಡಬೇಕಾಗಿದೆ. ಅದನ್ನೇ ಸವಿ ಮಾಡಿಬಿಟ್ಟು ಊಟ ಮಾಡಬೇಕಾಗಿದೆ.

ಯಾವ ಗವರ್ನಮೆಂಟೇ ಇರಲಿ ಪ್ರೆಸಿಡೆಂಷಿಯಲ್ ಗೌರ್ನಮಂಟ್ ಇರಲಿ ಅಥವಾ ಪಾರ್ಲಿಮೆಂಟ್ ಸೆಟ್ ಅಪ್ ಇರುವ ಗವರ್ನಮೆಂಟಿರಲಿ ಅಥವಾ ಆಟೋಕ್ರಾಟಿಕ್ ಗವರ್ನಮೆಂಟಿರಲಿ ಪ್ರತಿಯೊಂದು ಗವರ್ನಮೆಂಟಿಗೂ orderly finance keep up ಮಾಡುವ ದೆಶೆಯಿಂದ, ಬಡ್ಜೆಟ್ ಬೇಕೇ ಬೇಕು. ಫೈನಾನ್ಸ್ ಸುವ್ಯವಸ್ಥಿತವಾಗಿ ನಡೆಯಬೇಕಾದರೆ, ಬಡ್ಜೆಟ್ಟು ಬೇಕು.

ಈ ಬಜೆಟ್ಟು ಏನು ಮಾಡುತ್ತದೆ ಎಂದರೆ ಇದು ಒಂದು ಯಂತ್ರ ಇದ್ದ ಹಾಗೆ. It is the main vehicle in the hands of the Legislature to control the activities of the Government. ಈ ಬಜೆಟ್ಟೊಳಗೆ ಹಣವನ್ನು ಎಲ್ಲ ರೀತಿಯಿಂದ, ವ್ಯವಸ್ಥಿತವಾಗಿ, ವಿಶಿಷ್ಟ ಕಾರ್ಯಕ್ಕೆ ಖರ್ಚುಮಾಡಬೇಕು ಎಂದು, ಸ್ಪಷ್ಟ ರೀತಿಯಲ್ಲಿ ಡಿಫೈನ್ ಮಾಡಬೇಕಾದ್ದು ಅದರ ಆಬ್ಜೆಕ್ಟೀವ್. ಇದೂ ಅಲ್ಲದೆ, ವಿಶಿಷ್ಟ ಕಾರ್ಯಕ್ಕೆ ಎಷ್ಟೆಷ್ಟು ಖರ್ಚುಮಾಡಬೇಕೆಂದು ಬಜೆಟ್ ನಿರ್ಬಂಧ ಹಾಕಿಕೊಡುತ್ತದೆ. ಪ್ರೋಗ್ರೆಸ್ಸಿಗೇ ಆಗಲೀ orderly finance ಕೀಪ್ ಅಪ್ ಮಾಡುವುದಕ್ಕೆ, ಆಗಲಿ ಪ್ರತಿಯೊಂದು ರಾಜ್ಯಕ್ಕೂ ಬಜೆಟ್ಟು ಅತ್ಯಾವಶ್ಯಕ.

ಬಜೆಟ್ಟು ಮತ್ತೊಂದು ಏನು ಮಾಡುತ್ತದೆ ಎಂದರೆ; It is the instrument of social policy ಇದು ಒಂದು instrument ಇದೆ. We will realise the plans enunciated or to be enunciated by the Government in increasing the productions, both in agriculture and industries. ಇದನ್ನು ಸುಲಭವಾಗಿ ಮಾಡಿಕೊಡಬೇಕು. ಇದೂ ಅಲ್ಲದೆ ಎಕನಾಮಿಕ್ ಡಿಸ್‌ಪ್ಯಾರಿಟೀಸ್ ರಿಮೂವ್ ಮಾಡುವ ದಿಶೆಯಿಂದ ಸರ್ಕಾರದವರು ಯಾವ ಯಾವ ರೀತಿಯಾಗಿ ಟ್ಯಾಕ್ಸೇಷನ್ ಮಾಡುತ್ತಾರೋ, ಮನಿ ಯುಟಿಲೈಸ್ ಹೇಗೆ ಮಾಡಿಕೊಳ್ಳುತ್ತಾರೋ, ಅದನ್ನು ದಿಗ್ದರ್ಶನ ಮಾಡುತ್ತದೆ; ಮತ್ತು ಎಂಪ್ಲಾಯ್‌ಮೆಂಟ್ ಮೆಂಟೇನ್ ಮಾಡುವುದನ್ನು ಕುರಿತು ಪಬ್ಲಿಕ್ ವರ್ಕ್ಸ್ ಏನೇನು ಸೆಟ್ ಅಪ್‌ಮಾಡಿರುತ್ತದೆ, ಇದನ್ನು ದಿಗ್ದರ್ಶನ ಮಾಡುತ್ತದೆ. ಯಾವ ಪ್ರಕಾರದ ಗವರ್ನಮೆಂಟೇ ಇರಲಿ, ಇದು ಅವಶ್ಯಕ. ಬ್ರಿಟಿಷರ ರಾಜ್ಯದ ಕಾಲದಿಂದ ಇಲ್ಲಿಯವರೆಗೆ, ಇದು ರಾಜ್ಯ ಕಾರ್ಯಭಾರದ ಒಂದು ಅಧಿದೇವತೆಯಾಗಿದೆ.

ಈ ಬಜೆಟ್ಟಿನ ಈ ಮೂಲ ಉದ್ದೇಶವನ್ನು ಅನುಸರಿಸಿ ನಮ್ಮ ಬಜೆಟ್ಟು ಎಷ್ಟರಮಟ್ಟಿಗೆ ಕೂಡುತ್ತದೆ ಎನ್ನುವುದನ್ನೇ ವಿಚಾರಮಾಡಬೇಕಾಗಿದೆ.

ನಮ್ಮ ಫೈನಾನ್ಸ್ ಮಿನಿಸ್ಟರು ಮುಂದಿಟ್ಟಿರುವ ಬಜೆಟ್ಟಿನಿಂದ, ನನ್ನಷ್ಟಕ್ಕೆ ಹೇಳುವುದಾದರೆ, ಅನೇಕ ಅಂಶಗಳಲ್ಲಿ ಈ ಬಜೆಟ್ಟು ಸುಂದರವಾಗಿದೆ, ಸರಳವಾಗಿದೆ, ಪ್ರಾಮಾಣಿಕವಾಗಿದೆ; ಸತ್ಯವನ್ನು ಅನುಸರಿಸಿ ವಸ್ತುಸ್ಥಿತಿಯ ನಿರ್ದೇಶಕವಾಗಿದೆ ಮತ್ತು ಮಾರ್ಗದರ್ಶಕವಾಗಿವೆ. ಆದರೂ ಒಂದು ಖೇದದ ವಿಷಯ No new policies have been enunciated. ಎರಡು ವರ್ಷಗಳಿಂದ ನನಗೆ ಇಲ್ಲಿಯ ಸಂಬಂಧ ಬಂದದೆ. ಹಿಂದಿನ ಎರಡು ವರ್ಷಗಳ ಅವಧಿಯಲ್ಲಿ ಬಂದ ಬಜೆಟ್ಟಿಗೆ ಅನುಸಾರವಾಗಿದೆಯೇ ಹೊರತು, ಪಾಲಿಸಿಯೊಳಗೆ ವಿಶೇಷ ಚೇಂಜ್ ಇದೆ ಎಂದು ನನಗೆನಿಸುವುದಿಲ್ಲ.

[MR. DEPUTY SPEAKER in the Chair]

The thing that has to be seen is whether any new policies have been enunciated in the Budget. ಈ ಬಡ್ಜೆಟ್ಟೊಳಗೆ ಏನೂ ನ್ಯೂಪಾಲಿಸಿಗಳು ಆಗಿವೆ ಎಂದು ಅನಿಸುವುದಿಲ್ಲ; ಈ ಗುಣಗಳು ಇದರಲ್ಲಿ ಅಡಕವಾಗಿಲ್ಲ. ಭಾರಿ ದೋಷದಿಂದ ಕೂಡದೇ ಇದ್ದರೂ. ಸಾಧಾರಣ ತರ್ಕ ರೀತಿಯಿಂದ ಈ ಬಡ್ಜೆಟ್ಟು ಸಾಮಾನ್ಯವಾಗಿ ಫರ್ಮಿನಲ್ಲಿ ಮುನಿಮರು ಜಮಾ ಖರ್ಚು ಹೇಗೆ ಇಡಬೇಕೋ ಆ ರೀತಿ ಇದೆ.

ಈ ಬಡ್ಜೆಟ್ಟಿನ ಮೆರಿಟ್ಸ್ ಎಂದರೆ ಇದು ಸರಳವಾಗಿ ಸತ್ಯವನ್ನು ಅನುಸರಿಸಿ ಇದೆ. ವಸ್ತುಸ್ಥಿತಿ ನಿರ್ದೇಶಕವಾಗಿವೆ ; ಮಾರ್ಗದರ್ಶಕವಾಗಿದೆ. ''ಗುಣೀ ಗುಣಂ ವೇತ್ತಿ'' ಎಂಬ ನ್ಯಾಯತತ್ವಕ್ಕನುಸಾರವಾಗಿದೆ. ದ್ವೇಷ ಏನೇ ಇರಲಿ. ದೋಷ ಇದ್ದರೂ ಗುಣಗ್ರಹಣಮಾಡಬೇಕು, ಎಂದು ಈ ಎಲ್ಲ ವಿಷಯಗಳ ಬಗ್ಗೆ ನಾನು ಅರ್ಥ ಮಂತ್ರಿಗಳಿಗೆ ಧನ್ಯವಾದ ಕೊಡುತ್ತೇನೆ.

ಇಂತಹ ಪರಿಸ್ಥಿತಿಯಲ್ಲಿ ನಾವು ಏನುಮಾಡಬೇಕೆಂಬುದನ್ನು ಯೋಚನೆಮಾಡಬೇಕು. ನನ್ನ ಶಾಂತ ಮನಸ್ಸಿನಿಂದ ಇದನ್ನು ನೋಡಿದರೆ ಇದು ಡಿಫಿಸಿಟ್ ಬಡ್ಜೆಟ್ಟೋ ಅಥವಾ ಸರ್ಪ್ಲಸ್ ಬಡ್ಜೆಟ್ಟೋ ಎಂಬುದು ಅರ್ಥವಾಗುವುದಿಲ್ಲ. ಮುಖ್ಯವಾಗಿ ಅಕೌಂಟ್ ಕೀಪಿಂಗಿನ ವಿಷಯು ಹೆಚ್ಚು ಕ್ಲಿಷ್ಟವಿವೆ. ಇದನ್ನು ಹೆಚ್ಚು ಸುಗಮವಾಗಿ ಮಾಡಿಕೊಡಬೇಕು. ಈಗಿನ ಅಕೌಂಟ್ ಕೀಪಿಂಗ್ ಮೆಥಡ್ಸನ್ನು ಬದಲಾವಣೆಮಾಡಬೇಕೆಂದು ಸೂಚಿಸುತ್ತೇನೆ. ಏಕೆಂದರೆ ನಾರ್ಮಲ್ ರೆವಿನ್ಯೂ, ನಾರ್ಮಲ್ ಎಕ್ಸ್‌ಪೆಂಡಿಚರ್‌ಗಳನ್ನು ಅಷ್ಟು ವಿಶದವಾಗಿ ಸ್ವತಂತ್ರ ರೀತಿಯಲ್ಲಿ ತೋರಿಸಿಲ್ಲ. ಖಾತೇವಾರಿ ತೋರಿಸಿಯೇ ಇಲ್ಲ. ನಮಗೆಲ್ಲಾ ಅದನ್ನು ಬಡ್ಜೆಟ್ಟಿನಲ್ಲಿ ನೋಡಬೇಕೆಂದರೆ ಕಷ್ಟ ಇದೆ. ಬಡ್ಜೆಟ್ ಎಸ್ಟಿಮೇಟ್ಸ್‌ಗಳಲ್ಲಿ ಹೋದ ವರ್ಷ ಕೊಟ್ಟಿರತಕ್ಕ ರಿವೈಜ್ಡ್ ಅಂಕಿಗಳಿಗೂ ಕರೆಂಟ್ ಇಯರ್ ಬಡ್ಜೆಟ್ ಎಸ್ಟಿಮೇಟ್ಸಿಗೂ ಸಪ್ಲಿಮೆಂಟರಿ ಬಡ್ಜೆಟ್ ಎಸ್ಟಿಮೇಟ್ಸಿಗೂ ಕೇವಲ ರೆವಿನ್ಯೂ ಅಕೌಂಟುಮಾತ್ರ ಹೋಲಿಕೆ ಮಾಡಿಕೊಂಡು ಈ ವರ್ಷದ ಬಡ್ಜೆಟ್ಟಿನಲ್ಲಿ ಸರ್ಪ್ಲಸ್ ಎಷ್ಟು ಎಂಬುದನ್ನು ತೋರಿಸಿದರೆ ಅದು ಉಳಿತಾಯ ಬಡ್ಜೆಟ್ ಅಲ್ಲ ಎಂದರೆ ಆ ರೀತಿ ವಿಚಾರಮಾಡುವಾಗ ನಾರ್ಮಲ್ ರೆವಿನ್ಯೂ, ನಾರ್ಮಲ್ ಎಕ್ಸಪೆಂಡಿಚರ್. ಎಂದರೆ, ರೆವಿನ್ಯೂ ರೆಸೀಟ್ಸ್, ರೆವಿನ್ಯೂ ಎಕ್ಸ್‌ಪೆಂಡಿಚರ್, ಕ್ಯಾಪಿಟಲ್ ಔಟ್‌ಲೆ, ಕ್ಯಾಪಿಟಲ್ ರೆಸೀಟ್ಸ್

(ಶ್ರೀ ಬಿ. ಜಿ. ಖೋತ್)

ಮತ್ತು ಎಕ್ಸ್‌ಪೆಂಡಿಚರ್‌ಗಳಲ್ಲಿ, ಸೈಂಟಿಫಿಕಲಿ, ಎರಡರಲ್ಲಿಯೂ ಸರ್‌ಪ್ಲಸ್ ತೋರಬೇಕಾಗಿತ್ತು. ಈ ಎರಡರಲ್ಲೂ ಸರ್ಪ್ಲಸ್ ಆದರೆ ಆಗ ಬಡ್ಜೆಟ್ ಸರ್ಪ್ಲಸ್ ಬಡ್ಜೆಟ್ ಆಗುತ್ತದೆ? ಕೇವಲ ರೆವಿನ್ಯೂ ಮತ್ತು ಎಕ್ಸ್‌ಪೆಂಡಿಚರ್‌ನೊಳಗೆ ಸರ್ಪ್ಲಸ್ ಆದರೆ, ಅಷ್ಟು ಮಾತ್ರಕ್ಕೇ ಸರ್ಪ್ಲಸ್ ಬಡ್ಜೆಟ್ ಆದ ಹಾಗೆಯೇ ಆದರೆ ಒಂದು ವಿಷಯ ಮಾತ್ರ ಅಡ್ಮಿಸಿಬಲ್. ಅದು ಯಾವುದೆಂದರೆ, ಡೆವಲಪಿಂಗ್ ಎಕಾನಮಿಯೊಳಗೆ ಈ ನಾರ್ಮಲ್ ರೆವಿನ್ಯೂ ಮತ್ತು ಎಕ್ಸ್‌ಪೆಂಡಿಚರ್ ಬಗ್ಗೆ ಸರ್ಪ್ಲಸ್ ಬಡ್ಜೆಟ್ ಎಂದು ಹೇಳಬಹುದು. ಅಷ್ಟು ಡೀಟೇಲ್ಸ್ ತೆಗೆದುಕೊಂಡುಹೋಗುವುದಿಲ್ಲ. ಇಷ್ಟು ಪರಿಸ್ಥಿತಿ ಫಂಡಮೆಂಟಿನಲ್ಲಿದ್ದರೂ, ಒಳಗಿನ ವಿಶೇಷ ರೀತ್ಯ ನೋಡಿದರೆ ವರ್ಷಕ್ಕೆ ಕೋಟ್ಯಂತರ ರೂಪಾಯಿಗಳು, ಖರ್ಚಾಗುತ್ತಿವೆ. 35 crores you are going to spend in the coming year on planning. ಆದ್ದರಿಂದ ಸಮಯಕ್ಕೆ ಸರಿಯಾಗಿ ಖರ್ಚು ಮಾಡುವುದನ್ನು ಶಾಂತರೀತಿಯಿಂದ ವಿಚಾರಮಾಡಬೇಕು. ಲೆಜಿಸ್ಲೇಟರ್ಸ್ ಯಾರೇ ಆಗಲಿ, ದೇಶದಲ್ಲಿ ಯಾರೇ ಲೀಡಿಂಗ್ ಪರ್ಸನ್ಸ್ ಇರಲಿ, ಇಂತಹ ವಿಚಾರಗಳನ್ನು ಶಾಂತತೆಯಿಂದ ವಿಚಾರಮಾಡಬೇಕು. ಈಗಾಗಲೇ ಮೊದಲನೆಯ ಪಾಂಚವಾರ್ಷಿಕಯೋಜನೆ ಮುಗಿಯಿತು. ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಎರಡು-ಮೂರು ವರ್ಷಗಳು ಕಳೆದುವು. ಇಷ್ಟೆಲ್ಲಾ ಖರ್ಚುಮಾಡಿದ್ದೇವೆ. ಆದರೂ common man's living standard ಅಂತೂ ಇಂಪ್ರೂವ್ ಆಗಲೇ ಇಲ್ಲ. ಅನೇಕ ಇಲಾಖೆಗಳಲ್ಲಿ ಕೋಟ್ಯಂತರ ರೂಪಾಯಿಗಳು ಖರ್ಚಾಗುತ್ತಿವೆ. ಆದರೆ ಕಾಮನ್ ಮಾನ್ ಅವನ ಸ್ಥಿತಿ ಬಹಳ ಕಷ್ಟ. ಅವನ ಸ್ಟಾಂಡರ್ಡ್ ಆಫ್ ಲಿವಿಂಗ್ ಎಷ್ಟು ಹೆಚ್ಚಿದೆ ಎಂಬುದನ್ನು ನೋಡಬೇಕು. ಏನೂ ಸುಧಾರಣೆಯಾಗಿಲ್ಲ. ನಾವು ಖರ್ಚು ಮಾಡುವಂಥಾದ್ದು ಸರ್ಕಾರಕ್ಕೆ ವೇದ್ಯವಾಗಿದೆ. ಮಿಸ್-ಅಪ್ರೋಪ್ರಿಯೇಷನ್, ಮಿಸ್-ಯೂಟಿಲೈಜೇಷನ್ ಇವುಗಳನ್ನೆಲ್ಲಾ ನಮ್ಮ ನಮ್ಮಲ್ಲಿಯೇ ಪರಿಶೋಧನೆ ಮಾಡಿಕೊಳ್ಳಬೇಕು. ಇದನ್ನು ಯೋಗ್ಯ ರೀತಿಯಲ್ಲಿ ಯೋಚನೆಮಾಡಬೇಕು. ನಾನಾದರೋ ಎಲ್ಲಿದ್ದೇನೋ ಅಲ್ಲಿಯೇ ಇದ್ದೇನೆ. ನನ್ನ ಸ್ಥಿತಿ ಯಾವ ರೀತಿ ಎಕಾನಮಿ ಖರ್ಚುಮಾಟ್ಟದಲ್ಲಿತ್ತೋ, ಈಗಲೂ ಅಲ್ಲಿಯೇ ಇದೆ. ಹೆಚ್ಚಿಗೆ ಕಡಿಮೆಯಾಗಿದೆ; ಸುಧಾರಣೆ ಇಲ್ಲ. ಎಲ್ಲರದೂ ಅದೇ ಸ್ಥಿತಿ ಇರಬೇಕು. ನಾವು ಏನೂ ಸುಧಾರಣೆ ಮಾಡಿಲ್ಲವೇ ಎಂದು ಸರ್ಕಾರದವರು ಎನ್ನಬಹುದು. ನಾವು ಇಷ್ಟೆಲ್ಲಾ ಖರ್ಚುಮಾಡಿ, ಎಷ್ಟೆಷ್ಟು ಕಾಲ ಯಾವ ರೀತಿಯಿಂದ ಖರ್ಚುಮಾಡಬೇಕೋ ಆ ರೀತಿ ಖರ್ಚು ಮಾಡದೆ, ಈ ಫಲ ದೊರೆಯಲಿಲ್ಲವೇ ಎಂದು ಹೇಳುವುದಲ್ಲ. ಪ್ರತಿಯೊಂದರಲ್ಲೂ ಫಲ ಸಿಕ್ಕುತ್ತದೆ. ಈಚೆಗೆ ಪದಾರ್ಥಗಳ ದರಗಳು ಹೆಚ್ಚುತ್ತಿವೆ. ಅದರಿಂದಾಗಿ ಖರ್ಚು ಹೆಚ್ಚಾಗಿರಬಹುದು. ಆದರೂ ಅದರೊಳಗೆ ಸ್ವಲ್ಪ ಸುಧಾರಣೆಯಾಗಬಹುದು. ಕೆಲಸಗಳೂ ಸುಧಾರಣೆಯಾಗಬಹುದು. ನಾವು ಇಷ್ಟೆಲ್ಲಾ ದುಡ್ಡು ಖರ್ಚುಮಾಡಿ, ಇಷ್ಟೆಲ್ಲಾ ಸುಧಾರಣೆಮಾಡಿಕೊಂಡಿದ್ದರೂ, ಇದ್ದಲ್ಲಿಯೇ ಇದ್ದೇವೆ. ನಮ್ಮ ಸ್ಟಾಂಡರ್ಡ್ ಆಫ್ ಲಿವಿಂಗ್ ರೈಜ್ ಆಗಲೇ ಇಲ್ಲ. ಅದಕ್ಕೆ ಒಂದು ಕಾರಣವಿದೆ. ಇಂತಹ ವಿಷಯವನ್ನು ಹುಡುಕಿ ನೋಡುವ ಕಾಲಕ್ಕೆ ನನ್ನ ಕಣ್ಣಿಗೆ ಒಂದು ದೋಷ ಕಾಣಿಸಿತು. ಎಷ್ಟು ತನಕ ನಮ್ಮ ಇನ್‌ಕಂ ಇನ್‌ಕ್ರೀಜ್ ಆಗುವುದಿಲ್ಲವೋ ಅಷ್ಟು ತನಕ ಸ್ಟಾಂಡರ್ಡ್ ಆಫ್ ಲಿವಿಂಗ್ ಇಂಪ್ರೂವ್ ಆಗುವುದಿಲ್ಲ. ನಾವು ಬೇಕಾದಷ್ಟು ರೂಲ್ಸ್ ಮಾಡಿದರೂ, ಶಿಕ್ಷಣ ಸೌಕರ್ಯ ಮಾಡಿಕೊಟ್ಟರೂ, ಮತ್ತೊಂದು ಇಂಡಸ್ಟ್ರೀಸ್ ಅಭಿವೃದ್ಧಿಮಾಡಿದರೂ, ಇತರ ಕೈಗಾರಿಕೆಗಳು ಯಾವುದೇ ಆಗಲಿ ಸೆಟಪ್‌ಮಾಡಿದರೂ ಕೂಡ ಇದರಿಂದಲೇ ನಮ್ಮ ಇನ್‌ಕಂ ಹೆಚ್ಚಾಗ ವುದಿಲ್ಲ. ಇದಕ್ಕೆ ಎರಡು ಮೂರು ಕಾರಣಗಳಿವೆ. ಒಂದು ಇಂಡಸ್ಟ್ರಿಯಲ್ ಇನ್‌ಕಂ ಇನ್ನೊಂದು ಅಗ್ರಿಕಲ್‌ಚರಲ್ ಇನ್‌ಕಂ. ಇವೆರಡರ ಇನ್‌ಕಂ ಹೆಚ್ಚಾದರೆ ಆಗಮಾತ್ರ ಸ್ಟಾಂಡರ್ಡ್ ಆಫ್ ಲಿವಿಂಗ್ ಹೆಚ್ಚಾಗುತ್ತದೆ. Mines, ores,—ಈ ತರಹ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ನಿರುದ್ಯೋಗ ಸಮಸ್ಯೆ ಬಗೆಹರಿಯದು. ನಿರುದ್ಯೋಗ ಸಮಸ್ಯೆ ಪೂರ್ಣವಾಗಿ ಹೋಗಲಾಡಿಸತಕ್ಕ ಕೈಗಾರಿಕೆಗಳೇ ಬೇರೆ. ಪ್ರತಿಯೊಂದು ಕಡೆಯೂ ವ್ಯವಸಾಯಕ್ಕೆ ಸಂಬಂಧಪಟ್ಟ ಕೈಗಾರಿಕೆಗಳು ಹೆಚ್ಚಬೇಕು. ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಹೆಚ್ಚಾದ ಹೊರತು ಸ್ಟಾಂಡರ್ಡ್ ಆಫ್ ಲಿವಿಂಗ್ ರೈಜ್ ಆಗಲಿಕ್ಕಿಲ್ಲ. ಇದಕ್ಕಾಗಿ ಸರ್ಕಾರದವರು ಒಂದು ನೀತಿಯನ್ನು ಪರಿಪಾಲಿಸಿಕೊಂಡು ಬರಬೇಕು. ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಹೆಚ್ಚಾಗುವುದಕ್ಕೆ ಅಗ್ರಿಕಲ್‌ಚರಲ್ ಇರ್ರಿಗೇಷನ್ ಸ್ಕೀಮುಗಳನ್ನು ಕೂಡಲೆ ಕೈಗೊಳ್ಳಬೇಕೆಂದು ಅನೇಕ ಜನರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು, ಅವನ್ನು ಶುದ್ಧರೀತಿಯಿಂದ ಕಾರ್ಯಗತವಾಗುವಂತೆ ವ್ಯವಸ್ಥೆಮಾಡಿ ವ್ಯವಸಾಯೋತ್ಪನ್ನಗಳು ಹೆಚ್ಚಾಗುವ ರೀತಿಯಲ್ಲಿ ಸಕಲ ಸೌಕರ್ಯಗಳನ್ನೊದಗಿಸಬೇಕು. ಲ್ಯಾಂಡ್‌ರಿಫಾರಮ್ಸ್ ಮಸೂದೆಯಮೇಲೆ ನನಗೂ ಬಹಳ ಪ್ರೀತಿ ಇದೆ. ಈ ಮಸೂದೆಯನ್ನು ಜಾರಿಗೆ ತರುವುದರಿಂದಲೇ ವ್ಯವಸಾಯೋತ್ಪನ್ನವಾಗಿಬಿಡುತ್ತದೆ ನಮಗೆ ತಕ್ಕಂಥ ಲ್ಯಾಂಡ್ ರಿಫಾರ್ಮ್ಸ್ ಮಸೂದೆ ಇರುವುದರಿಂದಲೇ ಎಲ್ಲಾ ಸುಧಾರಣೆಯಾಗಿ ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಹೆಚ್ಚಾಗುತ್ತದೆಂದು ತಿಳಿದಿರುವ ವಿಚಾರ ಅದು ನಿಮ್ಮ ಭ್ರಮೆಯಷ್ಟೇ ಹೊರತು ಮತ್ತೇನಿಲ್ಲ.

ಅಗ್ರಿಕಲ್‌ಚರಲ್ ಪ್ರೊಡಕ್ಷನ್ನನ್ನು ಹೇಗೆ ಉತ್ತಮಪಡಿಸಬೇಕು, ಲ್ಯಾಂಡ್‌ರಿಫಾರಂನನ್ನು ಹೇಗೆ ಮಾಡಬೇಕು, ಈಗಿರತಕ್ಕ ಕುಂದುಕೊರತೆಗಳೇನೆಂಬುದನ್ನೆಲ್ಲ ನಾಳೆ ಲ್ಯಾಂಡ್ ರಿಫಾರಂಸ್ ಬಿಲ್ ಚರ್ಚೆಗೆ ಬಂದಾಗ ಆ ವೇಳೆಯಲ್ಲಿ ನನ್ನ ಸೂಚನೆಗಳನ್ನು ಕೊಡುತ್ತೇನೆ. ಇತ್ತೀಚೆಗೆ ನಡೆದ ಆ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಅವರೇನು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೋ ಆದರ ಪ್ರಕಾರ ಒಂದು ಕಡೆ ಜಾಯಿಂಟ್ ಕೋ-ಆಪರೇಟೀವ್ ಅಗ್ರಿಕಲ್‌ಚರಲ್ ಫಾರಂಗಳನ್ನು ಮಾಡಬೇಕೆಂದು ಹೇಳುತ್ತಿದ್ದಾರೆ, ಮತ್ತೊಂದು ಕಡೆ ವ್ಯವಸಾಯದ ಹಿಡುವಳಿಗಳಮೇಲೆ ಸೀಲಿಂಗನ್ನೂ ಕೂಡ ಹಾಕಬೇಕೆಂದು ಹೇಳುತ್ತಿದ್ದಾರೆ, ಇದು ಪರಸ್ಪರ ವಿರೋಧವುಳ್ಳದ್ದಾಗಿದೆ, ಬಾಧಕವುಳ್ಳದ್ದಾಗಿದೆ. ಅದು ಹೇಗೆ ಪರಸ್ಪರ ವಿರೋಧವಾಗುತ್ತದೆ ಎನ್ನುವುದನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ; ನಾಳೆ ಆ ಬಿಲ್ ಚರ್ಚೆಗೆ ಬಂದಾಗ ಆ ವಿಚಾರ ಹೇಳುತ್ತೇನೆ.

ಈಗ ದೇಶದಲ್ಲಿ ವ್ಯವಸಾಯದ ಉತ್ಪನ್ನ ಏಕೆ ಜಾಸ್ತಿಯಾಗುವುದಿಲ್ಲವೆಂದರೆ ದೇಶದಲ್ಲಿರತಕ್ಕ ಪ್ರತಿಯೊಬ್ಬ ಮನುಷ್ಯನಿಗೂ ಪ್ರಾಮುಖ್ಯವಾಗಿ ಬೇಕಾಗಿರತಕ್ಕ ಮೂರು ಅನುಕೂಲಗಳೆಂದರೆ ಅನ್ನ, ವಸ್ತ್ರ ಮತ್ತು ವಸತಿ. ಈ ಮೂರು ವಿಚಾರಗಳನ್ನು ಮೊದಲು ಬಿಡಿಸಬೇಕು, ಇವುಗಳನ್ನು ಬಗೆಹರಿಸಬೇಕೆಂದು ದೇಶದಲ್ಲಿರತಕ್ಕ ಮುಖಂಡರೆಲ್ಲರೂ ಹೇಳು

ತ್ತಿದ್ದಾರೆ. ಸರ್ಕಾರದವರು ಈಗ ಈ ಒಂದು ಅಗ್ರಿಕಲ್ಚರಲ್ ಪ್ರೊಡಕ್ಟ್ಸನ್ನು ಹೇಗೆ ಉತ್ತಮಗೊಳಿಸಬೇಕೆಂಬ ಒಂದು ಪ್ರಶ್ನೆಯನ್ನು ಬಗೆಹರಿಸಿದರೆ ಆ ಮೂರು ಪ್ರಶ್ನೆಗಳೂ ಬಗೆಹರಿದಂತಾಗುವುದಿಲ್ಲ. ಈ ಮೂರು ಪ್ರಶ್ನೆಗಳೂ ಬಗೆ ಹರಿಯಬೇಕಾಗಿದ್ದರೆ ದೇಶದಲ್ಲಿ ವ್ಯವಸಾಯ ಮಾಡತಕ್ಕ ಒಕ್ಕಲಿಗ ಯಾರಿದ್ದಾನೋ ಅವನಿಗೆ ಈ ದಿವಸ ಕಮರ್ಷಿಯಲ್ ಮಾರ್ಕೆಟ್ಟಿನಲ್ಲಿ ಯಾವ ಒಂದು ಕಮರ್ಷಿಯಲ್ ಕ್ರಾಪಿಗೆ ಅತ್ಯಂತ ಹೆಚ್ಚಿನ ಬೆಲೆ ಧಾರಣೆಯಿರುತ್ತದೋ ಆ ಧಾರಣೆಯನ್ನೇ ಆ ಒಕ್ಕಲಿಗನು ಬೆಳೆಯುತಕ್ಕ ಆಹಾರ ಧಾನ್ಯಗಳಿಗೂ ದೊರೆಯುವಂತೆ ಮಾಡುತ್ತೇವೆಂಬ ಒಂದು ಖಾತರಿಯನ್ನು ಸರ್ಕಾರದವರು ಆ ರೈತನಿಗೆ ಕೊಡುವುದಾದರೆ ಆಗ ಈ ಆಹಾರ ಧಾನ್ಯಗಳ ಉತ್ಪನ್ನವನ್ನು ಅಧಿಕಗೊಳಿಸಲಿಕ್ಕೆ ಸಾಧ್ಯವಾಗುತ್ತದೆ; ಇಲ್ಲದಿದ್ದರೆ ಇಲ್ಲ. ಈ ಬಗ್ಗೆ ಸರ್ಕಾರದವರು ಜರೂರು ವಿಚಾರ ಮಾಡಲಿಕ್ಕೇಬೇಕೆಂದು ನಾನು ಅವರಲ್ಲಿ ಆಗ್ರಹದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಆದರೆ ಈ ದಿವಸ ಆಹಾರೋತ್ಪನ್ನದಲ್ಲಿ ನಿಜವಾಗಿಯೂ ಎಲ್ಲಿ ತೊಂದರೆಯಿದೆ, ಎಲ್ಲಿ ಏನೇನು ಅನಾನುಕೂಲಗಳಿವೆಯೆಂಬುದನ್ನು ಕಂಡುಹಿಡಿಯದೆ ಸುಮ್ಮನೆ ಶಾಲೆಗಳಲ್ಲಿರತಕ್ಕ ಬಾಲಕರು ಬಾಯಿಪಾಠ ಮಾಡಿ ಹೇಳುತ್ತಿರುವ ಶಬ್ದಗಳಂತೆ ನಾವೀಗ ಪ್ರತಿಯೊಬ್ಬರೂ ಭೂಸಾರವನ್ನು ಹೆಚ್ಚಿಸಿ ಬೆಳೆಯನ್ನು ಉತ್ತಮಗೊಳಿಸತಕ್ಕ ಸಲುವಾಗಿ, ಸೀಡ್ಸ್, ಮೆನ್ಯೂರ್ಸ್, ಗ್ರೀನ್ ಮೆನ್ಯೂರ್ಸ್, ಕಾಂಪೋಸ್ಟ್ ಮೆನ್ಯೂರ್, ಆರ್ಟಿಫಿಷಿಯಲ್ ಮೆನ್ಯೂರ್‌ಗಳೆಂಬುದಾಗಿ ಅನೇಕ ಶಬ್ದಗಳನ್ನು ಉಪಯೋಗಿಸುತ್ತಿದ್ದೇವೆ; ಈ ಶಬ್ದಗಳನ್ನು ಎಲ್ಲರೂ ಹಾಡಲಿಕ್ಕೆ ಪ್ರಾರಂಭಿಸಿದ್ದಾರೆ. ಈ ಯಾವ ಪ್ರಯತ್ನಗಳಿಂದಲೂ ಭೂಸಾರ ಹೆಚ್ಚಾಗುವುದಿಲ್ಲ, ಭೂಮಿ ಫರ್ಟಿಲೈಜ್ ಆಗುವುದಿಲ್ಲ, ನಮಗೆ ಯಾವತ್ತೂ ಹೆಚ್ಚಿನ ಬೆಳೆ ಬರುವುದಿಲ್ಲ. ಇದೆಲ್ಲವೂ ಜನರ ಒಂದು ಭ್ರಾಂತಿ, ಒಂದು ಒಣ ಭ್ರಮೆ. ನಾವು ನಮ್ಮ ದೇಶದಲ್ಲಿರತಕ್ಕ ದನಕರುಗಳನ್ನು, ಎತ್ತು, ಎಮ್ಮೆ, ಆಕಳು, ಕುರಿ ಇತ್ಯಾದಿ ಪ್ರಾಣಿಗಳ ಪ್ರಿಸರ್ವೇಷನ್, ಡೆವಲಪ್‌ಮೆಂಟ್ ಮತ್ತು ಇಂಪ್ರೂವ್‌ಮೆಂಟ್‌ಗಳನ್ನು ಎಲ್ಲಿಯ ತನಕ ಮಾಡುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಅಗ್ರಿಕಲ್ಚರಲ್ ಪ್ರೊಡಕ್ಷನ್ ಹೆಚ್ಚಾಗುವುದಿಲ್ಲ. ಮೊದಲು ನಮ್ಮ ದೇಶದ ಪಶು ಸಂಪತ್ತು ಹೆಚ್ಚಬೇಕು. ಅದು ಹೆಚ್ಚಾಗದೆ ದೇಶದಲ್ಲಿ ದವಸ ಧಾನ್ಯಗಳು ಹೆಚ್ಚು ಬೆಳೆಯಲಾಗುವುದಿಲ್ಲ. ದೇಶಕ್ಕೆ ಆಹಾರಾಭಾವ ತಪ್ಪುವುದಿಲ್ಲ. ಇದು ಶತಸಿದ್ಧ, ಇದೇ ನಮ್ಮ ಇಂದಿನ ಆಹಾರದ ಕುಗ್ರಾಮಕ್ಕೆಲ್ಲ ಮೂಲ ಸಿದ್ಧಾಂತವೆಂಬುದನ್ನು ತಾವೆಲ್ಲರೂ ತಮ್ಮ ಮನಸ್ಸಿನಲ್ಲಿ ಚೆನ್ನಾಗಿ ನೆನಪಿಡಬೇಕು; ನಿಮ್ಮೆಲ್ಲರ ಹೃದಯದಲ್ಲೂ ನಿರ್ಧರ ಮಾಡಬೇಕು.

ಶ್ರೀ ಎ.ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಈಗ ನಮ್ಮ ದೇಶದಲ್ಲಿ ಜನಸಂಪತ್ತಿಗಿಂತಲೂ ದನ ಸಂಪತ್ತು ಜಾಸ್ತಿಯಿದೆ. ಆದುದರಿಂದ ಈಗ ಈ ದನ ಸಂಪತ್ತನ್ನು ಇನ್ನೂ ಹೆಚ್ಚಿಸಬೇಕೆಂದು ಹೇಳುತ್ತಿದ್ದೀರೋ ಅಥವಾ ಇದನ್ನು ಇನ್ನೂ ಉತ್ತಮಗೊಳಿಸಬೇಕೆಂದು ಹೇಳುತ್ತಿದ್ದೀರೋ ?

ಶ್ರೀ ಬಿ. ಜಿ. ಖೋತ್.—ಒಂದು ಕಡೆ ದನಕರುಗಳನ್ನು ಸ್ಲಾಟರ್ ಮಾಡಲಿಕ್ಕೆ ಸ್ಲಾಟರ್ ಹೌಸುಗಳಿಗೆ ಅವಕಾಶ ಕೊಟ್ಟಿದ್ದೀರಿ. ಮತ್ತೊಂದು ಕಡೆ ಇವುಗಳನ್ನು ಪುರೋಟು ಮಾಡಿ ತನ್ಮೂಲಕ ಭೂಮಿಯ ಸಾರವನ್ನು ಉತ್ತಮಗೊಳಿಸಬೇಕೆಂದು ಹೇಳುತ್ತಿದ್ದೀರಿ ಹೀಗೆ ತಾವು ಹೇಳುತ್ತಿರುವ ಮಾತುಗಳು ಒಂದಕ್ಕೊಂದಕ್ಕೆ ಹೊಂದುತ್ತಿಲ್ಲ ದೇಶದಲ್ಲಿರತಕ್ಕ ಜಾನುವಾರುಗಳ ಸಂಪತ್ತನ್ನು ಅಭಿವೃದ್ಧಿ ಮಾಡಬೇಕಾಗಿದ್ದರೆ ಪ್ರಥಮತಃ ಸರ್ಕಾರದವರು ಒಂದು ಕಾಯಿದೆ ಮಾಡಿ ಸ್ಲಾಟರ್ ಹೌಸುಗಳನ್ನೆಲ್ಲ ಮುಚ್ಚಿಸಿ, ದನಕರುಗಳ ಕೊಲೆಯನ್ನು ಕಡಮೆ ಮಾಡಬೇಕು. ಹಾಗೆ ಮಾಡಿದಲೆ ಆಗ ಅದು ವ್ಯವಸಾಯಕ್ಕೆ ಒಂದು ಹೆಚ್ಚಿನ ಲಾಭದಾಯಕವಾಗುತ್ತದೆ; ರೈತರಿಗೆ ಹೆಚ್ಚಿನ ಸಹಾಯ ಮಾಡಿದಂತಾಗುತ್ತದೆ. ಅದಕ್ಕಾಗಿ ಮೊದಲು ಒಂದು ಕಾಯಿದೆಯನ್ನು ಮಾಡಿ. ಇದರ ಜೊತೆಗೆ ವ್ಯವಸಾಯಗಾರರು ಉತ್ಪನ್ನ ಮಾಡತಕ್ಕ ಆಹಾರ ವಸ್ತುಗಳಿಗೆ ಒಂದು ಹೆಚ್ಚಿನ ಪ್ರಯೋಜನ ಲಭಿಸಲು ಸರ್ಕಾರದವರೇ ತಾವೇ ಸ್ವತಃ ಅವರು ಬೆಳೆಯುತಕ್ಕ ಆಹಾರ ಧಾನ್ಯಗಳನ್ನು ಮಾರ್ಕೆಟ್ಟಿನಲ್ಲಿ ಯಾವ ಒಂದು ಕರ್ಮಷಿಯಲ್ ಬೆಳೆಗೆ ಎಷ್ಟು ಹೆಚ್ಚಿನ ಧಾರಣೆ ಇರುತ್ತದೆಯೋ ಅಷ್ಟನ್ನೂ ಕೊಡುತ್ತೇವೆಂದು ಅವರಿಗೆ ಒಂದು ಗ್ಯಾರಂಟೀ ಮಾಡಿ ಕೊಟ್ಟರೆ, ಅವರಿಗೊಂದು ಭರವಸೆಯನ್ನು ಕೊಟ್ಟರೆ ಆಗ ನೀವು ಕೇಳಿದಷ್ಟು ಆಹಾರ ಧಾನ್ಯಗಳು ನಿಮಗೆ ಸಿಕ್ಕುತ್ತವೆ, ಹಾಗೆ ಮಾಡದೆ ಹೋದರೆ ನಿಮಗೆ ಖಂಡಿತ ಆಹಾರ ಧಾನ್ಯಗಳ ಉತ್ಪನ್ನವನ್ನು ದೇಶದಲ್ಲಿ ಹೆಚ್ಚುವಂತೆ ಮಾಡಲು ಆಗುವುದಿಲ್ಲ.

ಉಪಾಧ್ಯಕ್ಷರು.—ನಿಮಗೆ ನಿಗದಿ ಮಾಡಿದ್ದ ವೇಳೆಗಿಂತ ಈಗಾಗಲೇ ನೀವು ಹೆಚ್ಚು ಕಾಲವನ್ನು ತಗೆದುಕೊಂಡಿದ್ದೀರಿ. ದಯವಿಟ್ಟು ಇನ್ನು ಐದು ನಿಮಿಷಗಳೊಳಗೇ ತಾವು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಬಿ. ಜಿ. ಖೋತ್.—ನಾನು ಮಾತನಾಡುವುದೇ ಮರಾಠೆ ಮತ್ತು ಇಂಗ್ಲೀಷ್ ಶಬ್ದಗಳ ಮಿಶ್ರದಿಂದ ಕೂಡಿದ ಕನ್ನಡ ಭಾಷೆ. ಅದರಿಂದ ನಾನು ಮಾತನಾಡುವುದೇ ಬಹಳ ನಿಧಾನ. ಆದ್ದರಿಂದ ಹೆಚ್ಚುವೇಳೆ ಆಗಲು ಕಾರಣವಾಗಿದೆ. Perhaps they cannot follow my speech. That is the difficulty in my way. My language is mixed with Marati.

ನಾನು ಹೇಳತಕ್ಕ ವಿಚಾರಗಳಲ್ಲಿ ಬಹಳ ಮುಖ್ಯವಾದುವುಗಳು ಇನ್ನು ಕೇವಲ ಒಂದೆರಡು ಮಾತ್ರ ಇವೆ. ಅವುಗಳನ್ನು ಹೇಳಿ ಮುಗಿಸುತ್ತೇನೆ. ನಾನು ಪದೇ ಪದೇ ಖೋತಾ ಸೂಚನೆಗಳನ್ನು ಕಳುಹಿಸುವಾಗ ಒಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತರುತ್ತಲೇ ಇದ್ದೇನೆ. ಆದರೆ ಪ್ರತಿಯೊಬ್ಬರೂ ಆ ವಿಷಯವನ್ನು ದುರ್ಲಕ್ಷ್ಯದಿಂದಲೇ ನೋಡುತ್ತಿದ್ದಾರೆ. ದೇಶದ ಯಾವ ಯಾವ ಭಾಗದಲ್ಲಿ ಯಾವ ಯಾವ ಬೆಳೆಗಳು ಆಗುತ್ತವೋ ಆ ಬೆಳೆಗಳಿಗೆ ತಕ್ಕಂತೆ ಆಯಾಯ ಪ್ರದೇಶದಲ್ಲಿ ಹೊಸ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಹಾಕಬೇಕೆಂಬ ವಿಚಾರದಲ್ಲಿ ಪದೇ ಪದೇ ತಿಳಿಸುತ್ತಲೇ ಇದ್ದೇನೆ. ಈಗಲೂ ಸರ್ಕಾರದವರು ಈ ವಿಚಾರದಲ್ಲಿ ಒಂದು ಸರ್ವೆ ಮಾಡಿಸಿ ಎಲ್ಲೆಲ್ಲಿ ಕಾಟನ್, ಗ್ರೌಂಡ್‌ನಟ್ಸ್, ಟೊಬ್ಯಾಕೋ, ಷುಗರ್‌ಕೇನ್ ಇತ್ಯಾದಿ ಬೆಳೆಗಳು ಹೆಚ್ಚಾಗಿ ಇರುತ್ತವೆಂಬುದನ್ನು ಕಂಡುಹಿಡಿದು ಅಂಥ ಪ್ರದೇಶಗಳಲ್ಲಿ ಒಂದೊಂದು ಇಂಡಸ್ಟ್ರಿಯನ್ನು ಸೆಟಪ್ ಮಾಡಿದರೆ ಆ ಪ್ರದೇಶಗಳ ಬೆಳವಣಿಗೆ ಬಹು ಬೇಗ ಆಗುತ್ತದೆ. ಅದಕ್ಕಾಗಿ ಒಂದು ಸರ್ವೆ ನಡೆಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಷಯ. ಇದರ ಬಗ್ಗೆ ಎಲ್ಲ ಸರ್ಕಾರಗಳೂ ಮಾನ್ಯ ಮಾಡತಕ್ಕಂಥ ಮಾತು ಒಂದು ಇದೆ. ಈಗ ದೇಶಾದ್ಯಂತವೂ ನಮ್ಮ ಜನರಲ್ಲಿ ನೀತಿಯಿಲ್ಲ, ಕರಪ್ಷನ್ ಜಾಸ್ತಿಯಾಗುತ್ತಿದೆ; ಜನರಲ್ಲಿ

(ಶ್ರೀ ಬಿ. ಜಿ. ಖೋತ್)

ಏನೇನು ಸದ್ಗುಣಗಳಿರಬೇಕೋ ಅವೆಲ್ಲ ಹೋಗಿ ಇರ ಬಾರದ ದುರ್ಗುಣಗಳೆಲ್ಲ ಅವರಲ್ಲಿ ಜಾಸ್ತಿ ಆಗಿವೆ. ಈ ಮಾತುಗಳು ಎಲ್ಲರ ಬಾಯಲ್ಲೂ ಕೇಳಿಬರುತ್ತಿವೆ. ಹೀಗೆ ಜನರಲ್ಲಿ ಬೆಳೆಯುತ್ತಿರುವ ದುರ್ಗುಣಗಳನ್ನು ಬಿಡಿಸಲಿಕ್ಕೆ ಇರತಕ್ಕದ್ದು ಒಂದೇ ದಾರಿ. ಈ ದಿವಸ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಾಥಮಿಕ ವಿದ್ಯಾ ಭ್ಯಾಸವನ್ನು ಕೆಲವರು ಶಾಲೆಗಳಲ್ಲೂ ಮತ್ತೆ ಕೆಲವರು ತಮ್ಮ ತಮ್ಮ ಮನೆಗಳಲ್ಲೂ ಮಕ್ಕಳಿಗೆ ಕೊಡಿಸುತ್ತಿ ದ್ದಾರೆ. ಇದಾದಮೇಲೆ ಎಲ್ಲರೂ ಸೆಕೆಂಡರಿ ವಿದ್ಯಾ ಭ್ಯಾಸಕ್ಕಾಗಿ ಶಾಲೆಗಳಿಗೆ ಸೇರಲೇಬೇಕು. ಹೈಯರ್ ಎಜ್ಯುಕೇಷನ್ನಿಗೆ ಹೋಗತಕ್ಕ ಚೈತನ್ಯವಿರುವವರು ಹೋಗಬಹುದು ಇಲ್ಲದವರು ಬಿಡುತ್ತಾರೆ. ಅದರ ಬಗ್ಗೆ ನಾನೇನೂ ಹೇಳುವುದಿಲ್ಲ. ಆದರೆ ಈ ಸೆಕೆಂಡರಿ ವಿದ್ಯಾಭ್ಯಾಸ ನಡೆಯತಕ್ಕ ಅವಧಿಯಲ್ಲಿ ಕಡ್ಡಾಯ ವಾಗಿ ಸೆಕಂಡರಿ ಎಜ್ಯುಕೇಷನ್ ಸ್ಟೇಜಿನಲ್ಲಿ, that must be strictly residential. ಅದರೊಳಗೆ religious and moral education should be imparted along with general education. ಇದನ್ನು ಲಕ್ಷ್ಯದಲ್ಲಿಡಬೇಕು. ವಿದ್ಯಾಭ್ಯಾಸ ಪದ್ಧತಿ ಯಲ್ಲಿ ಈ ರೀತಿಯ ಮಾರ್ಪಾಡುಗಳನ್ನು ಮಾಡ ಬೇಕೆಂದು ತಿಳಿಸುತ್ತೇನೆ.

12 NOON.

Sri C. M. ARUMUGHAM (Kolar Gold Fields).—This is a secular State. How can you give religious education?

ಶ್ರೀ ಬಿ. ಜಿ. ಖೋತ್.—Religious ಎಂದರೆ ಕೇವಲ ಗಂಧ ಹಚ್ಚಿಕೊಳ್ಳುವುದು, ವಿಭೂತಿ ಹಚ್ಚಿ ಕೊಳ್ಳುವುದಲ್ಲ. ಜನಿವಾರ ಮೊದಲಾದುವನ್ನು ಹಾಕಿ ಕೊಳ್ಳುವುದಲ್ಲ. ಇದಕ್ಕೆ ಸಂಬಂಧಪಟ್ಟಂಥ fundamental principles ಏನಿವೆ ಅವನ್ನು ಶಿಕ್ಷಣದ ಕ್ರಮ ದಲ್ಲಿ ಸೇರಿಸಬೇಕು. ಇದಕ್ಕೆ ಯಾವ ಅಡ್ಡಿಯೂ ಇಲ್ಲ.

ಶ್ರೀ ಎಸ್. ಪಿ. ತಳವಾಳ್ಕರ್ (ರಾಯಭಾಗ್).—ಧರ್ಮ ಬಿಟ್ಟು ತತ್ವವಿದೆಯೇ? ತತ್ವಬಿಟ್ಟು ಧರ್ಮ ವಿದೆಯೇ?

ಶ್ರೀ ಬಿ. ಜಿ. ಖೋತ್.—ತತ್ವದ ವಿಷಯ ಬೇರೆ, ಚರಿತ್ರೆಯ ವಿಷಯ ಬೇರೆ, ಜ್ಞಾನದ ವಿಷಯ ಬೇರೆ. ಗಂಧ ಹಚ್ಚಿಕೊಂಡು, ಚಂಡಿಕೆ ಬಿಟ್ಟ ಮಾತ್ರಕ್ಕೆ ಜೈನನಾಗುತ್ತೇನೆಂದರೆ ಸಾಧ್ಯವೇ, ಜೈನನಿರಬಹುದು, ಆದರೆ ಕ್ರಿಯಾತ್ಮಕ ಜ್ಞಾನ ಮತ್ತು ದರ್ಶನ ಇವಿಲ್ಲದೆ ಇದ್ದರೆ ಏನು ಪ್ರಯೋಜನ? There should be religious and moral education along with general education at the secondary education level. It must be strictly residential. ನಮ್ಮಲ್ಲಿ ನಾಗರಿಕತೆ ಹೆಚ್ಚಬೇಕಾದದ್ದು ಮುಖ್ಯ. ಇದರ ಹೊರತು ಗತ್ಯಂತರವಿಲ್ಲ. ಹನ್ನೊಂದು ಕೋಟಿಯಲ್ಲ ಇನ್ನೂ ಎಷ್ಟು ಹಣವನ್ನು ಖರ್ಚು ಮಾಡಿದರೂ ಸರಿ. ಆದರೆ ನಾನು ಹೇಳಿದಂತೆ ವಿದ್ಯಾಭ್ಯಾಸ ಪದ್ಧತಿಯಲ್ಲಿ ಮೇಲ್ಕಂಡ ರೀತಿಯಲ್ಲಿಯೂ ಶಿಕ್ಷಣವನ್ನು ಕೊಡುವ ವಿಷಯವನ್ನು ಸರ್ಕಾರದವರು ಪರಿಶೀಲನೆ ಮಾಡ ಬೇಕೆಂದು ಸೂಚಿಸುತ್ತೇನೆ.

ಎರಡನೆಯದು ಮೆಡಿಕಲ್ ವಿಷಯ. ಇದರೊಳಗೆ ಆಲೋಪಥಿ ಹೆಚ್ಚು ಪ್ರಾಧಾನ್ಯತೆಯನ್ನು ಪಡೆದಿದೆ. ಒಂದು ವರ್ಷದಿಂದಲೂ ಆಲೋಪಥಿ ಬೇಡ, ಅದಕ್ಕೆ ಬದಲಾಗಿ ಆಯುರ್ವೇದಕ್ಕೆ ಹೆಚ್ಚು ಪ್ರಾಧಾನ್ಯತೆ ಯನ್ನು ಕೊಡಬೇಕೆಂದು ಹೇಳುತ್ತಿದ್ದೇನೆ. ಆಯು ರ್ವೇದ ಪದ್ಧತಿಗೆ ಸಾಕಾದಷ್ಟು ಸಂಶೋಧನೆಯ ಸೌಲಭ್ಯ, ಮುಂತಾದ ವೆಲ್ಲವನ್ನೂ ಕೊಟ್ಟು ಪ್ರಾಧಾನ್ಯತೆಯನ್ನು ಕೊಟ್ಟರೆ, ಅದರಿಂದ ಹೆಚ್ಚು ಖರ್ಚು ಸರ್ಕಾರಕ್ಕೆ ಉಳಿಯುತ್ತದೆ, ಸುಲಭ ಸಾಧ್ಯವಾಗಿ ದೊರಕುವ ಔಷಧಿಗಳಿಂದ ಜನರು ನಿರೋಗಿಗಳಾಗುವ ಹಾಗೆ ಮಾಡಿ ರಾಷ್ಟ್ರದ ಆರೋಗ್ಯ ವನ್ನು ಕಾಪಾಡುವುದಕ್ಕೆ ಸಹಾಯವಾಗುತ್ತದೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. I am opposing this family planning for the methods adopted. If you kindly allow me, I will give some suggestions. ಪ್ರತಿಯೊಬ್ಬರೂ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಅವರಿಗೆ ಅವ ಕಾಶವಿದೆ. ಆದರೆ ಪೂರ್ವಗ್ರಹ ದೂಷಿತರಾಗಿ ತಮ್ಮ ಅಭಿಪ್ರಾಯಗಳನ್ನು ಕೊಡುವುದು wrong and improper ಆಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ, I have marked it particularly and I am sorry to say it is put in the mouth of the Governor of Mysore. A man coming from a high dynasty, royal family, man of a high blood, ಇಂಥವರ ಬಾಯೊಳಗೆ ಹಾಕಿ ದ್ದಾರೆ. ನಮ್ಮ ಉಭಯ ಸಭೆಗಳ ಮುಂದೆ ಭಾಷಣ ಮಾಡುವ ಕಾಲಕ್ಕೆ ಈ ರೀತಿ ಹೇಳಿದರು :

> "Another scheme initiated by Government which requires special mention is the plan to control effectively the growth of population. Whatever development schemes may be initiated and whatever increase in productivity may be achieved, unless the growth of population is checked, there will be no material improvement in the economic condition of the people. With this end in view, a number of urban and rural family planning centres have been sanctioned and Government has promulgated a scheme whereby private medical practitioners who perform vasectomy operations are given a bonus of Rs. 25 per operation."

ಈ ರೀತಿ ಅವರಿಂದ ಹೇಳಿಸಿರುವುದು, it is wrong and improper. ಈ ಯೋಜನೆಯ ಪ್ರಕಾರ ಸ್ತ್ರೀ ಮತ್ತು ಪುರುಷರು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿ ಕೊಳ್ಳಬೇಕೆಂದರೆ ಪುರುಷನು ಪುರುಷನಲ್ಲ, ಸ್ತ್ರೀಯು ಸ್ತ್ರೀಯಲ್ಲ ಎಂದು ಹೇಳಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ಇಂಥ ನೀತಿಯಿಂದ ರಾಷ್ಟ್ರದ ಮುಖಂಡರೂ, ರಾಷ್ಟ್ರದ ಆಡಳಿತವನ್ನು ನಡೆಸುವವರೂ ಶಾಸನ ಸಭಾಸದಸ್ಯರೂ ಜನರಿಗೆ ಇಂಥ ಮಾರ್ಗ ದರ್ಶನವನ್ನು ಮಾಡುತ್ತೇವೆಂದರೆ ದೇವರೇ ಗತಿ. ಅದ ರಿಂದ ನಮ್ಮ ರಾಜ್ಯದ ಭವಿಷ್ಯ ಸುರಕ್ಷಿತವಾಗಿರುವುದು ಎಂದೆನ್ನಿಸುವುದಿಲ್ಲ. ಇಂಥ ಕನಿಷ್ಟ ಪ್ರವೃತ್ತಿ ಆಗ

ಬಾರದು. "ಪುನಃ ಪುನರಪಿ ಪ್ರತಿಹನ್ಯಮಾನಃ" ಚಲೋ ಜನರು, ಸಜ್ಜನರು ತಮ್ಮ ಮಾರ್ಗವನ್ನು ಬಿಟ್ಟು ಹೋಗುವುದಿಲ್ಲ. ಮಹಾಜನರ ಲಕ್ಷ್ಯ ಜನರನ್ನೂ ಪಾರಮಾರ್ಥಿಕದತ್ತ ಒಯ್ಯಬೇಕೆಂದಿರುತ್ತದೆ. ನಾನು ಐದು ನಿಮಿಷಗಳಲ್ಲಿ ಮಿತಸಂತಾನದ ಯೋಜನೆಯ ನಿಜ ಚಿತ್ರವನ್ನು ತಮ್ಮ ಮುಂದಿಡುತ್ತೇನೆ. ಏನೆಂದರೆ ನಮ್ಮಲ್ಲಿ ಜನಸಂಖ್ಯೆ ಏರುತ್ತಿದೆ, ಇದಾಗಬಾರದು ಎಂದು ಹೇಳುತ್ತಾರೆ. ಈ ಜೀವ ಹೇಗೆ ಹೋಗುತ್ತದೆ, ಹೇಗೆ ಹುಟ್ಟುತ್ತದೆ, ಈ ವಿಚಾರದಲ್ಲಿ ಶಂಕೆಯನ್ನೂ ಮತ್ತು ನನ್ನ ಸಮಾಧಾನವನ್ನೂ ಹೇಳುತ್ತೇನೆ. ನೀವು ಪ್ರತಿಯೊಂದು ಅವಸ್ಥೆಯಲ್ಲಿಯೂ control ಮಾಡಬೇಕೆ...

Mr. DEPUTY SPEAKER.—Time is up.

Sri B. G. KHOT.—This is a national problem. You must not restrict time at least on this question.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ತುಂಬ ಸ್ವಾರಸ್ಯವಾಗಿ ಮಾತನಾಡುತ್ತಾ ಇದ್ದಾರೆ. ಇವರು ಒಂದೆರಡು ನಿಮಿಷಗಳಲ್ಲಿ ಹೇಳಿದರೆ ಏನೂ ಗೊತ್ತಾಗುವುದಿಲ್ಲ. ಆದ್ದರಿಂದ ರೆಸಿಡೆನ್ಸಿಯಲ್ಲಿ ಒಂದು ಗಂಟೆ ಕಾಲ ಇವರ ಭಾಷಣವನ್ನು ಕೇಳಲು ಅವಕಾಶ ಮಾಡಿಕೊಟ್ಟರೆ ಅನುಕೂಲ.

Sri A. S. PATIL.—On a point of order. Is there any Minister for Vedantha to give a reply?

Mr. DEPUTY SPEAKER.—I do not think it is a point of order. The Hon'ble Member can express his opinion on family planning.

Sri B. G. KHOT.—I can express myself on family planning. ಹುಟ್ಟುವ ವ್ಯವಸ್ಥೆ ಮತ್ತು ಸಾಯುವ ವ್ಯವಸ್ಥೆ ಏನು ಎನ್ನುವುದನ್ನು ತಿಳಿದಿದ್ದಾರೆಯೇ? ಇದು ಬಹಳ ಮುಖ್ಯವಾದ ಸಂಗತಿ. ಜೀವ ಹೇಗೆ ಹುಟ್ಟುವುದು, ಎಲ್ಲಿಗೆ ಹೋಗುವುದು ಮತ್ತು ಅದು ಹೇಗೆ ಸಾಯುವುದು ಎನ್ನುವುದನ್ನು ಮೊದಲನೆಯದಾಗಿ ತಿಳಿದುಕೊಂಡು ಅನಂತರ ಬೇರೆ ಎರಡನೆಯ ವಿಚಾರವನ್ನು ಪರಿಶೀಲಿಸಬೇಕು.

ಒಬ್ಬ ಸದಸ್ಯರು.—ಎಲ್ಲಿಗೆ ಹೋಗಬೇಕೋ ಅಲ್ಲಿಗೇ ಹೋಗುತ್ತದೆ. (ನಗು)

ಶ್ರೀ ಬಿ. ಜಿ. ಖೋತ್.—ಒಂದು ಜೀವ ಸತ್ತನಂತರ ಇನ್ನೊಂದು ಕಡೆಗೆ ಹುಟ್ಟುವುದಕ್ಕೆ ಹೋಗುತ್ತದೆ. ಇದು ಹೇಗೆ ಎನ್ನುವುದನ್ನು ವಿಮರ್ಶೆ ಮಾಡಬೇಕು.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಈ ತತ್ವದ ವಿಚಾರಗಳನ್ನು ತಿಳಿಯಕೊಳ್ಳಲು ಸ್ವಾಮಿಗಳ ಕಡೆಗೆ ಹೋಗಬಹುದು. ಇಲ್ಲಿರುವ ವಿಚಾರ ಫ್ಯಾಮಿಲೀ ಪ್ಲಾನಿಂಗಿನ ವಿಚಾರ, ಇದರ ಮಹತ್ವವನ್ನು ವಿವರಿಸಬೇಕು.

ಶ್ರೀ ಬಿ. ಜಿ. ಖೋತ್. ಈ ಫ್ಯಾಮಿಲಿ ಪ್ಲಾನಿಂಗಿನ ವೈಶಿಷ್ಟ್ಯ ಹೆಚ್ಚು ಸಕ್ಸೆಸ್ಸು ಫುಲ್ ಆಗುವುದಿಲ್ಲ ಎನ್ನುವುದನ್ನು ಎಲ್ಲರೂ ತಿಳಿಯಬೇಕು. How to control the growth of the population? How you can check and control the population? ಇನ್ನೊಂದು ಮಾತು ಹೇಳುತ್ತೇನೆ. ನಾನು ಚಿಕೋಡಿ ತಾಲ್ಲೂಕಿನಲ್ಲಿ ರುವ ಮಹಾರಾಷ್ಟ್ರದವರ ಮತ್ತು ಕರ್ನಾಟಕದವರ ಮದದ್ದಿನಿಂದ ಚುನಾಯಿತನಾಗಿ ಬಂದಿರುವ ಸ್ವತಂತ್ರ ಸದಸ್ಯನಾಗಿದ್ದೇನೆ. ಅದೂ ಅಲ್ಲದೆ ನನಗೆ ಎರಡು ಜನಾಂಗದವರೂ ಮತವನ್ನು ಕೊಟ್ಟು ಚುನಾಯಿಸಿದ್ದಾರೆ. ಅಲ್ಲದೆ ಜೈನರ ಜನಾಂಗಕ್ಕೆ ಸೇರಿದವನು ನಾನೊಬ್ಬನೇ. ಆದಕಾರಣ ನಾನು ಮಹಾರಾಷ್ಟ್ರದ ಸಂಗಡದ ಜನಗಳಿಗೂ ಮತ್ತು ಕರ್ನಾಟಕದ ಜನಗಳಿಗೂ ಒಂದೇ ರೀತಿಯಾಗಿ ಅಭಿಪ್ರಾಯಗಳನ್ನು ಹೊಂದಿರುವವನಾಗಿದ್ದೇನೆ. ಈ ಸಂದರ್ಭದಲ್ಲಿ ಇಲಾಖೆಯಲ್ಲಿರುವ ರಿಕಾರ್ಡುಗಳನ್ನು ಬೇಕಾದರೂ ಪರಿಶೀಲಿಸಬಹುದು.

(Several Members rore.)

Mr. DEPUTY SPEAKER.—Sri Boranna Gowda.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಲಿಸ್ಟು ಇದೆ ಎಂದು ಹೇಳಿ ಲಿಸ್ಟು ಕೊಟ್ಟರೂ ಕೂಡ ಅಪೋಸಿಷನ್ನಿನವರಿಗೆ ಮಾತನಾಡಲು ಅವಕಾಶವನ್ನೇ ಕೊಡುತ್ತಿಲ್ಲ. ಯಾವ ಲಿಸ್ಟನ್ನೂ ಕೂಡ ಸರಿಯಾಗಿ ಫಾಲೋ ಮಾಡುತ್ತಿಲ್ಲ.

ಉಪಾಧ್ಯಕ್ಷರು.—ಲಿಸ್ಟ್ ಇಲ್ಲ ಎಂದು ಯಾರು ಹೇಳಿದರು. ಲಿಸ್ಟಿನಂತೆಯೇ ಎಲ್ಲರಿಗೂ ಅವಕಾಶವನ್ನು ಕೊಡಲಾಗುತ್ತಿದೆ We are following the list.

Sri Y. VEERAPPA (Holenarasipur).—Please give us the list. We shall also follow it.

ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಅನೇಕ ಜನ ಮಾನ್ಯ ಸದಸ್ಯರು ಆಯವ್ಯಯದ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ, ಅಪೋಸಿಷನ್ನಿನ ಮಾನ್ಯ ಸದಸ್ಯ ಮಿತ್ರರುಗಳೂ ತಮ್ಮ ಸಲಹೆಗಳನ್ನು ಮಂತ್ರಿಗಳ ಮುಂದೆ ಇಟ್ಟಿದ್ದಾರೆ. ನಾನೂ ಸಹ ನನ್ನ ಸಲಹೆಗಳನ್ನು ಈ ಸಭೆಯ ಮುಂದಿಡುವಾಗ ಎಲ್ಲ ವಿಚಾರಗಳಲ್ಲೂ ಕೂಡ ಮಾತನಾಡುವುದಕ್ಕೆ ಹೋಗದೆ ಮುಖ್ಯವಾದ ಒಂದೆರಡು ವಿಚಾರಗಳನ್ನು ಹೇಳಬೇಕೆಂದು ನಾನು ಬಯಸುತ್ತೇನೆ.

ಸಾಧಾರಣವಾಗಿ ಈ ಬಡ್ಜೆಟ್ಟಿನಲ್ಲಿ ಆದಾಯದ ವಿಚಾರದಲ್ಲೇ ಹೆಚ್ಚಿಗೆ ಗಮನವನ್ನು ಕೊಟ್ಟಂತೆ ಕಂಡರೂ ಇನ್ನೂ ಹೆಚ್ಚು ಆದಾಯವನ್ನು ತರತಕ್ಕ ವಿಚಾರವನ್ನೂ ಆರ್ಥಿಕ ಸಚಿವರು ಸೂಚಿಸಬಹುದಾಗಿತ್ತು. ಅವರು ಎಷ್ಟು ಹೆಚ್ಚು ಸಂಪಾದನೆ ಬಂದರೂ ಆ ರೀತಿಯಾಗಿ ಹೆಚ್ಚಿನ ಸಂಪಾದನೆ ಬರದಂತೆ ತೋರಿಸಿರುವುದನ್ನು ನೋಡಿದರೆ, ಬಹುಶಃ ಕೇಂದ್ರದಿಂದ ನಮಗೆ ಬರತಕ್ಕ ಸಹಾಯ ಮತ್ತೂ ಕಡಮೆಯಾಗಬಹುದು ಎಂದು ಯೋಚನೆ ಮಾಡಿ ಖರ್ಚನ್ನು ಸರಿತೂಗಿಸಿ ಆದಾಯ ಸುಮಾರು 48 ಲಕ್ಷಗಳಷ್ಟು ಬರುವಂತೆ ತೋರಿಸಿದ್ದಾರೆಂದು ನನ್ನ ಅಭಿಪ್ರಾಯದಲ್ಲಿ ಕಂಡುಬರುತ್ತದೆ. ನಮಗೆ ಆದಾಯ ಬರತಕ್ಕ ಅನೇಕ ಬಾಬುಗಳನ್ನು ತೋರಿಸಬಹುದಾಗಿತ್ತು. ಆದರೂ ತೋರಿಸಿಲ್ಲ. ಅದು ಹೇಗಾದರೂ ಇರಲಿ, ಇವತ್ತಿನ ದಿವಸ ಖರ್ಚಿನ ಬಾಬಿನಲ್ಲಿ ಒಂದು ಮಲೆನಾಡಿನ ಡೆವೆಲಪ್ಮೆಂಟು ಕಮಿಟಿ ಎಂದು ಒಂದು ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯನ್ನು ಮಾಡಿದರೆ ಮಲೆನಾಡು ಡೆವಲಪ್‌ಮೆಂಟ್ ಆಗಿಲ್ಲ ಎಂದು ಮಾನ್ಯ ಮಿತ್ರರುಗಳೆಲ್ಲರೂ ಒಪ್ಪಲೇ ಬೇಕು. ಡೆವಲಪ್‌ಮೆಂಟು ಕಮಿಟಿಗೆ ಯಾವುದೇ ತರಹದ ಸಹಾಯಗಳನ್ನು ಕೊಡುವುದಕ್ಕೆ ನಿಗದಿಯಾದಂತೆ ಮಾನ್ಯ ಪಿ.ಡಬ್ಲ್ಯೂ.ಡಿ. ಶಾಖಾ ಮಂತ್ರಿಗಳು

(ಶ್ರೀ ಬಿ. ಎಚ್. ಬೋರಣ್ಣಗೌಡ)

ಮಲೆನಾಡಿನ ಡೆವಲಪ್‌ಮೆಂಟಿಗೆಂದು ಬಡ್ಜೆಟ್ಟನ್ನು ಪ್ರತ್ಯೇಕವಾಗಿ ಇಟ್ಟಿಲ್ಲ. ಹೀಗೆ ಯಾವ ಭಾಗದಲ್ಲಿಯೋ ಸೇರಿಸಿರುವುದರಿಂದ ಮಲೆನಾಡಿನಲ್ಲಿರುವ ಸೌಲಭ್ಯಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಅವಕಾಶ ದೊರೆತಿಲ್ಲ. ಮಲೆನಾಡಿನಲ್ಲಿರುವ ವೈಶಿಷ್ಟ್ಯ ಮಲೆನಾಡಿನ ಕಡೆಗಳಲ್ಲಿರುವವರಿಗೆ ಚೆನ್ನಾಗಿ ತಿಳಿದಿರುತ್ತದೆಯೇ ವಿನಾ ಮೈದಾನದ ಪ್ರದೇಶದವರಿಗೆ ಅಷ್ಟು ಹೆಚ್ಚಾಗಿ ತಿಳಿದಿರುವುದಿಲ್ಲ. ಮುಖ್ಯವಾಗಿ ಮಲೆನಾಡಿನ ಸಂಚಾರ ವ್ಯವಸ್ಥೆ ಸೌಕರ್ಯಗಳ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ಮಲೆನಾಡಿನ ಪ್ರದೇಶಗಳಿಂದ ಕೇವಲ ಹತ್ತು ಹನ್ನೆರಡು ಜನಗಳು ಮಾತ್ರ ಇಲ್ಲಿಗೆ ಬಂದಿದ್ದಾರೆ. ಅದರಿಂದ ಮಲೆನಾಡಿನಲ್ಲಿರುವ ಲೋಪದೋಷಗಳೇನಿವೆ ಎನ್ನುವುದು ಗೊತ್ತಿಲ್ಲದೇ ಇದೆ. ಇದು ಸ್ವಾಭಾವಿಕವಾಗಿದೆ. ಮಲೆನಾಡಿನಲ್ಲಿ ಸಂಚಾರ ಸೌಕರ್ಯಗಳಿಗೆ ಉತ್ತಮವಾದ ರೋಡುಗಳಿಲ್ಲ, ಸೇತುವೆಗಳಿಲ್ಲ,. ಮಲೆನಾಡಿನಲ್ಲಿರುವ ಅನೇಕ ಹಳ್ಳಿಗಳಿಗೆ ಒಂದಕ್ಕೊಂದಕ್ಕೆ ಮಧ್ಯದಲ್ಲಿ ಹಳ್ಳಕೊಳ್ಳಗಳಿವೆ. ಒಂದು ಊರಿಂದ ಇನ್ನೊಂದು ಊರಿಗೆ ಹೋಗಲು ಸೇತುವೆಗಳ ಸೌಕರ್ಯ ಕಡಮೆಯಾಗಿರುವುದರಿಂದ ಸರ್ಕಾರದವರು ಈ ಮಲೆನಾಡು ಪ್ರದೇಶದಲ್ಲಿ ಸೇತುವೆಗಳನ್ನು ಕಟ್ಟಿಸಿಕೊಡಬೇಕು ಎಂದು ಹೇಳುತ್ತಿದ್ದೇವೆ. ಇಲ್ಲಿ ಏನಾಗಿದೆ ಎಂದರೆ, ಎಸ್ಟಿಮೇಟು, ಪ್ಲಾನು ಎಲ್ಲ ಆಗಿ ಸರ್ಕಾರಕ್ಕೆ ಬರುತ್ತದೆ. ಆದರೆ ಸರ್ಕಾರದಲ್ಲಿ ಇದು ಡಿಸ್ಟ್ರಿಕ್ಟು ಬೋರ್ಡಿನ ರೋಡು ಇದು ವಿಲೇಜು ಪಂಚಾಯತಿಗಳ ರೋಡು ಇದನ್ನು ಪಂಚಾಯತಿಯವರು ಮಾಡಬೇಕು, ಮತ್ತೆ ಈ ಕೆಲಸವನ್ನು ಡಿಸ್ಟ್ರಿಕ್ಟು ಬೋರ್ಡು ಮಾಡಬೇಕು ಎಂದು ಹೇಳುತ್ತ ಈ ಕೆಲಸಗಳು ಎಷ್ಟೋ ಆಗದೆ ಉಳಿದಿವೆ. ಇವತ್ತಿಗೂ ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ಹೋಗತಕ್ಕ ರಸ್ತೆ ಅದು ಡಿಸ್ಟ್ರಿಕ್ಟು ಬೋರ್ಡಿನದೇ ಆಗಿರಲಿ, ವಿಲೇಜು ಪಂಚಾಯತಿಯವರದೇ ಆಗಿರಲಿ ಅಲ್ಲಿರುವ ಜನಗಳ ಕಷ್ಟ ನಿಷ್ಠೂರಗಳನ್ನು ಯೋಚನೆ ಮಾಡಿ ಸರಕಾರ ಈ ಕೆಲಸಗಳನ್ನು ಮಾಡುವುದು ಅವಶ್ಯಕವಲ್ಲವೇ ಎನ್ನುವುದನ್ನು ವಿಚಾರ ಮಾಡಿ ಆ ರೀತಿಯಾದ ಸೇತುವೆಗಳನ್ನು ತೀವ್ರವಾಗಿ ಕಟ್ಟಿಸಿಕೊಡತಕ್ಕದ್ದು ನ್ಯಾಯವಾಗಿದೆ. ಹಾಗೆ ಮಾಡದೆ ಇದು ಡಿಸ್ಟ್ರಿಕ್ಟು ಬೋರ್ಡಿನ ಸೇತುವೆಗಳಲ್ಲಿ ಸೇರಿದವುಗಳಲ್ಲ, ಸ್ಟೇಟು ಫಂಡು ರೋಡಿಗೆ ಸೇರಿದ ಸೇತುವೆಗಳೆಂದು ಹೇಳುವುದು ಸರಿಯಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹೀರೇ ಮಂದೆ ಹಳ್ಳಿ, ಕಾಂತಿಸಳ್ಳಿ, ಹುಳಿ ಮಾವಿನ ಹೊಳೆ ಈ ಹಳ್ಳಿಗಳಿಗೆ ಸೇತುವೆಗಳಿಲ್ಲದೆ ಸಾಧಾರಣವಾಗಿ 10-12 ಸಾವಿರ ಜನ ಸುತ್ತ ಮುತ್ತಲ ಹಳ್ಳಿಗಳವರು ಹೊರಗಡೆ ಬರುವುದಕ್ಕೆ ಅವಕಾಶವಿಲ್ಲದಂತಾಗಿ ಮೂರು ನಾಲ್ಕು ತಿಂಗಳು ಕಾಲ ಒಂದು ದ್ವೀಪದಲ್ಲಿ ಸೇರಿಕೊಂಡಂತಿರುತ್ತಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ನಾವಿಲ್ಲಿ ಕುಳಿತುಕೊಂಡು ಏನೂ ಪ್ರಯೋಜನವಿಲ್ಲವೆಂದು ಕಾಣುತ್ತದೆ. ನಮ್ಮ ಪಾರ್ಟಿಯಿಂದ ಎಷ್ಟು ಜನ ಮಾತನಾಡಬೇಕು ಎಂದು ನಿಗದಿ ಮಾಡಿಕೊಂಡು ಒಂದು ಸಣ್ಣ ಪಟ್ಟಿ ಮಾಡಿ Recognised Party list ಕೊಟ್ಟಿದ್ದರೂ, ಈಗಾಗಲೇ 12½ ಘಂಟೆ ಹೊಡೆಯುತ್ತ ಬಂದಿದೆ, ಬೆಳಗ್ಗೆಯಿಂದ ಇಲ್ಲಿನವರೆಗೂ ಯಾರಿಗೂ ಅವಕಾಶ ಕೊಟ್ಟಿಲ್ಲ. ಇನ್ನು ಹತ್ತು ನಿಮಿಷಗಳು ಮಾತ್ರ ಉಳಿದಿವೆ. ಇಷ್ಟರಲ್ಲಿ ನಮಗೆ ಕೊಡುವುದಕ್ಕೇ ಆಗುವುದಿಲ್ಲ. ಹೀಗಿರುವಾಗ ನಾವು list ಕೊಟ್ಟೂ ಏನೂ ಪ್ರಯೋಜನವಿಲ್ಲ. ಇಷ್ಟಕ್ಕೇ ನಾವು list ಏತಕ್ಕೆ ಕೊಡಬೇಕು? ನಿಮಗೇ ಬಿಟ್ಟುಬಿಡುತ್ತೇವೆ. ಯಾರು ಏಳುತ್ತಾರೋ ಅವರಿಗೇ ಕೊಟ್ಟುಕೊಳ್ಳಿ.

Sri Y. VEERAPPA (Hole narasipur).—A point of order, Sir. I have been seeing an Hon'ble Member coming to the dias and whispering something in the ears of the Speaker. Is there no sanctity to the Chair?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅವರು ಯಾವಾಗಲೂ ನಾವು ಎದ್ದು ನಿಂತೆವೆಂದರೆ ಹೀಗೆ point of order rise ಮಾಡುತ್ತಾರೆ. ಅವರು ಏಕೆ ಹೀಗೆ ಮಾಡುತ್ತಾರೆಂಬುದು ನನಗೆ ಗೊತ್ತು. ಅವರಿಗೂ ಸರ್ಕಾರಕ್ಕೂ ಏನೋ ತಿಕ್ಕಾಟವಿದೆ. ಆ ತಿಕ್ಕಾಟದ ದೆಸೆಯಿಂದ ಅವರೊಂದು plan ಮಾಡಿ, ನಮ್ಮನ್ನು ಸಿಟ್ಟಿಗೆಬ್ಬಿಸಿ ಸರ್ಕಾರದವರ ಮೇಲೆ ಗುದ್ದಾಡಲಿ ಎಂದು ಅವರು ಹೀಗೆ ಮಾಡುತ್ತಾರೆ.

ಉಪಾಧ್ಯಕ್ಷರು.—ಇವತ್ತಿನವರೆಗೆ ಕಾಂಗ್ರೆಸ್ಸಿನವರ ಕಡೆಯಿಂದ 13 ಜನ ಮಾತನಾಡಿದ್ದಾರೆ, ವಿರೋಧಿ ಪಕ್ಷದವರ ಕಡೆಯಿಂದ 11ಜನ ಮಾತನಾಡಿದ್ದಾರೆ. ಸ್ವತಂತ್ರ ಪಕ್ಷದವರಿಗೆ ಇದುವರೆಗೂ ಅವಕಾಶಕೊಟ್ಟಿರಲಿಲ್ಲವೆಂದು ಇಂದು ಕೊಟ್ಟಿದೆ. ಈ ಲೆಕ್ಕದ ಪ್ರಕಾರ ನೋಡಿದರೆ ತಮ್ಮ ಪಾರ್ಟಿಯವರಿಗೆ ಅವಕಾಶಕೊಟ್ಟಿದೆ.

ಶ್ರೀ ವೈ. ವೀರಪ್ಪ.—1947ರಿಂದ ಇಲ್ಲಿಯವರೆಗೆ ಎಷ್ಟು ಜನ ನಮ್ಮವರು ಮಾತನಾಡಿದ್ದಾರೆಂದು ಹೇಳಿಬಿಡಿ.

ಉಪಾಧ್ಯಕ್ಷರು.—ತಾವು ಆ ರೀತಿ ಹೇಳಕೂಡದು. ಎಷ್ಟು ಜನ ಬಡ್ಜೆಟ್ಟಿನ ಮೇಲೆ ಮಾತನಾಡಿದ್ದಾರೆಂದು ಹೇಳಿದ್ದೇನೆ. ನೀವೇ ನೋಡಬಹುದು.

(ಇದರ ಮೇಲೆ ವಿರೋಧ ಪಕ್ಷದ ಅನೇಕ ಸದಸ್ಯರು ಸಭೆಯಿಂದ ಹೊರಗೆ ಹೋದರು.)

ಶ್ರೀ ಬಿ. ಎಚ್. ಬೋರಣ್ಣಗೌಡ.—ಇದುವರೆಗೂ ಅನೇಕ ಸಾರಿ ಮಲೆನಾಡಿನ ಕಷ್ಟಪರಿಸ್ಥಿತಿಯನ್ನು ನಾನು ವಿವರಿಸಿದ್ದೇನೆ. ಮಲೆನಾಡಿನಲ್ಲಿ ರಸ್ತೆಗಳಿಲ್ಲ. ಇದ್ದರೂ ಅವೊಂದೂ ಸರಿಯಾದ ಸ್ಥಿತಿಯಲ್ಲಿಲ್ಲ. ಅವುಗಳನ್ನು ಸರಿಪಡಿಸಬೇಕೆಂಬ ತೀವ್ರಾಭಿಲಾಷೆಯೂ ಸರ್ಕಾರಕ್ಕಿಲ್ಲ. ಹೀಗಾಗಿ ಮಲೆನಾಡಿನಲ್ಲಿ ಅನೇಕ ಬೆಲೆ ಬಾಳುವ ಉತ್ತಮವಾದ ಬೆಳೆಗಳಾದರೂ ಅವುಗಳನ್ನು ಸಾಗಿಸುವುದಕ್ಕೆ ಅನುಕೂಲಗಳಿಲ್ಲದೆ ಕಷ್ಟಪಡಬೇಕಾಗಿದೆ. ಮಲೆನಾಡಿನ ಅಭಿವೃದ್ಧಿ ಸಾಧನೆ ಮುಖ್ಯವಾಗಿ ಮಲೆನಾಡಿನ ಸಂಚಾರ ಸೌಕರ್ಯವನ್ನವಲಂಬಿಸಿದೆ. ಮೇಲಾಗಿ ಮಲೆನಾಡಿನ ಮೂಲಕವೇ ಪರದೇಶಕ್ಕೆ ಹೋಗಬೇಕಾದ ಮ್ಯಾಂಗನೀಸ್ ಅದಿರು ಕಳುಹಿಸಲ್ಪಡಬೇಕಾಗಿದೆ. ಮಲೆನಾಡಿನ ಮೂಲಕ ಮಂಗಳೂರಿಗೋ ಬಟ್ಕಳ್ಳಿಗೋ ಹೋಗಿ ಅಲ್ಲಿಂದ ಮುಂದೆ ಸಾಗುತ್ತದೆ. ಈ ದೃಷ್ಟಿಯಿಂದಲೇ ಮಂಗಳೂರಿಗೆ ಹೋಗುವ ಹಾಸನ—ಮಂಗಳೂರು ರಸ್ತೆಯನ್ನು ಉತ್ತಮಪಡಿಸಬೇಕೆಂದು ಕೇಂದ್ರ ಸರ್ಕಾರದವರು ಎರಡುಕೋಟಿ ಹದಿನಾರು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ, ಈ ಸಂದರ್ಭದಲ್ಲಿ ಯಾರೋ ಕೆಲವರು ಈ ರಸ್ತೆಯನ್ನು deviate ಮಾಡಿ ಚಾರುವಾಡಿ ಘಾಟಿನ ಮೇಲೆ ಹೋಗುವ ರಸ್ತೆಯನ್ನು improve ಮಾಡುವುದಕ್ಕೆ ಈ ಹಣ ಉಪಯೋಗಿಸಬೇಕೆಂದು ಹೇಳುತ್ತಿದ್ದಾರೆ.

ಹಾಸನದಿಂದ ಸಕಲೇಶಪುರ-ಮೂಡಗೆರೆಯ ಮೇಲೆ ಈ ರಸ್ತೆ ಹೋಗುತ್ತದೆ. ಯಾರು ಸರ್ಕಾರಕ್ಕೆ ಈ ಸಲಹೆ ಕೊಟ್ಟರೋ ಗೊತ್ತಿಲ್ಲ. ಎರಡು ರಸ್ತೆಗಳನ್ನೂ improve ಮಾಡುವುದಾದರೆ ಒಳ್ಳೆಯದು. ಅಂತೂ ಈ ಹಾಸನ—ಮಂಗಳೂರು ರಸ್ತೆಯ improvementನ್ನು ಆದಷ್ಟು ಬೇಗ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಈಗ ನಮ್ಮ ಮದ್ರಾಸಿನ ಮತ್ತು ಬೊಂಬಾಯಿನ ಮಾನ್ಯ ಸ್ನೇಹಿತರು ನಮ್ಮಲ್ಲಿಗೆ ಬಂದಮೇಲೆ, ನಮ್ಮಲ್ಲಿದ್ದ ಪಟೇಲ್ ಶಾನುಭೋಗರುಗಳ ಮೇಲೆ ಒಂದು ವಿಚಿತ್ರ ಪರಿಣಾಮವನ್ನುಂಟುಮಾಡಿದೆ. ಆ ಭಾಗದಲ್ಲಿ ಪಟೇಲ್ ಶ್ಯಾನುಭೋಗರಿಗೆ ಸಂಬಳವನ್ನು ಹಿಂದಿನಿಂದಲೂ ಕೊಡುವ ಪದ್ಧತಿ ಇದೆ. ಅಲ್ಲಿ ಶ್ಯಾನುಭೋಗರಿಗೆ ಸರ್ವೆ ಟ್ರೈನಿಂಗ್ ಕೊಟ್ಟು ಸರ್ಕಾರಿ ರಿಕಾರ್ಡ್‌ಗಳನ್ನೂ ಕೂಡ maintain ಮಾಡುವ ಕೆಲಸವನ್ನು ವಹಿಸಿ ಸರ್ಕಾರಿ ಉದ್ಯೋಗಸ್ಥರನ್ನಾಗಿ ನೇಮಿಸಿಕೊಂಡಿದ್ದಾರೆ. ಮೈಸೂರಿನಲ್ಲಾದರೋ, ನಮ್ಮ ಶ್ಯಾನುಭೋಗರುಗಳಿಗೆ ಸಂಬಳಕ್ಕಿಂತ ಗಿಂಬಳವೇ ಜಾಸ್ತಿಯಾಗಿದೆ. ಕೊಡತಕ್ಕ ಅವರ ಪೋಟಿಗೆ ಸಂಭಾವನೆ ಸ್ವಲ್ಪವೇ ಇರಲಿ ಅವರ ಸಂಪಾದನೆ ಮಾತ್ರ ಹೆಚ್ಚಿಗೆಯೇ ಆಗಿರುತ್ತದೆ. ಇಂಥವರು, ಈಗ Village Officers Conference ಕರೆದು ತಮ್ಮನ್ನು ಖಾಯಂ ನೌಕರರಂತೆ ಭಾವಿಸಬೇಕೆಂದು ಕೇಳಿಕೊಳ್ಳಬೇಕೆಂದಿದ್ದಾರೆ. ಬಾಯಿದ್ದವನು ಬರದಲ್ಲಿ ಗೆದ್ದ ಎಂಬಂತೆ ಇವರುಗಳು ಹೀಗೆಲ್ಲಾ ಕೂಗಾಡಿ ತಮ್ಮನ್ನೇ ಶಾಶ್ವತವಾಗಿ ಇಟ್ಟುಕೊಳ್ಳಿ ಎಂದು ಕೇಳಿಕೊಳ್ಳ ಹತ್ತಿದ್ದಾರೆ, ಇಲ್ಲದಿದ್ದರೆ ತಮಗೆ ಕಾಂಪೆನ್ಸೇಷನ್ ಕೂಡ ಬೇಕೆಂದು ಹೇಳುತ್ತಿದ್ದಾರೆ. ಈ ಹೊತ್ತು ಹೊರ ದೇಶದಲ್ಲಿ, ಬೊಂಬಾಯಿ, ಮದ್ರಾಸ್ ಭಾಗದಲ್ಲಿ ಶ್ಯಾನುಭೋಗರುಗಳು ಲ್ಯಾಂಡ್ ರಿಕಾರ್ಡ್‌ಗಳನ್ನು maintain ಮಾಡುತ್ತಾರೆಂದು ಗೆಜೆಟ್ಟಿನಲ್ಲಿ ನೋಡಿ, ಆ ಅಧಿಕಾರವನ್ನು ಅಲ್ಲಿ ಕೊಟ್ಟ ಮೇಲೆ ಇಲ್ಲಿಯೂ ಏಕೆ ಕೊಡಕೂಡದೆಂದು, ಇಲ್ಲಿಯೂ ಮಾರ್ಚಿ ಒಂದನೆಯ ತಾರೀಖಿನಿಂದ ಅದಕ್ಕೆ ಅವಕಾಶ ಮಾಡಬೇಕೆಂದು, ನಿಮ್ಮ ನಿಪುಣರಾದ, ಬುದ್ಧಿವಂತರಾದ ಸೆಕ್ರೆಟರಿಗಳು ಸಲಹೆ ಮಾಡಿದ್ದಾರೆ. ಇಂದು ಹಳೆಯ ಮೈಸೂರಿನಲ್ಲಿ ಶ್ಯಾನುಭೋಗರಿಂದ ದೇಶಕ್ಕೆ ಏನು ಕಿರುಕುಳವಾಗುತ್ತಿದೆ, ಅವರಿಂದಾಗಿ ಎಷ್ಟು ಮನೆಗಳು ಮೈಸೂರು ದೇಶದಲ್ಲಿ ಹಾಳಾಗಿವೆ ಎಂಬುದನ್ನು ಹೇಳಬೇಕಾಗಿಲ್ಲ. ದೇಶದಲ್ಲಿ ಹಳ್ಳಿಗಾಡಿನ ಕಡೆ ನಡೆಯತಕ್ಕ ಸಿವಿಲ್ ಮತ್ತು ಕ್ರಿಮಿನಲ್ ಲಿಟಿಗೇಷನ್ನಿಗೆಲ್ಲಾ ಶಾನುಭೋಗರೇ ಬಹುಮಟ್ಟಿಗೆ ಕಾರಣರೆಂಬುದನ್ನು ಎಲ್ಲರೂ ತಿಳಿದಿದ್ದಾರೆ. ಅಂಥವರಿಗೆ ಈಗ ಲ್ಯಾಂಡ್ ರಿಕಾರ್ಡ್‌ಗಳ ದಾಖಲೆಯನ್ನು ಕೊಟ್ಟಿತೆಂದರೆ ಏನಾಗುತ್ತದೆ ತಾವೇ ಯೋಚನೆ ಮಾಡಬಹುದು. ಈಗೆಲ್ಲಾ ಯಾವ ಹಳ್ಳಿಯ ಪ್ರಜೆಯೇ ಆಗಲಿ ತಾಲ್ಲೂಕಾಫೀಸಿಗೆ ಹೋಗುವುದೆಲ್ಲಾ ತನ್ನ ಖಾತೆಯ ದಾಖಲೆಯನ್ನು ನೋಡುವುದಕ್ಕೆ ಮಾತ್ರ. ಈಗ ಅದನ್ನು ತಪ್ಪಿಸುತ್ತೇನೆಂದ ಹೇಳಿ ಶ್ಯಾನುಭೋಗರಿಗೆ ಕೊಟ್ಟರೆ ಅವನು ಸುಲಭವಾಗಿ ತಿಮ್ಮೇಗೌಡನ ಖಾತೆಯನ್ನು ಬೊಮ್ಮೇಗೌಡನಿಗೆಂದು ಬರೆದು, ಹಳ್ಳಿಯ ಜನರ ಜುಟ್ಟು ಹಿಡಿದುಕೊಂಡು ಗೂಟಹಾಕಿಕೊ ಡಿರಲಿ ಎಂದು ನಿಮ್ಮ ಸೆಕ್ರೇಟೇರಿಯಟ್ ಚತುರರು ಮಾಡಿದಾರೆ. ಎಲ್ಲೆಲ್ಲಿ ಜನರಿಗೆ ಯಾವಯಾವ ರೀತಿ ಕಿರುಕುಳ ಕೊಡಬೇಕು, ಅದಕ್ಕೆಲ್ಲ ಸರಿಯಾಗಿ ಮಾಡಿ, ಅವರುಗಳನ್ನು ಶಾಶ್ವತವಾಗಿ ನೆರೆಗೊಳಿಸಬೇಕೆಂದು ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಬಹುಶಃ ಇದನ್ನೆಲ್ಲಾ ಯೋಚನೆ ಮಾಡಿಲ್ಲವೆಂದು ಕಾಣುತ್ತದೆ. ಇಂಥದಕ್ಕೆ ಅವಕಾಶ ಕೊಡಕೂಡದೆಂದು ನಾನು ಹೇಳುತ್ತೇನೆ.

Sri C. J. MUCKANNAPPA (Gubbi).—When the Ministers are here, why do you attack the Secretaries?

ಶ್ರೀ ಬಿ. ಎಸ್. ಬೋರಣ್ಣಗೌಡ.—ಅಂಥ ಬುದ್ಧಿವಂತರಾದ ಸೆಕ್ರೆಟೆರಿಯವರನ್ನು ಇಟ್ಟುಕೊಂಡಿದ್ದಾರೆಂದು ಹೇಳಿದ.

ನಮ್ಮ ಮುಖ್ಯ ಮಂತ್ರಿಗಳು ನಾನಾ ಇಲಾಖೆಗಳನ್ನು ವಹಿಸಿಕೊಂಡಿದ್ದಾರೆ. ಪೋಲೀಸ್ ಇಲಾಖೆಯೂ ಅವರಿಗೆ ಸೇರಿದೆ. ಅದು ಅವರ ಕೈಯಲ್ಲಿರುವುದು ಒಳ್ಳೆಯದೇ. ಅದರ ಕೆಲಸವೇ ಅಷ್ಟೊಂದು ಇರುವಾಗ ಬಾಕಿ ಖಾತೆಗಳನ್ನು ಅವರು ತೆಗೆದುಕೊಳ್ಳಕೂಡದೆಂದು ನಾನು ಹೇಳುತ್ತೇನೆ.

ವ್ಯವಸಾಯದ ಇಲಾಖೆಯ ವಿಚಾರವಾಗಿ ಒಂದು ಮಾತು. ನಮ್ಮಲ್ಲಿ ಆಹಾರದ ಕೊರತೆ ಇದೆ. ಹೆಚ್ಚಿಗೆ ಆಹಾರವನ್ನು ಬೆಳೆದು ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕೆಂಬ ತತ್ವ ಎಲ್ಲಿ ನೋಡಿದರೂ ಕೇಳಿಬರುತ್ತಿದೆ. ಆದರೆ ವಾಸ್ತವವಾಗಿ ವ್ಯವಸಾಯದ ಇಲಾಖೆಯಲ್ಲಿನ ಅಧಿಕಾರಿಗಳನ್ನು ನೋಡಿದರೆ, ಅವರಲ್ಲಿ ಬಹುಜನ ಹಿತೋಕ್ತಿ ಹೇಳುವವರೇ ಆಗಿದ್ದಾರೆ. ಆ ಇಲಾಖೆಯಲ್ಲಿ ಇವತ್ತು ಇರತಕ್ಕ ಎಲ್ಲ ಅಧಿಕಾರಿಗಳನ್ನೂ ಸೇರಿಸಿದರೆ ಒಂದು ದೊಡ್ಡ ಸಭೆಯನ್ನೇ ಮಾಡಬಹುದು. ಅವರೇನು ಕೆಲಸ ಮಾಡುತ್ತಿದ್ದಾರೆ? ಎಲ್ಲಿ ನೋಡಿದರೂ ಭಾಷಣಗಳು. ಭಾಷಣಗಳನ್ನು ಕೇಳಿಕೇಳಿ ಎಲ್ಲರಿಗೂ ಸಾಕಾಗಿದೆ. ನಾನು ಇದೇ ವೇದಿಕೆಯ ಮೇಲೆ ಅನೇಕ ಸಾರಿ ಹೇಳಿದ್ದೇನೆ. ಯಾವಯಾವ ಅಧಿಕಾರಿಗಳು ಈ ಇಲಾಖೆಯಲ್ಲಿದ್ದರೋ ಅವರು ಪ್ರತಿಯೊಬ್ಬರೂ ಒಂದೊಂದು demonstration farm ಏರ್ಪಡಿಸಲಿ ಎಂದು ಹೇಳಿದರೆ, ಕೇವಲ ಅಲ್ಲಿಗೆ ಇಲ್ಲಿಗೆ ಕಾಗದಪತ್ರಗಳನ್ನು ಬರೆಯುವುದರಲ್ಲಿ ಮುಗಿಯಿತೇ ಹೊರತು, ಅಥವಾ litigation ನಡೆಸುವುದರಲ್ಲಿ ಆಯಿತೇ ಹೊರತು, ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಒಬ್ಬ ಅಧಿಕಾರಿಯೂ ಇಲ್ಲ. ರೈತರಿಗೆ ಒಳ್ಳೆಯ ಬೀಜಗಳನ್ನು ಹಂಚುವುದು, ಸಮಯಕ್ಕೆ ಸರಿಯಾಗಿ ಒಳ್ಳೆಯ ಗೊಬ್ಬರವನ್ನು ಹಂಚುವುದು ಅಥವಾ ಯಾವ ಕಾಲದಲ್ಲಿ ಯಾವ ಗೊಬ್ಬರವನ್ನು ಹಂಚಿಸಬೇಕೆಂದು ಸಲಹೆ ಕೊಡುವುದು—ಈ ವಿಚಾರದಲ್ಲಿ ಯಾವ ಅಧಿಕಾರಿಯೂ ಗಮನ ಕೊಡುತ್ತಿಲ್ಲ. ಮೂರುಹೊತ್ತೂ ಭಾಷಣ ಮಾಡುವುದರಲ್ಲಾಯಿತು ಅವರ ಕೆಲಸ. ಈ ಇಲಾಖಾ ಮಂತ್ರಿಗಳು ಇದನ್ನೆಲ್ಲಾ ಸರಿಯಾಗಿ ನೋಡಿಕೊಳ್ಳುತ್ತಿಲ್ಲವಾದ್ದರಿಂದ ಈ ಇಲಾಖೆ ಅಷ್ಟು ಕೆಟ್ಟು ಹೋಗಿದೆ.

ಇಷ್ಟು ವ್ಯವಸಾಯ ಕೆಟ್ಟಿರುವಲ್ಲಿ, ಕಂಟ್ರೋಲ್ ಆರ್ಡರ್‌ಗಳೆಂದು ಬೇರೆ ತಂದಿದ್ದಾರೆ: ಹಳ್ಳಿಯ ಜನರು ಕಂಟ್ರೋಲ್ ಹೋಯಿತು, ಸುಖವಾಗಿರೋಣ ಎಂದಿದ್ದರೆ ಈಗ ಮತ್ತೆ ಬಂತು. ಬೆಳೆದವನು ಮಿಲ್ಲಿಗೆ ತೆಗೆದುಕೊಂಡು ಹೋದತಕ್ಷಣ ಅವನಿಗೆ ಅರ್ಧ ಕೊಡಬೇಕಂತೆ. ಅವರಿಗೆ ಯಾರು ಈ ಸಲಹೆ ಮಾಡಿದರೋ, ಅಂಥ ಬುದ್ಧಿವಂತರು ಸೆಕ್ರೆಟೇರಿಯಟ್ಟಿನಲ್ಲಿರುವವರು ಯಾರೋ ಗೊತ್ತಿಲ್ಲ.

12-30 P.M.

ಸಾಧಾರಣವಾಗಿ ಗವರ್ನ್‌ಮೆಂಟ್ ಆಫ್ ಇಂಡಿಯಾ ಹೇಳಿಲ್ಲ.

(ಶ್ರೀ ಬಿ. ಎನ್. ಬೋರಣ್ಣಗೌಡ)

ಮೂರು ವರ್ಷಕ್ಕೊಂದುಸಾರಿ ಅಧಿಕಾರಿಗಳನ್ನು ವರ್ಗ ಮಾಡಬೇಕೆಂದು ಗವರ್ನ್‌ಮೆಂಟ್ ಆರ್ಡರ್ ಇದೆ. ಅದಕ್ಕೆ ಅನುಸಾರವಾಗಿ ಕೆಲವು ಸೆಕ್ರೆಟರಿಗಳನ್ನ ಬದಲಾವಣೆ ಮಾಡಿಯೇ ಇಲ್ಲ. ಅವರುಗಳದೂ, ಡೆಪ್ಯುಟಿ ಕಮಿಷನರದೂ ಎಲ್ಲಾ ಒಂದೇ ಗ್ರೇಡು. ಮೂರು ವರ್ಷಗಳಿಗೆ ಹೆಚ್ಚಾಗಿ ಇರತಕ್ಕಂಥವರನ್ನು ಸೆಕ್ರೆಟೇರಿಯಟ್ಟಿನಿಂದ ಹೊರಗಡೆ ಕಳುಹಿಸಿಕೊಡಿ. ಅವರು ತೀರ ಬುದ್ಧಿವಂತರಾಗಿದ್ದರೆ, ಅವರನ್ನು ಸೆಂಟರಿಗೆ ಕಳುಹಿಸಿಕೊಡಿ. ಅವರನ್ನು ಇಟ್ಟುಕೊಂಡಿರುವುದರಿಂದ ಅನಾನುಕೂಲವಾಗಿದೆ. ಅವರು ಮಾಡತಕ್ಕಂಥ ಆರ್ಡರುಗಳು ಜನಗಳ ಮೇಲೆ ಒಂದುತರಹ ಪರಿಣಾಮವನ್ನುಂಟುಮಾಡಿದೆ; ಕಾಂಗ್ರೆಸ್ಸಿನಮೇಲೆ ಜನರಿಗೆ ಜಿಗುಪ್ಸೆಯಾಗಬೇಕು ಎನ್ನತಕ್ಕಂಥ ಮನೋಭಾವನೆಯನ್ನು ಅವರು ಇಟ್ಟುಕೊಂಡಿದ್ದಾರೆಂದು ನಾನು ಹೇಳುತ್ತೇನೆ. ಇದನ್ನು ಸಾರಿ ಸಾರಿ ಹೇಳುತ್ತಿದ್ದೇನೆ. ಅವರು ಮಾಡತಕ್ಕಂಥ ಆರ್ಡರುಗಳು ಗೊತ್ತಾಗುವುದೇ ಇಲ್ಲ. ಬೆಳಿಗ್ಗೆ ಸಾಯಂಕಾಲವಾದರೆ ಅವರದು ಒಂದು ಗುಂಪು ಇದೆ. ಆ ಗುಂಪಿನಲ್ಲಿ ಯಾರುಯಾರನ್ನು ಹಾಳುಮಾಡಬೇಕೆಂದು ಚರ್ಚಿಸುತ್ತಿರುತ್ತಾರೆ. ಸಾಯಂಕಾಲ ಐದೂವರೆ ಆರಕ್ಕೆ ಗುಂಪು ಸೇರಿ, ನಾಳೆ ಬೆಳಿಗ್ಗೆ ಏನು ಕೆಲಸಮಾಡಬೇಕೆಂದು ಯೋಚನೆಮಾಡುವ ಬದಲು, ಪ್ಲಾನ್ ಮಾಡುತ್ತಾ ಇರುತ್ತಾರೆ. ಈ ಗುಂಪನ್ನು ಒಡೆಯದೆಹೋದರೆ ಕ್ಯಾಬಿನೆಟ್ಟಿಗೆ ಮಹಾ ಕಷ್ಟವಾಗುತ್ತದೆ. ಖಂಡಿತವಾಗಿಯೂ ಆಗುತ್ತದೆ ಎಂದು ಸಾರಿ ಸಾರಿ ಈ ವೇದಿಕೆಯಿಂದ ಹೇಳುತ್ತಿದ್ದೇನೆ.

Dr. R. NAGAN GOWDA (Hospet).—The Secretaries are not members of this Assembly and they are not in a position to defend themselves. Is the Hon'ble Member correct in attacking them here?

Mr. SPEAKER.—He is not attacking the individuals. He can criticise the administration and if he feels there is corruption in the administration, he can speak about it.

Sri B. N. BORANNA GOWDA.—If he is a friend of them let him say so. Constitutionನಲ್ಲಿರತಕ್ಕಂಥ ಸೇಫ್‌ಗಾರ್ಡನ್ನು ಅಮೆಂಡ್‌ಮಾಡಿದರೆ, ಯಾರನು ಬೇಕಾದರೂ ಅಪಾಯಿಂಟ್ ಮಾಡುತ್ತೀರ ಹತ್ತಿರದವರನ್ನೇ ಅಪಾಯಿಂಟ್ ಮಾಡಿಕೊಳ್ಳುತ್ತೀರಿ. Sixty classes of appointments ಸರ್ಕಾರದವರು ಮಾಡಬಹುದೆಂದು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಪರವಾನಿಗೆ ಕೊಟ್ಟಿದ್ದಾರೆ. ರೂಲ್ಸು, ಕಾನೂನು, ಕಾನ್‌ಸ್ಟಿಟ್ಯೂಷನ್ನಿನಲ್ಲಿ ಇದ್ದರೂಕೂಡ ಅವರನ್ನು ಕನ್‌ಸಲ್ಟ್ ಮಾಡದೆಯೇ ಏಕೆ ಅಪಾಯಿಂಟ್ ಮಾಡುತ್ತೀರಿ? ಸೆಕ್ಷನ್ 309, 320(5) ನೋಡಿ. ಇಲ್ಲಿಯವರೆಗೂ ಮಾಡತಕ್ಕದು ಎಂದು ಈ ಸಭೆಯ ಮುಂದೆ ತಂದಿಟ್ಟಿದ್ದಾರೆಯೆ? ಏನು ಸೇಫ್‌ಗಾರ್ಡ್ ಇದೆ? ಬೀದಿಯಲ್ಲಿರತಕ್ಕಂಥವನಿಗೆ 900-1,000 ಕೊಟ್ಟು ಅಪಾಯಿಂಟ್ ಮಾಡುವುದೇ? ಹೀಗೆ ಮಾಡತಕ್ಕಂಥ ರೀತಿಯನ್ನು ಈ ಸಭೆಯ ಮುಂದೆ ತರಬೇಕೆಂದು ಕಾನೂನು ಇದ್ದರೂಕೂಡ, ವಿಚಾರಗಳನ್ನು ನಮ್ಮ ಮುಂದೆ ತಂದಿಡದೆ ಮುಚ್ಚುಮರೆಮಾಡುತ್ತಿರುವುದನ್ನು ನೋಡಿದವರಿಗೆ ಸರ್ಕಾರದ ವಿಷಯದಲ್ಲಿ ಏನು ಭಾವನೆ ಮೂಡಬೇಕು? ನಮಗೆ ಬೇಕಾದವರಿಗೆ 900—1,000 ರೂಪಾಯಿ ಕೊಟ್ಟು, ಲೆಕ್ಚರರ್ ಮುಂತಾದ ಕೆಲಸಗಳಿಗೆ ಅಪಾಯಿಂಟ್ ಮಾಡಿ ಕಳುಹಿಸಬೇಕೆಂದು ಹೀಗೆ ಮಾಡಿದ್ದೀರೋ? ಎಷ್ಟು ಪ್ರಪೋರ್ಷನ್ನಿರಬೇಕು ಮುಂತಾದ ಅಂಶಗಳನ್ನು ಕೇಳುವವರಾರು? ಪಬ್ಲಿಕ್ ಸರ್ವೀಸ್ ಕಮಿಷನ್ ರೂಲ್ಸ್ ಪ್ರಕಾರ ಈ ಅಪಾಯಿಂಟ್‌ಮೆಂಟುಗಳನ್ನು ಮಾಡಿದ್ದೀರ? ಏನೂ ಯೋಚನೆಮಾಡದೆ, ಬೇಕಾದವರನ್ನು, ನಿಮಗೆ ಹತ್ತಿರದವರನ್ನು ಪ್ರಮೋಟ್ ಮಾಡಿದರೆ, ಬಡವರ ಮಕ್ಕಳನ್ನು ಕೇಳುವವರು ಯಾರು? ಇವತ್ತಿನ Constitutionನಲ್ಲಿ ಮೆರಿಟ್ ರೆಕಗ್‌ನೈಸ್ ಮಾಡಬೇಕೆಂದು ಎಲ್ಲಿದೆ? ಒಂದೇ ಕೋಮಿನವರು ಮೆರಿಟ್ ಮೇಲೆ ಬರಬಹುದು. ಅವರಿಗೇ ಸರ್ಕಾರ ಉದ್ಯೋಗ ಕೊಟ್ಟರೆ ಬಾಕಿಯವರು ಎಲ್ಲಿಗೆ ಹೋಗಬೇಕು? Constitutionನಲ್ಲಿ ಹಾಗೆ ಹೇಳಿಲ್ಲ. ಸೇಫ್ ಗಾರ್ಡ್ ಎಲ್ಲರಿಗೂ ಇದೆ. ಬ್ಯಾಕ್‌ವರ್ಡ್ ಕಮ್ಯೂನಿಟಿಯವರಿಗೆ, ಹಿಂದುಳಿದವರಿಗೆ, ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ, ಎಲ್ಲರಿಗೂ ಸೇಫ ಗಾರ್ಡ್ ಕೊಟ್ಟಿದ್ದಾರೆ. ಈ ರೀತಿ ಸೇಫ್‌ಗಾರ್ಡ್ ಇದ್ದರೂಕೂಡ, ಅದನ್ನು ಮುಚ್ಚಿ ಕೆಲಸಕಾರ್ಯಗಳನ್ನು ಮಾಡಿ ದೇಶದಲ್ಲಿರತಕ್ಕಂಥ ಜನಕ್ಕೆ ನಿರುತ್ಸಾಹವನ್ನು ಉಂಟುಮಾಡುತ್ತಿದ್ದಾರೆ. ಇದು ಆಗಕೂಡದು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ; ನಾವೂ ಎಲ್ಲಾ ಜನತೆಯಹಾಗೆ ಮುಂದೆ ಬರಬೇಕು, ಜೀವನಮಾಡಬೇಕು ಎಂಬ ಮನೋಭಾವನೆ ಬಂದು, ಅದಕ್ಕೆ ಅವಕಾಶ ದೊರೆತರೆ, ಸರ್ಕಾರದ ಕೆಲಸಕಾರ್ಯಗಳಲ್ಲಿ ಜನಗಳಿಗೆ ನಂಬಿಕೆ ಬರುತ್ತದೆ.

The House adjourned at Thirty-seven Minutes past Twelve of the Clock and reassembled at Forty Minutes past Three of the Clock.

[MR. SPEAKER in the Chair]

Sri C. M. ARUMUGHAM (Kolar Gold Fields).—I would like to submit that I have given notice of a privilege motion and the Speaker was kind enough to say that he would give a ruling on Thursday.

Mr. SPEAKER.—I wanted to take it up in the morning. But the Hon'ble Member was not there. We will take it up tomorrow.

ಶ್ರೀ ಎಚ್. ವಿ. ವೀರೇಗೌಡ (ಮಳವಳ್ಳಿ).—ಮಾನ್ಯ ಸಭಾಪತಿಗಳೇ, 1959-60ನೆಯ ಸಾಲಿನ ಉಳಿತಾಯದ ಆಯವ್ಯಯ ಬಡ್ಜೆಟ್ಟನ್ನು ನಮ್ಮ ಮುಂದೆ ಇಟ್ಟಿರುವುದಕ್ಕೋಸ್ಕರ ನಮ್ಮ ಸರ್ಕಾರದ ಹಣಕಾಸಿನ ಸಚಿವರನ್ನು ವಂದಿಸುತ್ತಾ, ಇಂಥ ಆಯವ್ಯಯ ಪಟ್ಟಿಗೆ ಮಂಜೂರಾತಿ ಕೊಡುವಾಗ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸಿ, ಅವುಗಳನ್ನು ಮುಂದಿಡುವುದಕ್ಕೆ ಇಚ್ಛೆಪಡುತ್ತೇನೆ. ಈ ಆಯವ್ಯಯ ಪಟ್ಟಿಯಲ್ಲಿರುವ ಹಣವನ್ನು ಯಾವುದೇ ಸರ್ಕಾರ

ಇದ್ದರೂ ಮಾನ್ಯ ಸದಸ್ಯರುಗಳ ಆಜ್ಞೆಯನ್ನು ಪಡೆದು ಅನಂತರ ದೇಶದಲ್ಲಿ ನಾನಾ ಭಾಗಗಳಿಗೆ ನಾನಾ ಇಲಾಖೆಗಳ ಮೂಲಕ ಖರ್ಚುಮಾಡುವುದು ಸಾಂಪ್ರದಾಯಿಕವಾಗಿ ಬಂದಿದೆ. ಅಂದರೆ, ದೇಶದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಅನುಮತಿಕೊಡತಕ್ಕಂಥ ಈ ಸಭೆಯ ಮುಂದೆ ಯಾವಯಾವ ಬಾಬಿಗೆ ಎಷ್ಟು ಖರ್ಚಾಯಿತು, ಯಾವ ಯಾವ ಇಲಾಖೆಗೆ ಎಷ್ಟು ಹಣವನ್ನು ಒದಗಿಸಿದ್ದರು, ಆ ಇಲಾಖೆಯವರು ಅದನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡಿದ್ದಾರೆಯೇ ಇಲ್ಲವೇ, ಖರ್ಚುಮಾಡುವುದಕ್ಕೆ ಸಾಧ್ಯವಿಲ್ಲದೆ ಲ್ಯಾಪ್ಸ್ ಮಾಡಿಕೊಂಡಿದ್ದಾರೆಯೇ, ಲ್ಯಾಪ್ಸ್ ಆಗಿದೆಯೇ ಎನ್ನತಕ್ಕ ವಿಚಾರದಲ್ಲಿ ಪ್ರತಿಯೊಂದು ಇಲಾಖೆಯ ಪ್ರೋಗ್ರೆಸ್ ರಿಪೋರ್ಟನ್ನು ಇಟ್ಟು ಇಂಥ ಸಂದರ್ಭದಲ್ಲಿ ಅದನ್ನು ಪರಿಶೀಲಿಸಿ ಅಲ್ಲಿ ಏನಾದರೂ ಅಧಿಕಾರವರ್ಗದವರು ಲೋಪಗಳನ್ನು ಮಾಡಿದ್ದಾರೆಯೇ, ಖರ್ಚುಮಾಡಲಿಕ್ಕೆ ಸಾಧ್ಯವಾಗದಿದ್ದರೆ, ಖರ್ಚುಮಾಡಲು ಸಾಧ್ಯವಾಗದೆ ಇರಲು ಕಾರಣಗಳೇನು, ಇತ್ಯಾದಿಗಳನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನೂ ಮತ್ತು ಪರಿಹಾರಗಳನ್ನೂ ಸೂಚಿಸುವುದಕ್ಕೆ ಹೆಚ್ಚಿನ ಸಹಾಯವಾಗುತ್ತಿತ್ತು ಎಂದು ನನಗನ್ನಿಸುತ್ತದೆ. ಈ ರೀತಿ ವರದಿಗಳನ್ನು ಇಡುವುದು ಸಂಪ್ರದಾಯಿಕವಾಗಿ ನಡೆದುಬರುತ್ತಿತ್ತು. ಕೆಲವು ದಿವಸಗಳಿಂದ ನಿಂತುಹೋಗಿದೆ. ಹಣವನ್ನು ಕೊಡತಕ್ಕ ಯಜಮಾನರುಗಳು ಯಾವಯಾವ ಬಾಬಿನಲ್ಲಿ ಖರ್ಚಾಗದೆ ಉಳಿದಿದೆ, ಯಾವಯಾವ ಬಾಬಿನಲ್ಲಿ ಲೋಪ ಆಗಿದೆ ಮತ್ತು ಲ್ಯಾಪ್ಸ್ ಆಗಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಪ್ರತಿಯೊಂದು ಇಲಾಖೆಯ ಪ್ರೋಗ್ರೆಸ್ ರಿಪೋರ್ಟಿನ ಪ್ರತಿಗಳನ್ನು ಮಾನ್ಯ ಸದಸ್ಯರಿಗೆ ಕೊಡುವುದು ಒಳ್ಳೆಯದು ಎಂದು ನಾನು ಸೂಚನೆ ಮಾಡುತ್ತೇನೆ. ನಾವು ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಸಂದರ್ಭದಲ್ಲಿ ದೇಶದಲ್ಲಿ ಸಾಮಾನ್ಯ ಜನಗಳಿಗೆ ಅಗತ್ಯವಾದ ಸಣ್ಣಪುಟ್ಟ ವಿಷಯಗಳನ್ನು ಪೂರೈಸಿಕೊಳ್ಳದೆ ಇರುವುದು ಬಹಳ ವಿಷಾದಕರ ಎಂದು ಹೇಳಬೇಕಾಗಿದೆ. ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿದರೂ ದೊಡ್ಡದೊಡ್ಡ ಅಣೆಕಟ್ಟುಗಳನ್ನು ಕಟ್ಟಿದರೂ ದೇಶಾಭಿವೃದ್ಧಿಯ ಕಾರ್ಯಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದರೂ ಸಾಮಾನ್ಯವಾಗಿ ಗ್ರಾಮಾಂತರಗಳಲ್ಲಿ ವಾಸಮಾಡತಕ್ಕ ಜನಗಳಿಗೆ ಕೆಲವು ಅಗತ್ಯವಾದ ವಿಷಯಗಳನ್ನು ಮಾಡಿಕೊಡದೇಹೋದರೆ ಅವನು ನಮ್ಮಮೇಲಾಗಲಿ, ಸರ್ಕಾರದ ಮೇಲಾಗಲಿ ವಿಶ್ವಾಸವನ್ನು ಉಳಿಸಿಕೊಂಡುಹೋಗುವುದು ಕಷ್ಟವಾಗುತ್ತದೆ. ದೊಡ್ಡ ದೊಡ್ಡ ಯೋಜನೆಗಳು ಸಾಮಾನ್ಯವಾಗಿ ಮನುಷ್ಯನಿಗೆ ಗೊತ್ತಾಗುವುದಿಲ್ಲ. ಅವನಿಗೆ ಬೇಕಾದ ಕೆಲವು ವಿಷಯಗಳ ಕಡೆ ಸರ್ಕಾರದವರಾಗಲಿ ಅಥವಾ ಸರ್ಕಾರದ ಪ್ರತಿನಿಧಿಗಳಾಗಿ ಕೆಲಸಮಾಡತಕ್ಕ ಸ್ಥಳಾಧಿಕಾರಿಗಳಾಗಲಿ, ಹೆಚ್ಚು ನಿಗಾ ಕೊಡುತ್ತಿಲ್ಲ ಎನ್ನುವ ವಿಷಯವನ್ನು ಸೂಚಿಸಬೇಕಾಗಿದೆ. ನಾವೇ ಆಗಲಿ, ನಮ್ಮ ಮಾನ್ಯ ಸಚಿವರುಗಳೇ ಆಗಿರಲಿ, ಗ್ರಾಮಾಂತರ ಪ್ರದೇಶಗಳ ಸಂಪರ್ಕ ಬಹಳ ಜಾಸ್ತಿ ಇಟ್ಟುಕೊಂಡಿರುವವರು ಪ್ರತಿಯೊಬ್ಬ ಮನುಷ್ಯನಿಗೂ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ, ವಾಸಕ್ಕೆ ಮನೆ ಇವುಗಳನ್ನು ಒದಗಿಸತಕ್ಕಂಥ ಒಂದು ಸಮಾಜವನ್ನು ಕಟ್ಟಬೇಕು; ಇಂಥ ಸಮಾಜವನ್ನು ಕಟ್ಟತಕ್ಕ ವಿಷಯದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ ಎನ್ನುವ ವಿಷಯವನ್ನು ನಾವೇ ಆಗಲಿ, ನಮ್ಮ ಮುಖಂಡರುಗಳೇ ಆಗಲಿ ಹಳ್ಳಿಗಾಡಿನಲ್ಲಿ ಪ್ರವಾಸಮಾಡುವಾಗ ಹೇಳುತ್ತಲೇ ಇದ್ದೇವೆ. ಹಳ್ಳಿಗಾಡಿನಲ್ಲಿ ಮಾನ್ಯಮಂತ್ರಿಗಳು ಪ್ರವಾಸಮಾಡುವ ಕಾಲದಲ್ಲಿ ಸಣ್ಣಪುಟ್ಟ ವಿಷಯಗಳನ್ನು ಗ್ರಾಮಾಂತರದ ಹಳ್ಳಿಗಾಡಿನ ಜನರು ಅವರ ಗಮನಕ್ಕೆ ಅನೇಕಸಾರಿ ತಂದಿದ್ದಾರೆ. ಆದರೆ ಅದರ ನಿವಾರಣೋಪಾಯಗಳು ಎಷ್ಟರಮಟ್ಟಿಗೆ ಆಗುತ್ತಿವೆ ಎಂದರೆ ಸ್ವಲ್ಪ ನಿಧಾನವಾಗುತ್ತಿವೆ. ಒಂದು ವಿಷಯ ಹೇಳುತ್ತೇನೆ. ಮೈಸೂರು ದೇಶದಲ್ಲಿ ಗ್ರಾಮದ ಬಡಾವಣೆಗೆ ಸರ್ಕಾರದವರು ದುಡ್ಡು ಕೊಟ್ಟಿದ್ದಾರೆ. ಬಡವರೇ ಆಗಲಿ ಪುಣ್ಯವಂತರೆ ಆಗಲಿ ಅವರಿಗೆ ವಾಸಕ್ಕೆ ಇಕ್ಕಟ್ಟಾದ ಪ್ರದೇಶ ಇದ್ದು ವಾಸಕ್ಕೆ ಮನೆಗಳಿಲ್ಲ. ಸಾಮಾನ್ಯವಾಗಿ ಬಡವನಿಗೆ ಅನುಕೂಲವಿರುವಕಡೆ ವಾಸಮಾಡಲು ಗ್ರಾಮಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಜಾಗಗಳನ್ನು ಕೊಡಿಸಿಕೊಡಿ ಎಂದು ಸರ್ಕಾರವನ್ನು ಪ್ರಾರ್ಥನೆಮಾಡಿದರೆ ಹತ್ತು-ಹದಿನೈದು-ಇಪ್ಪತ್ತು ವರ್ಷಗಳಿಂದಲೂ ಕೂಡ ಗ್ರಾಮದ ಬಡಾವಣೆಗಳ ಕೆಲಸ ಆಗಿಲ್ಲ ಎಂದರೆ ತಾವು ಸಾಮಾನ್ಯ ರೈತರಿಗೆ ಎಷ್ಟರಮಟ್ಟಿಗೆ ಸಹಾಯ ಮಾಡುತ್ತೀರಿ ಎಂಬುದನ್ನು ಯೋಚನೆಮಾಡಬೇಕಾಗಿದೆ. ಮಾನ್ಯ ರೆವಿನ್ಯೂ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ, ಇತರ ಇಲಾಖೆಗಳ ಸಪ್ತಾಹಮಾಡುತ್ತಾ ಇರುವಾಗ ನಾವು ಏತಕ್ಕೆ ಕೈಕಟ್ಟಿಕೊಂಡು ಕುಳಿತಿರಬೇಕೆಂದು ರೆವಿನ್ಯೂ ಇಲಾಖೆಯವರೂ ಸಪ್ತಾಹಮಾಡಿ ಎಂದು ಹೇಳಿದೆ. ಶ್ರೀ ಚನ್ನಬಸಪ್ಪನವರು ಮೈನರ್ ಇರ್ರಿಗೇಷನ್ ಸಪ್ತಾಹಮಾಡಿದರು. ಹಾಗೆಯೇ ರೆವಿನ್ಯೂ ಇಲಾಖೆಯಲ್ಲಿ ಒಂದು ಸಪ್ತಾಹಮಾಡಿ ಜನಗಳ ಆಶೆ ಏನಿದೆ ಅದನ್ನು ಈಡೇರಿಸಿ, ಈಗ ಎರಡುಮೂರು ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದಿರುವುದಕ್ಕೆ ತಕ್ಕ ಪರಿಹಾರವನ್ನು ಕೊಡುತ್ತಾರೆಂದು ನಂಬಿದ್ದೇನೆ. ಯಾವಯಾವ ಗ್ರಾಮಕ್ಕೆ ಬಡಾವಣೆ ಆಗಬೇಕೆಂದು ಯಾರು ಕೇಳಿದ್ದಾರೋ ಅದು ಮೂರು ತಿಂಗಳಲ್ಲಿ ಆಗುವ ಕೆಲಸವಾಗಿದ್ದರೂ ಅದನ್ನು 18 ವರ್ಷಗಳಿಂದಲೂ ಮಾಡಿಲ್ಲ ಎಂದರೆ ಜನಗಳಿಗೆ ಸರ್ಕಾರದ ಮೇಲೆ ಎಷ್ಟುವಿಶ್ವಾಸ ಬರುತ್ತದೆ, ಎನ್ನುವ ವಿಷಯವನ್ನು ಈ ಸಮಯದಲ್ಲಿ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಟಿ. ಮರಿಯಪ್ಪ.—ಸ್ಪೆಸಿಫಿಕ್ ಕೇಸಸ್ ಇದ್ದರೆ ಹೇಳಿ. ಅಪ್ಲಿಕೇಷನ್ ಹಾಕಿ ಸ್ಟೇ ಆರ್ಡರ್ ತೆಗೆದುಕೊಂಡು ತಡೆಹಾಕಿರುವ ಕೇಸುಗಳು ಇರುತ್ತವೆ. ತಕರಾರು ಇಲ್ಲದೆ ಇರುವ ಸ್ಪೆಸಿಫಿಕ್ ಕೇಸಸ್ ಇದ್ದರೆ ತಕ್ಷಣ ಮಾಡಿಕೊಡುತ್ತೇನೆ.

ಶ್ರೀ ಎಚ್. ವಿ. ವೀರೇಗೌಡ.—ಬರೆದುಕೊಡುತ್ತೇನೆ. ಒಂದಲ್ಲ ಎರಡಲ್ಲ, ಇಪ್ಪತ್ತು ಹೇಳುತ್ತೇನೆ. ಸ್ಟೇ ಆರ್ಡರ್ ಆಗಿರುವುದಿಲ್ಲ. ಒಂದು ಸಮಯ ಜಮೀನ್ದಾರ ಜಮೀನು ಉಳಿಸಿಕೊಳ್ಳಬೇಕು ಎಂದು ಸ್ಟೇಮಾಡಿದರೆ, ಜಮೀನ್ದಾರ ಸ್ವಾರ್ಥತೆಯಿಂದ ಸ್ಟೇಮಾಡಿಸಿದರೆ ಎಷ್ಟು ವರ್ಷಗಳಾದರೂ ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಮರಿಯಪ್ಪ.—ತಕರಾರು ಇದ್ದರೆ ಅಂಥ ಕಡೆ ಸ್ವಲ್ಪ ನಿಧಾನವಾಗಿದೆ.

ಶ್ರೀ ಎಚ್. ವಿ. ವೀರೇಗೌಡ.—ಆರು ತಿಂಗಳು ನಿಧಾನವಾಗಲಿ ಒಂದು ವರ್ಷ ನಿಧಾನವಾಗಲಿ; ಆದರೆ ವರ್ಷಾನುಗಟ್ಟಲೆ ನಿಧಾನವಾದರೆ ಅದರಿಂದ ಜನಗಳಿಗೆ ಏನು ಪ್ರಯೋಜನವಾಗುತ್ತದೆ? ಸಾಮಾನ್ಯ ಜನಗಳಿಗೆ ತೊಂದರೆಯಾಗುತ್ತದೆ. ಈಗ ಜಮೀನು ಇಲ್ಲದೆ ಇರುವ ಬಡವರಿಗೆ ಜಮೀನು ಕೊಡಬೇಕು

(ಶ್ರೀ ಎಚ್. ವಿ. ವೀರೇಗೌಡ)

ಎಂದು ಯೋಚನೆಮಾಡಿದ್ದಾರೆ, ಕಾನೂನು ಮಾಡಿದ್ದಾರೆ, ಕಮಿಟಿ ಮಾಡಿದ್ದಾರೆ. ಯೋಚನೆ ಮಾಡುವುದರೊಳಗೆ ಅಷ್ಟು ಇಷ್ಟು ಜಮೀನು ಇದ್ದರೆ ಅದನ್ನು ಮಧ್ಯೆಇರುವ ಜನಗಳು ಅಧಿಕಾರಿಗಳನ್ನು ಜೇಬಿಗೆ ಹಾಕಿಕೊಂಡು ಜಮೀನು ತಮಗೆ ಮಾಡಿಸಿಕೊಂಡಿದ್ದಾರೆ. ಅನ್‌ಆಥರೈಜ್ಡ್‌ಆಗಿ ಜಮೀನು ಕೊಟ್ಟುಬಿಟ್ಟಿದ್ದಾರೆಂದು ಹೇಳಿದರೆ, ತಹಸೀಲ್‌ದಾರರ ರಿಪೋರ್ಟ್ ಬಂದರೆ, ಅದನ್ನು ರೆವಿನ್ಯೂ ಮಂತ್ರಿಗಳು ಓವರ್‌ಲುಕ್ ಮಾಡುವುದಕ್ಕೆ ಆಗಲಿಲ್ಲ. ಈಗಾಗಲೇ ಪೊಜಿಷನ್ ಕೊಟ್ಟುಬಿಟ್ಟಿದ್ದಾರೆ. ತಹಸೀಲ್‌ದಾರರ ಮನಸ್ಸನ್ನು ಒಲಿಸಬೇಕೇ ಹೊರತು ರೆವಿನ್ಯೂ ಮಂತ್ರಿಗಳ ಮನಸ್ಸನ್ನು ಒಲಿಸಿದರೆ ಆಗುವುದಿಲ್ಲ. ಈಗಾಗಲೇ ಇದಕ್ಕಾಗಿ ಒಂದು ಸಬ್‌ಡಿವಿಜನ್ ಓಪನ್‌ಮಾಡಿದ್ದಾರೆ. ಜಮೀನು ಇಲ್ಲದವರಿಗೆ ಆಯಾ ಸಬ್‌ಡಿವಿಜನ್ನಿಗೆ ಹೋಗಿ ಅಲ್ಲಲ್ಲಿ ಡಿಸ್‌ಪೋಸ್ ಮಾಡಬೇಕಾಗಿದೆ. ಜಮೀನು ಇಲ್ಲದವರಿಗೆ ಡಿಸ್ಟ್ರಿಬ್ಯೂಟ್ ಆಗುವುದಿಲ್ಲ. ಏಕೆಂದರೆ ಜಮೀನಿಲ್ಲದಿದ್ದರೆ, ಬಡವರ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ನಡೆದಷ್ಟು ಅನ್ಯಾಯವಾಗುತ್ತದೆ. ಬಡವರ ಹೆಸರನ್ನೆಲ್ಲಾ ಉಪಯೋಗಿಸಿಕೊಂಡು ಅನುಕೂಲವಾಗುತ್ತದೆ ಎಂದು ಮಾಡಿದರೆ ಅದು ಸರಿಯಾದದ್ದಲ್ಲ. ಬಡವರ ಹೆಸರನ್ನು ಉಪಯೋಗಿಸಿಕೊಂಡು ದೇವರ ಹೆಸರನ್ನುಪಯೋಗಿಸಿಕೊಂಡು ಹೋಗುವುದರಿಂದ ಮಧ್ಯವರ್ತಿ ಜನರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಜಮೀನುದಾರರೇನಾದರೂ ಅವರ ಜಮೀನನ್ನು ಯಾರಾದರೂ ಒತ್ತುವರಿಮಾಡಿಕೊಂಡಿದ್ದರೂ ಅವರನ್ನು ಯಾರೂ ಕೇಳುವಂತಿಲ್ಲ. ಇವತ್ತಿನ ಸರಕಾರದ ಅಧಿಕಾರಿಗಳಿಂದೇನೋ ಐದು-ಹತ್ತು ವರ್ಷಗಳಿಂದ ಬೇಕಾದಷ್ಟು ತಕರಾರು ತಃಖ್ತೆಗಳನ್ನು ಹಾಕಿಕೊಂಡಿರತಕ್ಕ ಕೇಸುಗಳು ನನ್ನ ದೃಷ್ಟಿಗೆ ಬಂದಿವೆ. ಇಂತಹ ಕೇಸುಗಳು ನಮ್ಮ ಗಮನಕ್ಕೆ ಬಂದಾಗ ಅದನ್ನು ಬಿಡಿಸಿ ಬಡವರಾದ ಗ್ರಾಮಾಂತರದ ಜನರಿಗೆ ಅನುಕೂಲವಾಗುವಂತಹ ಕಾರ್ಯಕ್ರಮ ಹಾಕಿಕೊಂಡು ಮಾಡಿದರೆ ಒಳ್ಳೆಯ ಕೆಲಸಮಾಡಿದಂತಾಗುತ್ತವೆ. ಹೀಗೆ ಮಾಡಿದರೆ ರಚನಾತ್ಮಕವಾದ ಕೆಲಸವನ್ನು ಸಾಧನೆ ಮಾಡಿದಂತಾಗುತ್ತದೆ.

ಆಯವ್ಯಯದ ವಿಷಯದಲ್ಲಿ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ನಮ್ಮ ಆಯವ್ಯಯ ಪಟ್ಟಿಯಲ್ಲಿ ಎಷ್ಟು ಆದಾಯವಿದೆಯೋ ಅದರಂತೆ ಖರ್ಚಿನ ಬಾಬಿನಲ್ಲಿ ನೋಡಿದರೆ ಎಷ್ಟು ಖರ್ಚಾಗಬೇಕಾಗಿತ್ತೋ ಅದಕ್ಕೆ ಜಾಸ್ತಿಯಾಗಿ ಖರ್ಚಾಗಬೇಕಾಗಿತ್ತು. ಆಡಳಿತದ ಅಧಿಕಾರದ ನೌಕರ ವರ್ಗದವರಿಗೆ ಎಷ್ಟು ಖರ್ಚಾಗಬೇಕಾಗಿತ್ತೋ ಅದಕ್ಕಿಂತಲೂ ಹೆಚ್ಚಿನ ಹಣ ಖರ್ಚಾಗುತ್ತಿದ್ದರೂ ಇನ್ನೂ ಒಬ್ಬಿಬ್ಬರು ಗುಮಾಸ್ತರುಗಳು ಬೇಕು ಎಂದು ಕೇಳುತ್ತಲೇ ಇರುತ್ತಾರೆ.

ಶ್ರೀ ಟಿ. ಮರಿಯಪ್ಪ.—ಅದೂ ಕೂಡ ಸಾಲದು ಎಂದು ಹೇಳುತ್ತಾರೆ.

ಶ್ರೀ ಹೆಚ್. ವಿ. ವೀರೇಗೌಡ.—ಇನ್ನೂ ಸಾಲದು ಎಂದು ಹೇಳಿದರೆ ಅವರಿಂದ ಎಂಟು ಗಂಟೆಗಳಷ್ಟು ಕೆಲಸ ತೆಗೆದುಕೊಂಡು ಸಂಬಳಕೊಡಿ. ತಾವು ಅವರು ಹೇಳಿದಂತೆ ಕೇಳುತ್ತಿದ್ದರೆ ದೇಶ ಉಳಿಯುತ್ತದೆಯೇ? ಸರಿಯಾಗಿ ಕೆಲಸಮಾಡತಕ್ಕ ಮನುಷ್ಯರಿಗೆ ಸರಕಾರದಲ್ಲಿ ಅಭಾವವಿಲ್ಲ. ದುಡಿಯುವವರು ಹಗಲು ರಾತ್ರಿ ದುಡಿಯುತ್ತಾರೆ, ಹೀಗೆ ನಿಷ್ಠೆಯಿಂದ ಕೆಲಸಮಾಡುವಂತಹ ಉದ್ಯೋಗಿಗಳಿದ್ದರೆ ಸರಕಾರದ ಕೆಲಸ ಸರಿಯಾಗಿ ನಡೆಯುತ್ತಿದೆಯೇ ವಿನಾ ಇಲ್ಲದೆ ಹೋದರೆ ಅವರಿಂದ ದೇಶೋದ್ಧಾರವಾಗುವುದಿಲ್ಲ. ಈಗ ಕೆಲವರು ಅವರ ಅಧಿಕಾರಿಗಳನ್ನು "ಸಿ. ಸಿ." ಮಾಡಿಕೊಂಡು ಅವರ ಮರ್ಜಿಗೆ ತಕ್ಕಂತೆ ಕೆಲಸಮಾಡುತ್ತಿರುತ್ತಾರೆ. ಹೀಗೆ ಮಾಡುತ್ತಿರುವುದರಿಂದ ಕೆಲಸಮಾಡುವವರಿಗೂ ಇದರಿಂದ ಸ್ವಲ್ಪಮಟ್ಟಿಗೆ ಅಸಮಾಧಾನವಾಗುತ್ತದೆ. ಇದನ್ನು ಕಡಮೆಮಾಡಬೇಕು. ಎಂಟು ಗಂಟೆಗಳ ಕಾಲ ಕೆಲಸಮಾಡಬೇಕೆಂದಿರುವಾಗ ಒಂದು ಅಥವಾ ಎರಡು ಗಂಟೆಗಳ ಕಾಲ ದುಡಿಯುವವರೇ ಹೆಚ್ಚು. ಎಂಟುಗಂಟೆಗಳಕಾಲ ಪೂರ್ತಿಯಾಗಿ ದುಡಿಯುವವರು ಬಹಳ ಕಡಮೆ. ಹೀಗೆ ಎಂಟುಗಂಟೆಗಳಷ್ಟು ಕಾಲ ಕೆಲಸಮಾಡುವ ನೌಕರರುಗಳಿಗೆ ತಕ್ಕಷ್ಟು ಸಂಬಳಕೊಟ್ಟಲ್ಲಿ ಖರ್ಚು ಕೂಡ ಉಳಿಯಬಹುದು. ಈ ಖಾತೆಯ ಖರ್ಚನ್ನು ಬೇರೆ ಕಡೆಗೆ ಉಪಯೋಗಿಸಲು ಅವಕಾಶವಾಗುತ್ತದೆ.

ಇನ್ನೊಂದು ವಿಷಯದಲ್ಲಿಯೂ ಈ ನೌಕರಶಾಹಿ ವರ್ಗದಲ್ಲಿರುವ ಅಧಿಕಾರಿಗಳ ಹತ್ತಿರ ಹೋಗಿ ಮಾತನಾಡಿದರೆ ಚೆನ್ನಾಗಿ ಗೊತ್ತಾಗುತ್ತದೆ. Permanent appointmentsಗಳನ್ನೂ ಇವರು ಸುಲಭವಾಗಿ ಕೊಡುವ ಹಾಗಿಲ್ಲ. ಆದರೆ ಪಕ್ಷದವರ ಒಂದು ತರಹದ "ಕ್ಲಿಕ್"ಗೆ ಸಿಕ್ಕಿ ಕೆಲಸಮಾಡಿಸಿಕೊಳ್ಳುತ್ತಾರೆ. ಈಗಾಗಲೇ ವರ್ಗಾವರ್ಗಿಗಳನ್ನು ಏನು ನಡೆಸಿಕೊಂಡು ಹೋಗುತ್ತಿದ್ದಾರೆ ಅದು ಜನ ನೋಡಿ ಆಡಿಕೊಂಡು ನಗುವ ಹಾಗಿದೆ. ಇದರಲ್ಲಿ ಒಂದು ನೀತಿಯನ್ನು ಅನುಸರಿಸಿಲ್ಲ. ಮೂರು ವರ್ಷಗಳೊಳಗೆ ಯಾವ ಸಂದರ್ಭದಲ್ಲಿಯೂ ಅಧಿಕಾರಿಗಳ ವರ್ಗಾವರ್ಗಿಯ ಬಗ್ಗೆ ಅಡ್ಡಿಮಾಡುವುದಿಲ್ಲ ಎಂದು ಒಂದುಸಾರಿ ಹೇಳುತ್ತಾರೆ; ಇನ್ನೊಂದುಸಾರಿ ಆರುತಿಂಗಳೊಳಗೆಯೇ ವರ್ಗಮಾಡುತ್ತಾರೆ. ಇರುವವರಲ್ಲಿ ಕೆಲವು ಅಧಿಕಾರಿಗಳನ್ನು 8, 10, 15ವರ್ಷಗಳಿಂದಲೂ ಒಂದೇ ಕಡೆ ಉಳಿಸಿಕೊಂಡಿರುತ್ತಾರೆ. ಎಲ್ಲ ಕಡೆಯೂ ಖಂಡಿತವಾಗಿ ಸರಿಯಾಗಿ ನಡೆಯುವುದಿಲ್ಲ ಎಂದು ಈ ಸಂದರ್ಭದಲ್ಲಿ ನನಗೆ ನಂಬಿಕೆಯುಂಟಾಗಿದೆ. ಇಲಾಖೆಯ ಅಧಿಕಾರಿಗಳು ಹೇಳುವುದು ಮೂರುವರ್ಷಗಳಿರುವುದಕ್ಕೆ ಅವಕಾಶವಿದೆ ಎಂದು. ವಾದಮಾಡಿ ಹದಿನೆಂಟು ವರ್ಷಗಳಾದರೂ ಹಾಗೆಯೇ ಇರುವ ಸಂದರ್ಭಗಳಿವೆ. ಜಿಲ್ಲಾಧಿಕಾರಿಗಳೇನೋ ಒಂದು ಲಿಸ್ಟನ್ನೂ ಕಳುಹಿಸುತ್ತಾರೆ. ಅದರಲ್ಲೂಕೂಡ ಸಂಬಂಧಪಟ್ಟ ಅಧಿಕಾರಿಗಳು ಕೈಕೊಟ್ಟಿದ್ದರೂ ತಮಗೆ ಗೊತ್ತಿಲ್ಲದಂತೆ ಇರುತ್ತಾರೆ. ಒಂದು ವರ್ಷ ಆರು ತಿಂಗಳೊಳಗಾಗಿ ಕೆಲವರನ್ನು ವರ್ಗಮಾಡಿ ಕೆಲವರನ್ನು ಎಂಟು-ಹತ್ತು ವರ್ಷಗಳವರೆಗೆ ಒಂದೇಕಡೆ ಇರುವಂತೆಮಾಡಿದರೆ ಮಾಡಿರುವಂತಹ ಕಾನೂನನ್ನು ಕಟ್ಟುನಿಟ್ಟಾಗಿ ತಂದಹಾಗಾಗಲಿಲ್ಲ. ಇದರಿಂದ ಅನೀತಿ ಹೆಚ್ಚುತ್ತದೆ. ಇದರಿಂದ ಯಾರಿಗೂ ಅನುಕೂಲವಾಗುವುದಿಲ್ಲ. ದೊಡ್ಡವರಾಗಿರುವ ಮುಖ್ಯಾಧಿಕಾರಿಯಾಗಿರುವವರು ಅವರಿಗೆ ಬೇಕಾದಹಾಗೆ ಟ್ರಾನ್ಸ್‌ಫರು ಮಾಡಿ ಅವರ Service Registerನಲ್ಲಿ ಸರಿಯಾದ ಬರೆಹಾಕಿ ತಿಥಿಮಾಡಿಬಿಡುತ್ತಾರೆ. ಇಂತಹ ಸಂದರ್ಭಗಳಿರುವುದರಿಂದ ಅಧಿಕಾರಿಗಳನ್ನು ವರ್ಗಮಾಡುವ ವಿಚಾರದಲ್ಲಿ ಒಂದು ರೂಲನ್ನು ಮಾಡಿ ಯಾವ ವಿಧದಲ್ಲಿಯೂ ದಾಕ್ಷಿಣ್ಯಕ್ಕೆ ಒಳಗಾಗದಂತೆ ಜಾರಿಗೆ ತರುವುದು ಒಳ್ಳೆಯದು. ಅಗತ್ಯವಾದ ಸಂದರ್ಭಗಳಲ್ಲಿ ಮಾತ್ರ ಕೆಲವರನ್ನು ನೇಮಿಸಲಾಗಿದೆ ಎಂದು ಹೇಳುತ್ತಾರೆ. ಬಹಳ ಹಿಂದುಳಿದ ವರ್ಗದವರಿಂದ ನೇಮಕಮಾಡದ್ದರಿಂದ ದೇಶಕ್ಕೂ ಕಷ್ಟ ನಮಗೂ ಕಷ್ಟ. ಅದರಲ್ಲಿ ಕೂಡ

ಬದಲಾವಣೆಗಳಾಗಬೇಕಾಗಿದೆ. ಇನ್ನು ತಾಲ್ಲೂಕು ಆಫೀಸಿಗೆ ಒದಗಿಸಿರುವಂತಹ ಅಧಿಕಾರಿಗಳು ನ್ಯಾಯಾ ನ್ಯಾಯಗಳ ವ್ಯತ್ಯಾಸಗಳನ್ನರಿತು ಸರಿಯಾಗಿ ಕೆಲಸ ಕಾರ್ಯಗಳನ್ನುಮಾಡಿ ಉತ್ತಮವಾದಮಟ್ಟಕ್ಕೆ ಏರಿಸದಿದ್ದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಇದಕ್ಕೆ ಗಮನಕೊಡುತ್ತಾರೆಂದು ನಂಬಿದ್ದೇನೆ. ಇನ್ನೊಂದು ವಿಷಯ. ಈ ಇನಾಂ ರದ್ದಿಯಾತಿಯ ಸಂಬಂಧದಲ್ಲಿ ಡೆಪ್ಯುಟೀ ಕಮಿಷನರು, ಸಬ್ ಡಿವಿಜನ್ನು ಆಫೀಸರು ತಹಶೀಲ್ದಾರರು, ಎಲ್ಲರನ್ನೂ ಇಟ್ಟುಕೊಂಡಿದ್ದಾರೆ. ಆದರೆ ಇವರು ಹಳ್ಳಿಗಳಿಗೆ ಹೋಗಿ ಒಬ್ಬ ರೈತ ಯಾವುದಾದರೂ ಜಮೀನನ್ನು ಮಾಡುತ್ತಿದ್ದರೆ ಅವನಿಗೆ ಏನೂ ಅನುಕೂಲಮಾಡುವುದಿಲ್ಲ. ಆದರೆ ಇನಾಂದಾರರಿಗೆ ಎಲ್ಲರೂ ಸಪೋರ್ಟು ಮಾಡುತ್ತಾರೆ. ನಿಜವಾಗಿಯೂ ರೈತರನ್ನು ತುಳಿಯುತ್ತಿದ್ದಾರೆ ಎಂದು ತಮ್ಮ ಮುಂದೆ ಹೇಳುತ್ತೇನೆ. ರೈತರನ್ನು ಇಕ್ಕಟ್ಟಿಗೆ ಸಿಕ್ಕಿಸಿ ಅವರನ್ನು ಕೋರ್ಟಿಗೆ ಎಳೆಯುತ್ತಾರೆ. ಅವರೇನಾದರೂ ಇನಾಂದಾರರಿಗೆ ಕೇವಲ ಆಪ್ತರಾಗಿದ್ದರೆ ಅಥವಾ ವಿಶ್ವಾಸದಿಂದ ಇದ್ದರೆ ಅಂತಹ ರೈತರಿಗೆ ಅಷ್ಟು ತೊಂದರೆ ಕೊಡುವುದಿಲ್ಲ. ಆಹಾರದ ಹಾಹಾಕಾರವಿರುವಾಗ ದೇಶದಲ್ಲಿ Co-operative farming ಆಗಬೇಕು ಎಂದು ನಮ್ಮ ಸಹಕಾರ ಮಂತ್ರಿಗಳು ಹೇಳುತ್ತಿದ್ದಾರೆ. ನನ್ನನ್ನು ಕೇಳಿದರೆ ಇದನ್ನು ಸ್ವಲ್ಪ ನಿಧಾನವಾಗಿಮಾಡಿದರೆ ಎಲ್ಲರಿಗೂ ಅದರ ಅನುಕೂಲಗಳನ್ನು ತಿಳಿದುಕೊಳ್ಳಲು ಸಾಕಷ್ಟು ಅವಕಾಶಸಿಕ್ಕುತ್ತದೆ. ಇದರ ಬಗ್ಗೆ ಭಿನ್ನ ಅಭಿಪ್ರಾಯಗಳಿರುವಾಗ ವ್ಯವಸಾಯದಲ್ಲಿ ಅನುಭವ ಪಡೆದ ವಿದ್ಯಾವಂತರು ಹಳ್ಳಿಯ ಜನರನ್ನೆಲ್ಲ ಸೇರಿಸಿಬಿಟ್ಟು Co-operative farming ಮಾಡುತ್ತೇವೆಂದು ಹೇಳಿ ಅವರೊಡನೆ ಸಾಧಿಸುವುದಕ್ಕೆ ಯತ್ನಿಸಬೇಕು. ಇಲ್ಲಿ ನೀವು ಈಗಲೇ ಈ Co-operative farmingನ್ನು ಕಾರ್ಯಗತಮಾಡುವುದಕ್ಕೆ ಪ್ರಯತ್ನಿಸಿದರೆ ಅನ್ಯಾಯಗಳಾಗುತ್ತದೆ. ಕಾಲವನ್ನನುಸರಿಸಿ ಜನಗಳ ಜಾಗೃತಿಯನ್ನನುಸರಿಸಿ Co-operative farmingನ್ನು ಮಾಡಬೇಕಾಗಿದೆ. ಆದಕಾರಣ ಈ ಸ್ಕೀಮಿಗಾಗಿ ಹೆಚ್ಚಿನ ಖರ್ಚನ್ನು ಹಾಕಿ ಮಾಡುವುದಕ್ಕೆ ಹೋಗಬೇಡಿ.

ಇನ್ನೊಂದು ವಿಷಯ District Levelನಲ್ಲಿ Co-ordinating Committee ಎಂದು ಮಾಡಿದ್ದಾರೆ. ಇಲಾಖೆಯ ಅಧಿಕಾರಿಗಳನ್ನು ಕರೆಸಿ ಯಾವ ಯಾವ ಮಟ್ಟದಲ್ಲಿ ಹೇಗೆ ಕೆಲಸ ನಡೆದಿದೆ, ತಾಲ್ಲೂಕು ಲೆವಲ್ಲಿನಲ್ಲಿ, ಹೋಬಳಿ ಲೆವಲ್ಲಿನಲ್ಲಿ ಹೇಗೆ ನಡೆದಿದೆ ಎನ್ನುವುದನ್ನು ಪರಿಶೀಲಿಸಲು ಆ ಸಮಿತಿಯನ್ನು ಮಾಡಿದ್ದಾರೆ.

ಹೀಗೆ ತಾವು ಮಾಡಿರತಕ್ಕ ಆ ಕೋ-ಆರ್ಡಿನೇಷನ್ ಕಮಿಟಿಗಳೇನಿವೆ ಅವುಗಳಲ್ಲಿರತಕ್ಕ ಸದಸ್ಯರು ಜಿಲ್ಲಾಧಿಕಾರಿಗಳ ಬಲವಂತಕ್ಕೊಳಗಾಗಿ ಅವರಮಾತಿಗೆ ತಲೆಯಾಡಿಸಿ ಮೀಟಿಂಗಿನಿಂದ ಎದ್ದು ಬರುತ್ತಿದ್ದರೆ ಅಂಥ ಸಮಿತಿಗಳಿಂದ ದೇಶಕ್ಕೇನು ಪ್ರಯೋಜನ ? N.E.S. ಬ್ಲಾಕಿನ ಅಧಿಕಾರಿಗಳನ್ನು ಕಂಡರೆ ರೆವಿನ್ಯೂ ಅಧಿಕಾರಿಗಳಿಗಾಗುವುದಿಲ್ಲ; ರೆವಿನ್ಯೂ ಅಧಿಕಾರಿಗಳನ್ನು ಕಂಡರೆ ಪೋಲೀಸ್ ಅಧಿಕಾರಿಗಳಿಗಾಗುವುದಿಲ್ಲ. ಹೀಗೆ ಒಂದು ಇಲಾಖೆಯ ಅಧಿಕಾರಿಗಳನ್ನು ಕಂಡರೆ ಇನ್ನೊಂದು ಇಲಾಖೆಯ ಅಧಿಕಾರಿಗಳಿಗಾಗುವುದಿಲ್ಲ. ಹೀಗೆ ಇವತ್ತು ಒಂದು ಇಲಾಖೆಯವರಿಗೂ ಇನ್ನೊಂದು ಇಲಾಖೆಯವರಿಗೂ ಖಂಡಿತ ಕೋ-ಆಪರೇಷನ್ ಇರುವುದಿಲ್ಲ. ಇಂಥ ವ್ಯವಸ್ಥೆಯಿಂದ ದೇಶಕ್ಕೆ ಖಂಡಿತ ಅನುಕೂಲವಾಗಲೀ ಪ್ರಯೋಜನವಾಗಲೀ ಆಗುವುದಿಲ್ಲ. ಸರ್ಕಾರದ ಮೂಲದಲ್ಲಿ, ಇಲ್ಲಿ ಕೋ-ಆಪರೇಷನ್ ಚೆನ್ನಾಗಿದ್ದಿದ್ದರೆ ಅಲ್ಲಿಯೂ ಇದು ಚೆನ್ನಾಗಿರುತ್ತಿತ್ತು. ಇಲ್ಲಿ ಯಾವಾಗ ಚೆನ್ನಾಗಿಲ್ಲವೋ ಅಲ್ಲಿಯೂ ಚೆನ್ನಾಗಿಲ್ಲರುವುದು ನ್ಯಾಯವಾಗಿಯೇ ಇದೆ. ಆದರೆ ನಿಮ್ಮ ಘನೋದ್ದೇಶಗಳೇನು ಅವು ಸಫಲವಾಗಬೇಕಾಗಿದ್ದರೆ ಈ ವಿಚಾರಗಳನ್ನೆಲ್ಲಾ ತಾವು ಕೂಡಲೆ ಮತ್ತೊಮ್ಮೆ ಪರಿಶೀಲನೆಮಾಡಿ ಪ್ರತಿಯೊಂದು ಇಲಾಖೆಯ ಅಧಿಕಾರಿಗಳೂ ಒಟ್ಟುಗೂಡಿ ಹಳ್ಳೀ ಜನರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸಹಾಯಕರಾಗದಿದ್ದರೆ ನಿಮ್ಮ ಉದ್ದೇಶಗಳೊಂದೂ ನಡೆಯಲು ಸಾಧ್ಯವಾಗುವುದಿಲ್ಲ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನಕೊಡಬೇಕು. ನಾನು ಹೇಳಬೇಕಾಗಿದ್ದ ವಿಚಾರಗಳನ್ನೂ ಬಹಳವಾಗಿದ್ದವು. ಆದರೆ ಅಧ್ಯಕ್ಷರು ಈಗಾಗಲೇ ವೇಳೆ ಹೆಚ್ಚಾಗಿ ತೆಗೆದುಕೊಂಡಿರುತ್ತೇನೆಂದು ಎಚ್ಚರಿಸುವುದರಿಂದ ಅವರ ಕೋಪಕ್ಕೆ ಗುರಿಯಾಗುವುದು ಸರಿಯಲ್ಲವೆಂದು ಹೇಳಿ ಇನ್ನುಳಿದ ವಿಚಾರಗಳನ್ನು ಡಿಮ್ಯಾಂಡುಗಳು ಚರ್ಚೆಯಾಗತಕ್ಕ ಕಾಲದಲ್ಲಿ ಹೇಳಲು ಮತ್ತೊಂದು ಅವಕಾಶವಿರುವುದರಿಂದ ಇಷ್ಟುಮಾತನ್ನಾಡಲು ಅವಕಾಶವಿತ್ತುದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Sri Corbett.

Sri Y. VEERAPPA.—I want to know whether we get any chances at all.

Mr. SPEAKER.—That I cannot say. I shall try to give a chance.

Sri Y. VEERAPPA.—You were kind enough to tell that you would give chance to some of us.

Mr. SPEAKER.—I cannot say for the future. It is my intention to give you a chance.

Sri Y. VEERAPPA.—I want to know whether there is a list.

Mr. SPEAKER.—There is a list but I am not going to be led by the list; it is for my guidance.

Sri F. W. CORBETT (Nominated).—Mr. Speaker, I must first of all thank the Hon'ble Minister for Finance for presenting a very satisfactory Budget. But there is one item which I would like him to reconsider and that is, proposed tax on road transport. As the Hon'ble Leader of the Opposition pointed out, there are large areas in our State which are not served by railways but they have to depend on road transport. To impose additional tax on them would be a hardship. I therefore request the Hon'ble Finance Minister to consider dropping this imposition.

It is satisfactory to note that a large amount of money is provided for nation building services both in the Budget and in the Five-Year Plan. But unfortunately after ten years of

(SRI F. W. CORBETT)

independence and in the middle of the Second Five-Year Plan the beneficial effects of these efforts and expenditure have not sufficiently permeated the common man. This is a welfare State and it is our duty to pay more attention to the needs of the common man. But unfortunately he is still under the heritage of poverty and disease. Hundreds of thousands of our citizens cannot provide for their families the bare necessities of life like food, clothing, housing and medical relief. The food problem is still very acute. Prices are rising almost every day. I will reserve my remarks on the food problem for another occasion. With regard to housing, no doubt several thousands of houses have been built and even though requisitioning of houses was first resorted to about 18 years ago as a war time measure, still the houses are being requisitioned for Government servants. May I ask: are only the Government servants entitled to live in houses? What about those who are not Government servants? I would suggest that requisitioning of houses for Government servants should be discontinued. Control over rents should be continued for some time more. Then take water supply. It is insufficient in the cities and it is non-existent in many of our villages. In reply to a question last week it was revealed that in Dharwar district alone 456 villages have no wells. In all Mysore State we have about 25,000 villages and I suggest that at least 500 villages every year be provided with drinking water wells.

Take education. It was revealed the other day that we need 22,000 schools if we are to provide all our children with primary education. It was more pleasing to hear from the Deputy Minister for Education yesterday that it was proposed to open about 880 single teacher schools this year. I hope that provision will be made for the remainder next year.

There is a more important problem, *viz.*, adult literacy. In three years we will have to face general elections and it is desirable that our adults be literate by that time so that they may know what they are voting for.

Finally I come to the subject of medical relief. It is the same story; insufficiency in the towns and non-existence in many of the villages. I hope that some steps will be taken to provide more medical relief for the rural areas. Hundreds and thousands of our women bear children without the help of a *dhai*. Young girls and children die for want of this help. We have many who are prepared to take up this job and in Mysore State there are 40,000 educated unemployed and I suggest that a few thousands of these may be trained as nurses, school teachers, stockmen and in the construction of dams, small irrigation works and also in the construction of houses after a little training so that gradually we can provide for all these deficiencies.

4 P.M.

Taking medical relief, we legislators who can afford to pay for our medicines and also the Ministers are given free medicine, even expensive medicines, but many a poor man in our hospitals is asked to pay for his medicine or to buy his medicine I ask you in all seriousness, is this what we call a welfare State? Should we not look to the welfare of the common man first? I have indicated all these shortcomings for the benefit of the common man not in any spirit of finding fault with the Ministers. I know that they are doing their best, but I want to bring to their notice the needs of the common man in the various directions which I have just indicated. I hope the Ministers will take note of what I have said and that by the time we meet again next year, we will really be able to say that we are a welfare State.

Thank you, Sir.

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೆಬಿಹಾಳ).—ಸ್ವಾಮಿ, ಈಗ ನಮ್ಮ ಮುಂದಿರುವ ಆಯವ್ಯಯ ಪತ್ರಿಕೆಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಅದರ ವಿಷಯವಾಗಿ ನಾಲ್ಕು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ. ನಾನು ಬಂದಿರತಕ್ಕದ್ದು ಬಿಜಾಪುರ ಜಿಲ್ಲೆಯಿಂದ. ಅದು ಬರಗಾಲದ ಜಿಲ್ಲೆ ಎಂದು ಪ್ರಸಿದ್ಧವಾದುದು. ಆ ಜಿಲ್ಲೆಗೆ ನೀರಿನ ಸೌಕರ್ಯ ಬಹಳ ಅಗತ್ಯವಿದೆ. ಸರ್ಕಾರದವರು ತೆಗೆದುಕೊಂಡಂಥ ದೊಡ್ಡ ಯೋಜನೆ ಎಂದರೆ ಘಟಪ್ರಭಾ

ಯೋಜನೆ. ಘಟಪ್ರಭಾಯೋಜನೆಯ ಮೊದಲನೆಯ ಹಂತ ಮುಗಿದುಹೋಗಿದೆ. ಅದರಲ್ಲಿ ಸಹಿತ 60 ಲಕ್ಷ ರೂಪಾಯಿ ಉಳಿತಾಯವಾಗಿದೆ. ಈಗ ಎರಡನೆಯ ಹಂತ ಶುರುವಾಗಿದೆ. ಅದಕ್ಕೆ ಈ ವರ್ಷ ಸರ್ಕಾರದವರು ಬರಿಯ 28 ಲಕ್ಷ ರೂಪಾಯಿಗಳನ್ನು ಮಾತ್ರ ಹಂಚಿದ್ದಾರೆ. ಹೀಗೆ ಏಕೆ ಮಾಡಿದ್ದಾರೋ, ಮತ್ತು ಆ ಪ್ರಕಾರ ಯೋಜನೆಯ ಕೆಲಸ ಯಾವ ರೀತಿಯಲ್ಲಿ ನಡೆದೀತೋ ತಿಳಿಯದು.

ಮತ್ತೊಂದೇನೆಂದರೆ, ಬಿಜಾಪುರ ಜಿಲ್ಲೆ ಕಾಲುವೆ ಹರಿಯತಕ್ಕ ಜಾಗವಾಗಿದ್ದು ಬಿಳಿಜೋಳ, ಹತ್ತಿ ಇಂಥವು ಬೆಳೆಯತಕ್ಕ ಪ್ರದೇಶವಾಗಿದೆ. ಇಲ್ಲಿಗೆ ನೀರನ್ನು ಒದಗಿಸುವುದು ಮುಖ್ಯವಾದುದು. ಜಮಖಂಡಿಯಿಂದ ಮುಧೋಳ್ ತಾಲ್ಲೂಕಿನ ಬೀಳಗಿಪೇಟೆ ಹತ್ತಿರಕ್ಕೆ ನೀರು ಕೊಡುವುದು ದುಸ್ತರವಾಗಿದೆ. ಹಿಡಕಲ್ ಯೋಜನೆ ಕೆಲಸವನ್ನು ಮೊದಲು ತೆಗೆದುಕೊಳ್ಳುವುದು ಜರೂರು ಇದೆ. ಅದನ್ನು ತೆಗೆದುಕೊಳ್ಳದೆ ಬರೀ ಕಾಲುವೆಯನ್ನು ತೆಗೆದುಕೊಳ್ಳುತ್ತಾ ಹೋದರೆ ನೀರಿಲ್ಲದೆ ಏನು ಮಾಡಬೇಕೆಂಬುದೇ ತಿಳಿಯದಾಗಿದೆ. ಆದುದರಿಂದ ಹಿಡಿಕಲ್ ಯೋಜನೆಯನ್ನು ಮೊದಲು ತೆಗೆದುಕೊಂಡು ಜಲಾಶಯವನ್ನು ಮಾಡಿದರೆ ನೀರು ಸಿಕ್ಕುತ್ತದೆ. ಅದಿಲ್ಲದೆ ಬರಿಯ ಕಾಲುವೆಯನ್ನು ತೆಗೆಯುತ್ತಾ ಹೋದರೆ ಏನೂ ಉಪಯೋಗವಿಲ್ಲ. ಸರ್ಕಾರದವರು ಯಾವ ಪ್ರಕಾರವಾಗಿ ಕೇಂದ್ರ ಸರ್ಕಾರದಿಂದ ಆಶ್ವಾಸನೆಯನ್ನು ಪಡೆದು, ಶರಾವತಿ ಯೋಜನೆಗೆ ಬೇಕಾದ ಹಣವನ್ನು ಕೊಡುತ್ತಿದ್ದಾರೆ; ಅದೇ ರೀತಿಯಾಗಿ ಮಂಜೂರಾಗಿರುವ ಹಿಡಕಲ್ ಯೋಜನೆಗೂ ಹಣವನ್ನು ಒದಗಿಸಿ ಜಲಾಶಯವನ್ನು ಪೂರ್ಣಮಾಡತಕ್ಕದ್ದು ಅವಶ್ಯವಿದೆ. ಇದರಿಂದ ಬಿಜಾಪುರ ಜಿಲ್ಲೆಯ ಎರಡು ಮೂರು ತಾಲ್ಲೂಕುಗಳಿಗೆ ಹೆಚ್ಚು ನೀರು ಬರುತ್ತಿದೆಯೆಂದು ತಿಳಿದುಕೊಂಡಿದ್ದೇನೆ.

ನಾವು ಮುಂಬೈ ಪ್ರಾಂತದಲ್ಲಿದ್ದಾಗ ಅಪ್ಪರ್ ಕೃಷ್ಣ ಯೋಜನೆಯಿಂದ ನಮಗೆ ನೀರು ಸಿಕ್ಕುತ್ತದೆ ಎಂದು ಅಲ್ಲಿನ ಸೂಪರಿಂಟೆಂಡಿಂಗ್ ಇಂಜಿನಿಯರು ಹೇಳಿದ್ದರು. ಸಿಂದಗಿ ಮತ್ತು ಇಂಡಿಗಿ ತಾಲ್ಲೂಕುಗಳಲ್ಲಿ 80 ಸಾವಿರದಿಂದ ಒಂದುಲಕ್ಷ ಎಕರೆಗಳವರೆಗೆ ನೀರು ಸಿಕ್ಕುತ್ತದೆಯೆಂದು ತಿಳಿಸಿದ್ದರು. ಮೊನ್ನೆ ನಾನು ಆ ಸ್ಥಳಕ್ಕೆ ಹೋಗಿ ನೋಡಿದೆ. ಮಾನ್ಯ ಮಂತ್ರಿಗಳೂ ಇದ್ದರು. ಅಲ್ಲಿನ ಅಧಿಕಾರಿಗಳೊಡನೆ ಮಾತನಾಡುವಾಗ ಸೂಪರಿಂಟೆಂಡಿಂಗ್ ಇಂಜಿನಿಯರು ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರು, ಬಿಜಾಪುರ ಜಿಲ್ಲೆಯೊಳಗೆ ಮುಳುಗಡೆ ಪ್ರದೇಶ ಮಾತ್ರ ಬರುತ್ತದೆ ಆದರೆ, ಅಲ್ಲಿಗೆ ಒಂದು ಹನಿ ಸಹಿತ ನೀರು ಮುಟ್ಟುವುದಿಲ್ಲ, ಅದರ ಫಾಯಿದೆಯಾಗತಕ್ಕದ್ದು ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಎಂದು ಹೇಳಿದರು. ಆ ಯೋಜನೆ ತೆಗೆದುಕೊಳ್ಳಲಿಕ್ಕೆ ನಮ್ಮ ಜಿಲ್ಲೆಯೊಳಗೆ ನೀರು ಮುಳುಗಡೆಯಾದರೂ ತಕರಾರು ಮಾಡುವುದಿಲ್ಲ. ಆದರೆ ನಾನು ಹೇಳುವುದೇನೆಂದರೆ, ಅಲ್ಲಿ ನಾಲ್ಕೈದು ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗುತದೆ. ನಮ್ಮ ಜಿಲ್ಲೆಗೆ ವಿದ್ಯುಚ್ಛಕ್ತಿಯನ್ನಾದರೂ ಕೊಡಿ ಎಂದು ಹೇಳುತ್ತೇನೆ. ಅಲ್ಲದೆ Upper Krishna projectನಿಂದ high level channel ಮಾಡಿದರೆ ಅದರಿಂದ ಬಿಜಾಪುರ ಜಿಲ್ಲೆಗೆ ನೀರು ಮುಟ್ಟುತ್ತದೆ. ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ಇದನ್ನು ಮೂರನೆಯ ಯೋಜನೆಯಲ್ಲಾದರೂ ಸೇರಿಸತಕ್ಕದ್ದು ಅವಶ್ಯವಿದೆ. ಬಿಜಾಪುರದ ಎರಡು ತಾಲ್ಲೂಕುಗಳಿಗೆ ಈ high level channelನಿಂದ ನೀರು ಮುಟ್ಟುವುದರಿಂದ ಇದನ್ನು ಸರ್ಕಾರದವರು ಯೋಚನೆ ಮಾಡಬೇಕು.

ಇನ್ನೊಂದು ದೊಡ್ಡ ಯೋಜನೆ ಎಂದರೆ ಕೊಯಿನ ಯೋಜನೆ. ಇದರ ಪ್ರಕಾರ ಕೊಯಿನ ನದಿಯ ನೀರಿನ ಎರಡನೆ-ಮೂರು ಅಂಶವನ್ನು ವಿದ್ಯುತ್ತನ್ನು ಉತ್ಪಾದಿಸಲು ಉಪಯೋಗಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. ಇನ್ನು ಒಂದೂವರೆನೆಯ ಅಂಶ ನೀರು ಇರುತ್ತದೆ. ಆ ನೀರನ್ನು ಬಿಜಾಪುರ ಜಿಲ್ಲೆಗೆ ಉಪಯೋಗಮಾಡಿಕೊಳ್ಳಲಿಕ್ಕೆ ಬರುತ್ತದೆ. ಅದರ ಬಗ್ಗೆ ಯಾವುದೂ ಇನ್ನೂವರೆಗೆ ಯೋಜನೆನಡೆದಿಲ್ಲ. ಮಾದರಿ ಸಂಸ್ಥಾನವಾದ ಮೈಸೂರಿನೊಳಗೆ ಇಂಜಿನಿಯರುಗಳು ಪ್ರಖ್ಯಾತರಿರುತ್ತಾರೆ. ಅದರಿಂದ ಈ ನೀರನ್ನು ಹೇಗೆ ಉಪಯೋಗಮಾಡಿಕೊಳ್ಳಬಹುದು, ಬಿಜಾಪುರ ಜಿಲ್ಲೆಗೆ ಈ ನೀರನ್ನು ಹೇಗೆ ತೆಗೆದುಕೊಳ್ಳಬಹುದು ಎನ್ನುವುದರ ಸಂಬಂಧ ವಿಚಾರಮಾಡಿ ಯೋಚನೆಯನ್ನು ಮಾಡಬೇಕಾಗಿದೆ. ಈ ಕೊಯಿನ ಯೋಜನೆಯಲ್ಲಿ ಕರ್ಣಾಟಕ ಎಂದರೆ ನಮ್ಮ ಹಿಸ್ಸೆ ಎಷ್ಟಿದೆ ಎಂಬುದನ್ನು ಮುಂಬೈ ಪ್ರಾಂತದೊಡನೆ ಕರಾರು ಮಾಡಿಕೊಂಡು, ಅಲ್ಲಿಂದ ಬರುವ ನೀರನ್ನು ನಮ್ಮ ಜಿಲ್ಲೆಗೆ ಹಚ್ಚಿದರೆ ಚಲೋ ಆಗುತ್ತದೆ. ನಮಗೆ ಇತರ ನೀರಾವರಿ ಯೋಜನೆಗಳಾವುವೂ ಇರುವುದಿಲ್ಲ. ಈ ಯೋಜನೆಯಿಂದ ನಮ್ಮ ಜಿಲ್ಲೆಯ ಅಭಿವೃದ್ಧಿಯಾಗುವುದಕ್ಕೆ, ಇದರ ಸಂಬಂಧ ವಿಚಾರ ಮಾಡಿಕೊಳ್ಳಿರಿ ಎಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

1911ನೆಯ ಇಸವಿಯೊಳಗೆ ಒಬ್ಬ ಇಂಜಿನಿಯರು ಬಿಜಾಪುರ ಜಿಲ್ಲೆಯೊಳಗೆ ಯಾವಯಾವ ಕೆರೆ ಆಗಬೇಕು, ಯಾವಯಾವ ಬಂದಾರ ಮಾಡಬೇಕು, ಎನ್ನುವುದರ ಸಂಬಂಧ ಒಂದು ರಿಪೋರ್ಟ್ ಮಾಡಿದರು. ಅವರು ಎಲ್ಲವನ್ನೂ ಪರಿಶೀಲಿಸಿ ಈ ಜಿಲ್ಲೆಯಲ್ಲಿ ಇದು ಚಲೋ ಆಗುವುದಿಲ್ಲ, ಒಂದು ಎಕರೆಗೆ 300-400 ರೂಪಾಯಿ ಖರ್ಚು ಬೀಳುತ್ತದೆ. ಈ ಕಾರಣ ಇದನ್ನು ತೆಗೆದುಕೊಳ್ಳಬಾರದು ಎಂದು ರಿಪೋರ್ಟ್ ಮಾಡಿದರು. ನಮ್ಮ ಜಿಲ್ಲೆಯು ಇಲ್ಲಿಗೆ ಬರುವುದಕ್ಕೆ ಮುಂಚೆಯೇ ಮುಂಬೈನಲ್ಲಿದ್ದಾಗ ಆ ಸರ್ಕಾರದವರು ಇದರ ಬಗ್ಗೆ ಕ್ರಮ ತೆಗೆದುಕೊಂಡುದರ ಕಾರಣ ಕೆಲವು ಕೆರೆಗಳೂ ಬಂಧಾರಗಳು ಆಗಿವೆ. ನಮ್ಮ ಈ ಸರ್ಕಾರವನ್ನು ಒಂದು ವಿಚಾರದಲ್ಲಿ ಅಭಿನಂದನೆ ಮಾಡುತ್ತೇನೆ. ನಮ್ಮ ಸರ್ಕಾರದವರೂ ಚಲೋ ಕೆಲಸವನ್ನು ಮಾಡಿದ್ದಾರೆಂದು ಹೇಳುತ್ತೇನೆ. ಸರ್ಕಾರಕ್ಕೆ ಬರತಕ್ಕ return ಏನಿವೆ ಅದು, ಬೆಟರ್‌ಮೆಂಟ್ ಲೇವಿಕೊಟ್ಟೂ, ಶೇಕಡ ಒಂದು ಆದರೂ ಸಾಕು, ನಾವು ಕೆರೆ ಮತ್ತು ಬಂಧಾರಗಳ ಕಾರ್ಯವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದರಂತೆ ಒಂದು ಹುಕುಂ ಸಹ ಹೊರಡಿಸಿದ್ದಾರೆ. ಅದನ್ನು ಫಾಯಿದೆ ತೆಗೆದುಕೊಂಡು ಇಂಜಿನಿಯರಿಂಗ್ ಇಲಾಖೆಯವರು ಹೆಚ್ಚು ಕೆರೆ ಮತ್ತು ಬಂಧಾರಗಳನ್ನು ನಮ್ಮ ಜಿಲ್ಲೆಯೊಳಗೆ ಮಾಡಿಕೊಟ್ಟರೆ ಚಲೋ ಆಗುತ್ತದೆ. ಈ ಕಾರ್ಯಗಳನ್ನೆಲ್ಲ ಪೂರಾತಿ ಮಾಡಿಕೊಂಡರೆ ನಮ್ಮ ಜಿಲ್ಲೆಯೊಳಗೆ ನೀರಾವರಿಯಾಗುತ್ತದೆ. ಭೂಮಿ ಚಲೋ ಇದೆ. ಆದರೆ ಬೆಂಗಾಡು ಪ್ರದೇಶ. ನೀರನ್ನು ಇಲ್ಲಿಗೆ ಒದಗಿಸಿದರೆ ಈಗ surplus district ಆಗುತ್ತದೆ. ಇಷ್ಟೇ ಅಲ್ಲ, ನಮ್ಮ ಸಂಸ್ಥಾನವೂ ಆಹಾರದ ವಿಷಯದಲ್ಲಿ ಕೊರತೆಯನ್ನು ಹೊಂದುವುದಿಲ್ಲ. Our State will be surplus in food ಎಂದು ಹೇಳಬಲ್ಲೆ.

ಕೆಲವು ಯೋಜನೆಗಳ ಬಗ್ಗೆ ಸರಿಯಾಗಿ ಮಂಜೂರಾತಿ ದೊರೆಯುತ್ತಿಲ್ಲವೆಂದು ತಿಳಿದುಬಂದಿದೆ. ಕೆಲವು ಕೆಲಸಗಳ ಬಗ್ಗೆ ಸರ್ಕಾರಕ್ಕೆ ಕಳುಹಿಸಿದ್ದೇವೆ, ಇನ್ನೂ ಬರಲಿಲ್ಲವೆಂದು ಹೇಳುತ್ತಾರೆ. ಏಕೆ ಬರಲಿಲ್ಲ

(ಶ್ರೀ ಪಿ. ಜಿ. ಸಿದ್ಧಾಂತಿ)

ವೆಂಬುದು ತಿಳಿದಿಲ್ಲವೆಂದು ಹೇಳುತ್ತಾರೆ. ಬಿಜಾಪುರದಿಂದ ಬೆಳಗಾವಿ ಮತ್ತು ಬೆಂಗಳೂರಿಗೆ ಕಾಗದಪತ್ರಗಳು ಓಡಾಡುತ್ತಿರುವುದರಿಂದ ಕೆರೆಯು ಕೆಲಸಗಳು ಷುರುವಾಗಿಲ್ಲ. ಉದಾಹರಣಾರ್ಥವಾಗಿ ನನ್ನ ಮತಕ್ಷೇತ್ರವಾದ ಮುದ್ದೆಬಿಹಾಳ್‌ನಲ್ಲಿ ಹೊಕ್ಕರಾಣಿ ಕೆರೆ ಇದೆ. ಅದಕ್ಕೆ ಮೂರು ಲಕ್ಷ ರೂಪಾಯಿ ಒದಗಿಸಿದ್ದಾರೆ. ಆ ಕೆರೆ ಕೆಲಸದ ಸಂಬಂಧದಲ್ಲಿ ಕೇಳಿದರೆ, ಬೆಂಗಳೂರಿಗೆ ಬರೆದಿದ್ದೇವೆ, ಅಲ್ಲಿಂದ ಇನ್ನೂವರೆಗೆ administrative sanction ಬಂದಿಲ್ಲವೆಂದು ಹೇಳಿದರು. ಇದನ್ನು ಮಾನ್ಯ ಮಂತ್ರಿಗಳಿಗೂ ಹೇಳಿದ್ದೇನೆ

ಇನ್ನು ಹೊಕ್ರಾಣಿ ಕೆರೆ ವಿಷಯವನ್ನು ತಮ್ಮ ಮುಂದೆ ಇಡುತ್ತೇನೆ. ಈ ಕೆರೆಯ ರಚನೆಗಾಗಿ ಇಂಜನಿಯರನ್ನು ಕೇಳಿದರೆ, ಹಣವನ್ನು ಸರ್ಕಾರದಿಂದ ಕೊಡಿಸಿ ಕೆಲಸ ಪ್ರಾರಂಭಿಸುತ್ತೇವೆ, ಸರ್ಕಾರದ ಮಂಜೂರಾತಿ ಜಾಗ್ರತೆ ಸಿಕ್ಕುವುದಿಲ್ಲವೆಂದು ಹೇಳುತ್ತಾರೆ. ಅಲ್ಲಿನ ಕೆಲಸ ಬಹಳ ಚರೋ ಆಗುತ್ತದೆ. ಆದಕಾರಣ ಮುಖ್ಯ ಮಂತ್ರಿಗಳು ಮರಾಮತ್ ಶಾಖೆ ಮಂತ್ರಿಗಳಿಗೆ ಈ ಹೊಕ್ರಾಣಿ ಕೆರೆ, ಸಿದ್ಧಾಪುರ ಮತ್ತು ಪರೇಕನೂರ್ ಬಂದಾರಾಗಳ ರಚನೆ ಕೆಲಸಗಳನ್ನು ಜಾಗ್ರತೆ ತೆಗೆದುಕೊಳ್ಳುವಂತೆ ಸೂಚಿಸುತ್ತಾರೆಂದು ನಾನು ತಿಳಿದಿದ್ದೇನೆ. ಆಗ ಉತ್ತರ ಕರ್ನಾಟಕದ ಭಾಗಗಳಿಗೆ ಬಾವಿಗಳಿಂದ ಚಲೋ ನೀರು ಒದಗುತ್ತದೆ. ಅದರಿಂದ ನಮ್ಮ ಜಿಲ್ಲೆಯೊಳಗೆ ನೀರಿನ ತೊಂದರೆ ಜಾಸ್ತಿಯಾಗುವುದಕ್ಕೆ ಅವಕಾಶವಿಲ್ಲ. ಸರ್ಕಾರದವರು ಕೇವಲ ಈಗ 200-300 ರೂಪಾಯಿಗಳ ಸಬ್ಸಿಡಿ ಕೊಡುತ್ತಾರೆ. ಅದು ಏನೇನೂ ಸಾಲದು. ನಮ್ಮಲ್ಲಿ ನೀರಾವರಿಯಾಗುವುದಕ್ಕೆ, ಬಾವಿ ತೋಡುವುದಕ್ಕೆ ಸುಮಾರು ನಾಲ್ಕು ಸಾವಿರ ರೂಪಾಯಿಗಳ ಖರ್ಚು ಬೀಳುತ್ತದೆ, ಕೇವಲ ಮೂರು ಸಾವಿರ ರೂಪಾಯಿಗಳು ಏನೇನೂ ಸಾಲುವುದಿಲ್ಲ. ಆದ್ದರಿಂದ ಸರ್ಕಾರದವರು ನಾಲ್ಕು ಸಾವಿರ ರೂಪಾಯಿಗಳನ್ನು ಸಾಲ ಕೊಡುವುದಕ್ಕೆ ತಯಾರಾಗಿರಬೇಕು. ಎರಡನೆಯದಾಗಿ ಮುಂಬೈಯೊಳಗೆ ಇದ್ದಾಗ್ಗೆ ಈ ಬಗ್ಗೆ ಖರ್ಚು ಎಷ್ಟಾಗುತ್ತದೆ ಎಂದರೆ ಮ್ಯಾಗ್ಸಿಮಂ 500 ರೂಪಾಯಿಗಳಷ್ಟು ಅಲ್ಲಿ ಆ ರೀತಿ ಸಬ್ಸಿಡಿ ಕೊಡುತ್ತಿದ್ದರು. 250 ರೂಪಾಯಿಗಳು ಬಹಳ ಕಡಮೆ ಎಂದು ಈಗ 500 ರೂಪಾಯಿಗಳನ್ನು ಮ್ಯಾಗ್ಸಿಮಂ ಎಂದು ಕೊಡುತ್ತಿದ್ದರು. ಇದನ್ನು ಇಲ್ಲಿಯೂ ಅಮಲಿನಲ್ಲಿ ತಂದರೆ ನಮ್ಮ ಜಿಲ್ಲೆಯೊಳಗೆ ಹೆಚ್ಚು ಭಾವಿಗಳಾಗುತ್ತವೆ.

ಇನ್ನು ರಸ್ತೆಯ ಸಂಬಂಧವಾಗಿ ಹೇಳುವುದಾದರೆ, ಸೋಲಾಪುರ–ಹುಬ್ಬಳ್ಳಿ ರಸ್ತೆ—ಈ ಭಾಗದಲ್ಲಿ ಅಲ್ಲಲ್ಲಿ ಸಣ್ಣಸಣ್ಣ ಕಲವರ್ಟ್ಸ್ ಮಾಡುತ್ತಿದ್ದಾರೆ. ಈ ರಸ್ತೆಯ ಮೇಲೆ ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಇವೆ. ಅವುಗಳಮೇಲೆ ಸೇತುವೆ ಹೋಗುತ್ತದೆ. ಅಲ್ಲಲ್ಲಿ ಸಣ್ಣ ಸಣ್ಣ ಹಳ್ಳದ ಕಾಲುವೆ ಇರುತ್ತದೆ ಆ ರಸ್ತೆಯ ಉದ್ದ 15 ಮೈಲಿ. ಇದರಮೇಲೆ ಎರಡು ದೊಡ್ಡ ಸೇತುವೆಗಳನ್ನು ನಮಗೆ ಇನ್ನೂ 20-30 ವರ್ಷಗಳವರೆಗೂ ವಿಶೇಷವಾಗಿ ಈ ನದಿಗಳಿಂದ ಅನುಕೂಲವಾಗುತ್ತದೆ ಆದ್ದರಿಂದ ಇಂತಹ ದೊಡ್ಡದೊಡ್ಡ ಸೇತುವೆಗಳ ಕಟ್ಟುವಿಕೆಗೆ ಸರ್ಕಾರದವರು ಹೆಚ್ಚಿಗೆ ನಿಗಾ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನೊಳಗೆ ಬರಗಾಲ ಬಂದಿದೆ. ಅನೇಕ ರಸ್ತೆ ರಿಪೇರಿ ಕೆಲಸಗಳು ಅರ್ಧಮರ್ಧವಾಗಿ ಅಲ್ಲಿಯೇ ಬಿಟ್ಟುಬಿಡುತ್ತಾರೆ. ಇನ್ನು ಆ ರಸ್ತೆಗಳನ್ನು ತೆಗೆದುಕೊಂಡರೆ, ರಸ್ತೆಗಳ ಕೆಲಸ ಪೂರ್ತಿ ಮುಗಿಯುತ್ತದೆ. ಹೆಸರಿಗೆ ಮಾತ್ರ ರಸ್ತೆ ರಿಪೇರಿ ನಡೆಯುತ್ತಿದೆಯೆಂದು ಕಾಗದದಲ್ಲಿ ಬರೆದಿರುತ್ತಾರೆಯೇ ಹೊರತು, ಕಾರ್ಯತಃ ಯಾವ ರಸ್ತೆಯ ರಿಪೇರಿ ಕೆಲಸವೂ ಸಮರ್ಪಕವಾಗಿ ನಡೆದಿಲ್ಲ. ಇದರಿಂದ ಅದನ್ನು ಬರಗಾಲ ಪ್ರದೇಶವಾಗಿ ಪರಿಗಣಿಸಿದೆ. ಕೂಲಿ ಬಡಬಗ್ಗರಿಗೆ ಚೆನ್ನಾಗಿ ಸಿಕ್ಕಿದರೂ ಅರ್ಧಮರ್ಧ ರಸ್ತೆ ರಿಪೇರಿ ಕೆಲಸ ಏನು ಕಾರಣದಿಂದ ನಡೆಯುತ್ತಿದೆಯೋ ನನಗೆ ಅರ್ಥವಾಗಲಿಲ್ಲ. ಆದಕಾರಣ ಸರ್ಕಾರದವರು ಇದನ್ನು ಕೂಡಲೆ ತಡೆಯುವುದಕ್ಕೆ ಪ್ರಯತ್ನ ಮಾಡಬೇಕು. ರಸ್ತೆಗಳ ಕೆಲಸವನ್ನು ಬೇಗನೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ನಮಗೆ ಮೈಸೂರು ಸ್ಟೇಟ್ ಮ್ಯಾಪ್ ಎಂದು ಒಂದು ಪುಸ್ತಕವನ್ನು ಕೊಟ್ಟಿದ್ದಾರೆ. ವಿದ್ಯುತ್ ಬಗ್ಗೆ ಇಂಥಿಂಥ ಲೈನ್‌ಗಳನ್ನು ತೆಗೆದುಕೊಳ್ಳುತ್ತೇವೆಂಬುದನ್ನು ನಕ್ಷೆ ಮಾಡಿ ಕೊಟ್ಟಿದ್ದಾರೆ. ಅದಕ್ಕೆ ವಿದ್ಯುತ್ ಶರಾವತಿ ಯೋಜನೆಯಿಂದ ಬರುತ್ತದೆ. ಆ ಯೋಜನೆ ಬರುವುದು 1962-63ರಲ್ಲಿ. ಆಗಲೂ ಆ ಯೋಜನೆ ಮುಗಿಯುತ್ತದೋ ಏನೋ ನನಗೆ ತಿಳಿಯಲಿಲ್ಲ. 1962ನೆಯ ಇಸವಿಯೊಳಗೆ ಆ ಯೋಜನೆ ಪೂರ್ತಿಯಾಗಬಹುದು ಎಂಬ ಪೂರ್ಣನಂಬಿಕೆ ನನಗೇನೋ ಇದೆ. ಆದರೂ ಅಷ್ಟರೊಳಗೆ ಸರ್ಕಾರದವರು ಮೊದಲೇ ವಿದ್ಯುತ್ ವಾಹಕ ತಂತಿಗಳನ್ನು ಎಳೆದುಬಿಟ್ಟಿದ್ದರೆ, 1962ನೆಯ ಇಸವಿಯೊಳಗೆ ಏಕ್‌ದಂ ವಿದ್ಯುತ್ ಸರಬರಾಜನ್ನು ಮಾಡುವ ಒಂದು ಕೆಲಸವನ್ನು ಪ್ರಾರಂಭ ಮಾಡಬಹುದು. ಆ ರೀತಿ ಮಾಡದೆ ಕೇವಲ ನಕ್ಷೆಯಲ್ಲಿಯೇ ತೀರ್ಮಾನ ಮಾಡಿದರೆ ಏನು ಪ್ರಯೋಜನ? ಸರ್ಕಾರದ ಭರವಸೆಯಂತೆ 1962ನೆಯ ಇಸವಿಯೊಳಗೆ ಶರಾವತಿ ವಿದ್ಯುತ್‌ಯೋಜನೆ ಸಂಪೂರ್ಣವಾಗುತ್ತದೋ ಇಲ್ಲವೋ? ಈಗ ಸದ್ಯಕ್ಕೆ ವಿದ್ಯುತ್ ಕಂಬ, ವಿದ್ಯುತ್ ತಂತಿಗಳನ್ನು ಹಾಕುವುದು ಬಹಳ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ವಿದ್ಯುತ್ ಕಂಬ ಮತ್ತು ತಂತಿಗಳನ್ನು ನಮ್ಮ ಜಿಲ್ಲೆಯಲ್ಲಿ ಹಾಕಿದರೆ ನನಗೆ ಸಮಾಧಾನವಾಗುತ್ತದೆ. ಶರಾವತಿ ಯೋಜನೆ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಪೂರ್ಣವಾಗುತ್ತದೋ ಏನೋ ನಮಗೆ ನಿಖರವಾಗಿ ಗೊತ್ತಿಲ್ಲ.

ಶ್ರೀ ಟಿ. ಮರಿಯಪ್ಪ (ಅರ್ಥ ಶಾಖೆಯ ಮಂತ್ರಿಗಳು).—ಪವರ್ ಇಲ್ಲದೆ ತಂತಿ ಎಳೆದರೆ ಏನು ಪ್ರಯೋಜನ?

ಶ್ರೀ ಪಿ. ಜಿ. ಸಿದ್ಧಾಂತಿ.—ನಾವು ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿ ಬಂದಿರುವವರು. ನಾವು ನಮ್ಮ ಕ್ಷೇತ್ರಕ್ಕೆ ಹೋದರೆ, ಅಲ್ಲಿನವರು ನೀವೇನು ಮಾಡಿದ್ದೀರಿ ಎಂದು ಕೇಳಿದರೆ, ಅವರ ಸಮಾಧಾನಕ್ಕಾಗಿ ಏನಾದರೂ ಹೇಳಬೇಕಾಗುತ್ತದೆ. ಇಷ್ಟು ವಿಷಯಗಳನ್ನು ಮಂತ್ರಿಗಳಲ್ಲಿ ನಾನು ವಿಜ್ಞಾಪನೆ ಮಾಡುತ್ತೇನೆ.

ಇನ್ನು ವ್ಯವಸಾಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗ ಕ್ಯಾಟಲ್ ಫಾರಂ ಎಂದು ಮಾಡುತ್ತಿದ್ದಾರೆ. ಕೃಷ್ಣಾ ನದಿಯ ದಂಡೆಯಲ್ಲಿ 200 ಎಕರೆಯ ಜಮೀನು ಹಾಗೆಯೇ ಬಿದ್ದಿದೆ. ವ್ಯವಸಾಯ ಮಂತ್ರಿಗಳು ಬಂದಾಗ್ಗೆ ಈ ವಿಷಯವನ್ನು ಅವರ ಲಕ್ಷಕ್ಕೆ ತಂದಿದ್ದೇನೆ. ಅಲ್ಲೊಂದು ಗುಡ್ಡ ಗಾಡು ಜಮೀನು ಇದೆ. ಅದು ಬಹಳ ಉತ್ಕೃಷ್ಟವಾದ ಜಮೀನಾಗುತ್ತದೆ. ಅದು ಬಹಳ ಬೆಲೆಯಾದುದು. ಆದ್ದರಿಂದ ಅಲ್ಲಿ ಕ್ಯಾಟಲ್ ಫಾರಂ ಬೆಳೆಯಿಸಬಹುದು ಎಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ವ್ಯವಸಾಯ bunding ಬಗ್ಗೆ ಹೇಳಬೇಕಾ

ದರೆ, ನಮ್ಮ ಜಿಲ್ಲೆಯಲ್ಲಿ ಬಹಳ ಕೆಲಸವಾಗಿದೆ. ಅದರ ಖರ್ಚಿನ ಬಗ್ಗೆ ನಾನು ಒಂದು ಮಾತು ಹೇಳುವೆನು. ಆದರೆ ಒಂದು ವಿಷಯ. ಎಲ್ಲಾ ಖರ್ಚು ಸರ್ಕಾರದ ಮೇಲೆ ಬೀಳುವುದಿಲ್ಲ. ರೈತರಮೇಲೂ ಬೀಳುತ್ತದೆ. ಶೇಕಡ 100 ರೂಪಾಯಿ ಖರ್ಚಿನಲ್ಲಿ 75 ರೂಪಾಯಿ ಭಾಗದಷ್ಟು ರೈತರಿಗೆ ಬೀಳುತ್ತದೆ. ಮಿಕ್ಕ 25 ರೂಪಾಯಿ ಭಾಗದಷ್ಟು ಸರ್ಕಾರಕ್ಕೆ ಬೀಳುತ್ತದೆ. ಸಿಬ್ಬಂದಿ ಬಗ್ಗೆ ಕೇಂದ್ರ ಸರ್ಕಾರದವರು ಸಬ್ಸಿಡಿ ಕೊಡುತ್ತಾರೆ. ರೈತರ ಭಾಗದಷ್ಟು ಖರ್ಚಿನಮೇಲೆ ಅವರು ಬಡ್ಡಿ ಬೇರೆ ಕೊಡುತ್ತಾರೆ. ಅದನ್ನು ಲೆಕ್ಕ ಮಾಡಿದರೆ ಸುಮಾರು ಶೇಕಡ 40ರಷ್ಟು ಬಡ್ಡಿ ಅಲ್ಲಿಂದ ಬರುತ್ತದೆ. ಇದರಿಂದ ಜಮೀನಿನ ಮಾಲೀಕರಿಗೆ ದೊಡ್ಡ ಭಾರ ಬೀಳುತ್ತದೆ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಸಾಲ ಕೊಡುವುದಲ್ಲದೆ ಸಿಬ್ಬಂದಿಗೆ ಕೊಡುವ ಶೇಕಡ 25ರಷ್ಟು ಭಾಗವನ್ನು ಕೊಡುತ್ತಾರೆ. ಇದರಿಂದ ರಾಜ್ಯ ಸರ್ಕಾರದವರು ಅದನ್ನು ತೆಗೆದುಕೊಂಡು ತಮ್ಮ ಖರ್ಚನ್ನು ತಿರುಗಿ ಪಡೆದುಕೊಳ್ಳುವರು. ರಾಜ್ಯ ಸರ್ಕಾರ ಏನೂ ಖರ್ಚು ಮಾಡುವುದಿಲ್ಲ. ಆದ್ದರಿಂದ ಬಡಬಗ್ಗರ ಮೇಲೆ, ರೈತರ ಮೇಲೆ ಬಡ್ಡಿ ಹಾಕದೆ ತಾವೇ ಬಡ್ಡಿ ತೆರಬೇಕು. ಈ ವರ್ಷ ಬರಗಾಲಸ್ಥಿತಿ ಒದಗಿದ್ದರಿಂದ ಕಂತಿನ ಹಣವನ್ನು ಕೊಡುವುದಾಗುವುದಿಲ್ಲ. ಡೆಪ್ಯುಟಿ ಕಮಿಷನರಿಗೆ ಹಣ ವಸೂಲಿಯನ್ನು ತಡೆಹಿಡಿಯಲು ಸರಕಾರದವರು ಆಜ್ಞೆ ಹೊರಡಿಸಬೇಕೆಂದು ವಿನಂತಿ. ವ್ಯವಸಾಯಗಾರರಿಗೆ ಬಡ್ಡಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ. ಇದರಿಂದ ಪುಕ್ಕಟೆ ಕೇಳುವುದಕ್ಕೆ ಬಂದಿಲ್ಲ. ಎಷ್ಟು ನಿವ್ವಳ ಖರ್ಚಾಗುತ್ತದೋ ಅಷ್ಟು ಖರ್ಚನ್ನು ರೈತರ ಕಡೆಯಿಂದ ತೆಗೆದುಕೊಳ್ಳಿರಿ, ಬಡ್ಡಿ ಮಾತ್ರ ತೆಗೆದುಕೊಳ್ಳಬೇಡಿರಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಒಂದೇ ಒಂದು ಮಾತು ಹೇಳುತ್ತೇನೆ. ಹೋದವರ್ಷ ಬರಗಾಲದ ನಿವಾರಣ ಬೋರ್ಡ್ ಮಾಡಿರೆಂದು ಹೇಳಿದ್ದೆ. ಬರಗಾಲದ ಪ್ರದೇಶವಾದ ಬಿಜಾಪುರ ಜಿಲ್ಲೆಯು ಹಳೆಯ ಮೈಸೂರಿಗೆ ಹೊಸದಾಗಿ ಸೇರಿತು. ಇಂಟಿಗ್ರೇಟೆಡ್ ಏರಿಯಾ ಬರಗಾಲದ ಪ್ರದೇಶ ಎಲ್ಲಾ ಕೂಡಿಕೊಂಡು ಹೇಗೆ ನಿವಾರಣೆ ಮಾಡಬೇಕು ಎಂದು ಯೋಚನೆ ಮಾಡಲು ಬೋರ್ಡ್ ಬೇಕಾಗುವುದು. ಮುಂಬೈ ಪ್ರಾಂತದಲ್ಲಿ ಒಂದು ಕಮಿಟಿಯನ್ನು ಮಾಡಿರುವರು. ಹಾಗೆಯೇ ವ್ಯವಸಾಯ ಖಾತೆಯವರು, ಮರಾಮತ್ತು ಖಾತೆಯವರು, ಕಂದಾಯ ಖಾತೆಯವರು ಈ ಮೂರು ಮಂದಿ ಸೇರಿಕೊಂಡು ಪ್ರತಿಯೊಂದು ಇಲಾಖೆಯೊಳಗೆ ಏನೇನು ನಡೆದಿದೆ ಬರಗಾಲ ಪ್ರದೇಶದಲ್ಲಿ ಅದನ್ನು ಹೇಗೆ ನಿವಾರಣೆ ಮಾಡಬೇಕು ಎಂಬುದಕ್ಕೆ ಒಂದು ರಿಪೋರ್ಟು ಕೊಡುವರು. ಏನೇನು ಯೋಚನೆ ಮಾಡಬೇಕು ಅದನ್ನು ತಿಳಿದುಕೊಂಡು ಒಂದು ಕಮಿಟಿ ಮಾಡಿದ್ದಾರೆ. ಬೋರ್ಡ್ ಮಾಡಿದರೂ ಚಲೋದು. ಕೆಲವು ಮಂದಿ ಗೊತ್ತಿರುವವರು ಮಾಹಿತಿ ಹೇಳುತ್ತಾರೆ. ಬೋರ್ಡ್ ಆಗದೇ ಇದ್ದರೆ ಮುಂಬಯಿ ರಾಜ್ಯದಲ್ಲಿ ಮಾಡಿದಂತೆ ಇಲ್ಲಿ ಕಮಿಟಿ ಮಾಡಿರಿ. ಬರಗಾಲ ನಿವಾರಣೆ ಆಗಲಿ ಎನ್ನುವ ಉದ್ದೇಶದಿಂದ ಹೇಳಿದೆ. ಈ ದೃಷ್ಟಿಯಿಂದ ಹೋದಸಾರ್ತಿ ಹೇಳಿದೆ. ಈ ಸಾರಿ ಆದರೂ ಉತ್ತರ ಬಂದೀತು ಎಂದು ಆಶೆ ಮಾಡುತ್ತೇನೆ.

ಅಲ್ಲಿಂದ ನಮ್ಮ ಬಿಜಾಪುರ ಜಿಲ್ಲೆಯೊಳಗೆ ಐದು ತಾಲ್ಲೂಕುಗಳಲ್ಲಿ C.D. ಬ್ಲಾಕು ಇಲ್ಲ. ಎನ್.ಇ.ಎಸ್. ಇಲ್ಲ. ಆ ತಾಲ್ಲೂಕಿನೊಳಗೆ ಸ್ಥಾನಿಕ ಅಭಿವೃದ್ಧಿ ಕೆಲಸ ಮಾಡಬೇಕು. ಹೋದ ಸಾರಿ ಹುಕುಂ ಬಂತು. ಇದ್ದ ಕೆಲಸ ಮುಗಿಸಬೇಕು ಎಂದು ಹೊಸದು ಯಾವುದೂ ಸ್ಥಾನಿಕ ಅಭಿವೃದ್ಧಿ ಕೆಲಸ ನಾವು ತೆಗೆದುಕೊಳ್ಳುವುದಿಲ್ಲ ಎಂದು. ಇದರಿಂದ ಯಾವ ಕೆಲಸ ಮುಗಿಯುವುದಿಲ್ಲ. ರಾಜ್ಯ ಸರ್ಕಾರಕ್ಕೆ ಭಾರತ ಸರ್ಕಾರದಿಂದ ರೂಪಾಯಿ ಬರಲಿಲ್ಲ, ನಾವು ಖರ್ಚು ಮಾಡುವುದಿಲ್ಲ ಎಂದರೆ 1963 ನೇ ಇಸ್ವಿಯ ತನಕ ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕ್ ಕೊಡುವುದಿಲ್ಲ ಎಂದರೆ ಅಲ್ಲಿಯ ತನಕ ತಾಲ್ಲೂಕಿನ ಅಭಿವೃದ್ಧಿ ಕೆಲಸ ಹೇಗೆ ಆಗುವುದು? ಸರ್ಕಾರದವರು ರೊಕ್ಕ ಕೊಡಬೇಕು. ಊರಿನವರು ರೊಕ್ಕ ಕೊಡಬೇಕು. ಕೆಲಸ ಮಾಡದೆ ಇರುವ ಸ್ಥಿತಿ ಆಗಬಾರದು ಎಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಭಾರತ ಸರ್ಕಾರ ಕೊಡಲಿ, ಕೊಡದೆ ಇರಲಿ ಊರಿನವರು ಕೊಡುತ್ತಾರೆ. ಕೆಲಸ ಮಾಡಿ. ಊರು ಅಭಿವೃದ್ಧಿಯಾಗುತ್ತದೆ. ಎನ್. ಇ. ಎಸ್. ಬ್ಲಾಕು ಕೊಡದಿದ್ದರೂ ಚಿಂತೆಯಿಲ್ಲ. ಅಭಿವೃದ್ಧಿ ಕೆಲಸ ಮಾತ್ರ ಮಾಡಿ. ಉಳಿದ ವಿಷಯಗಳನ್ನು ರೆವಿನ್ಯೂ ಸಂಬಂಧ ಬಂದಾಗ ಮಾತನಾಡುತ್ತೇನೆ. ಅಧ್ಯಕ್ಷರಿಗೆ ಅಭಿನಂದನೆಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

4-30 P.M.

†ಕೆ. ನಾಗಪ್ಪ ಆಳ್ವ (ಪಾಣೆಮಂಗಳೂರು).—ಮಾನ್ಯ ಅಧ್ಯಕ್ಷರೇ, ಅರ್ಥಿಕ ಮಂತ್ರಿಗಳು ನಮ್ಮ ಮುಂದೆ ಮಂಡಿಸಿರುವ ಉಳಿತಾಯ ಬಡ್ಜೆಟ್ಟನ್ನು ಸ್ವಾಗತಿಸುತ್ತೇನೆ. ಅದರಲ್ಲೂ ಅರ್ಥಗರ್ಭಿತವಾದ ಒಂದು ಭಾಷಣವನ್ನು ತಯಾರಿಸಿರುವುದು, ಅದು ಮಾತ್ರ ಅಲ್ಲದೆ ಒಂದು ಪ್ರಗತಿಪಥದಲ್ಲಿರುವ ಬಡ್ಜೆಟ್ಟನ್ನು ಮಂಡಿಸಿರುವುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಅದು ಅಷ್ಟೊಂದು ಉತ್ತಮ ತರದ ಭಾಷಣವಾಗಿದ್ದರೂಕೂಡ ಕೆಲವು ಮುಖ್ಯ ಅಂಶಗಳು ಅದರಲ್ಲಿ ಅಡಕವಾಗಿಲ್ಲ. ಹೊಸ ಮೈಸೂರು ಪ್ರಾಂತ ರಚನೆಯಾಗಿ ಎರಡು ವರ್ಷಗಳು ಆಗ ತ್ತಾ ಬಂದರೂ ಕೂಡ ಐದು ತರಹ ಘಟಕಗಳು ಬಂದದ್ದರಿಂದ, ಅನೇಕ ತರಹ ಆಡಳಿತ ಮತ್ತು ಮಾನವ ಸಂಬಂಧವಾದ ಸಮಸ್ಯೆಗಳನ್ನು ಎದುರಿಸಲಿಕ್ಕೆ ಇದ್ದದ್ದರಿಂದ, ಕೆಲವು ಸಮಸ್ಯೆಗಳು ಹೊಸದಾಗಿ ಉದ್ಭವಿಸುತ್ತಾ ಬಂದಿವೆ. ಅಭಿವೃದ್ಧಿ ಕಾರ್ಯಗಳು ನಡೆಯುತ್ತಾ ಬಂದಿವೆ. ಅನೇಕ ಏಕತರದ ಕಾನೂನುಗಳ ರಚನೆಯಾಗಬೇಕಾಗಿದೆ.ಅದರಲ್ಲೂ ಕೂಡ ಮುಖ್ಯವಾಗಿ ಆಗಬೇಕಾದ ಕೆಲವು ಕಾನೂನುಗಳು ಆಗದೆ ಬಾಕಿ ಇವೆ. ಈ ವಿಷಯದಲ್ಲಿ ತ್ವರಿತವಾದ ಕಾರ್ಯವನ್ನು ಮಾಡುವಂಥಾದ್ದು ಬಹಳ ಆಗತ್ಯವಿದೆ. ಪಂಚವಾರ್ಷಿಕ ಯೋಜನೆಗಳ ಕೆಲಸನನ್ನು ನೋಡಿದರೆ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಎರಡು ವರ್ಷಗಳಲ್ಲಿ ಅಷ್ಟೊಂದು ತೀವ್ರಗತಿಯಲ್ಲಿ ಕೆಲಸ ನಡೆಯದಿದ್ದರೂ ಕೂಡ ನಮಗೆ ಭರವಸೆ ಕಾಣುತ್ತಿದೆ; ಇನ್ನು ಮುಂದಿನ ವರ್ಷಗಳಲ್ಲಿ ಈ ಕಾರ್ಯವು ಒಳ್ಳೆಯ ರೀತಿಯಲ್ಲಿ ನಡೆಯಬಹುದು ಎನ್ನುವ ರೀತಿಯಲ್ಲಿ ನಂಬಿಕೆ ಕಾಣುತ್ತದೆ. ಆದರೆ ಈ ಭಾಷಣದಲ್ಲಿ ಮಾನಸಿಕ ಹಾಗೂ ಆರ್ಥಿಕ ವಿಲೀನೀಕರಣದ ಸಂಪೂರ್ಣವಾಗಿ ಆಗಿಲ್ಲ ಎಂದು ಹೇಳಿದರೆ ನನ್ನ ಅನುಭವದಲ್ಲಿ ಅದಕ್ಕೆ ಮುಖ್ಯವಾಗಿ ಮೂರು ಕಾರಣಗಳು ನನಗೆ ಕಾಣುತ್ತಿವೆ. ಆ ವಿಷಯದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ.

ಒಂದು, ನೌಕರರ ಸಂಬಳದ ಸಮಾನತೆ ಮತ್ತು inter-State seniority ಪಟ್ಟಿ. ಇದನ್ನು ಇತ್ಯರ್ಥ ಮಾಡುವುದರಲ್ಲಿ ಎಷ್ಟೇ ಕಷ್ಟಗಳಿದ್ದರೂ, ಇದು ಎಷ್ಟೋ

(ಶ್ರೀ ಕೆ. ನಾಗಪ್ಪ ಆಳ್ವ)

ಜಟಿಲ ಪ್ರಶ್ನೆಯಾಗಿದ್ದರೂ ಅದನ್ನು ಧೈರ್ಯವಾಗಿ ಇಷ್ಟು ಹೊತ್ತಿಗೆ ಮಾಡಬೇಕಾಗಿತ್ತು. ಎಲ್ಲರನ್ನೂ ಮೆಚ್ಚಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ; ದೇವರಿಂದಲೂ ಸಾಧ್ಯವಿಲ್ಲ. ಕ್ಯಾಬಿನೆಟ್ಟಿನ ನಾಲ್ಕು ಜನರ ಸಮಿತಿಯೂ ಕೂಡ ಇದನ್ನು ಸಂಪೂರ್ಣವಾಗಿ ಮಾಡಲಿಲ್ಲ. ಅದರಲ್ಲೂ ಭಿನ್ನಾಭಿಪ್ರಾಯಗಳಿದ್ದವೆಂದ ಗೊತ್ತಾಯಿತು. ಅವರಾದರೂ ಧೈರ್ಯವಾಗಿ ಕೆಲಸಮಾಡಬೇಕಿತ್ತು. ಧೈರ್ಯ ಮತ್ತು ಯಾವ ತೆರದ ದಾಕ್ಷಿಣ್ಯಕ್ಕೂ ಬೀಳದೆ ಆದಷ್ಟು ಬೇಗನೆ ಈ ಕಾರ್ಯವನ್ನು ಪರಿಹರಿಸಬೇಕಾದದ್ದು ಅಗತ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಎರಡನೆಯದಾಗಿ, ಪಾನನಿರೋಧ. ಇದರ ಸಂಬಂಧದಲ್ಲಿ, ನಾವು ಸತ್ಯ, ಧರ್ಮ ಇವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುವುದಿದ್ದರೆ, ನಾನು ಹೇಳಬೇಕಾಗುತ್ತದೆ —ಇದು ಖಂಡಿತ failure ಆಗಿದೆ, ಎಂದು. ಆದರೂ ಯಾವುದೋ ಕಾರಣದಿಂದ ಇದನ್ನು ಮುಂದೊತ್ತುವ ದಾರಿಯಲ್ಲಿ ಹೋಗುತ್ತಿದ್ದಾರೆ. ಆದ್ದರಿಂದ ಈವಿಷಯದಲ್ಲಿನನ್ನ ಒಂದು ಸೂಚನೆ ಯೇನೆಂದರೆ, ತಮಗೆ ಸಾಧ್ಯವಿದ್ದರೆ ಇದನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು, ಇಲ್ಲದಿದ್ದರೆ ಈಗ ಪ್ರೊಹಿಬಿಷನ್ ಕಾನೂನನ್ನು ತೊಡೆದು ಹಾಕಬೇಕು ಎಂದು ಹೇಳುತ್ತೇನೆ. ಈ ಹೊತ್ತು ಎಲ್ಲಿ ನೋಡಿದರೂ, ಈ ಸಭೆಯಲ್ಲಿ ಅನೇಕರ ಭಾಷಣಗಳಲ್ಲಿಯೂ ಸದ ಪೋಲೀಸ್ ಇಲಾಖೆಯವರಮೇಲೆ ಅನೇಕ ತೆರಹ ಟೀಕೆಗಳು ಬರುತ್ತಿವೆ. ಇದಕ್ಕೆ ಮುಖ್ಯವಾದ ಕಾರಣ ಪೋಲೀಸ್ ಇಲಾಖೆಗೆ ಈ ಕಾರ್ಯವನ್ನು ವಹಿಸಿರತಕ್ಕದ್ದು. ಇದರಿಂದ ಏನಾಗಿದೆಯೆಂದು ಮಂತ್ರಿಗಳಿಗೂ ಗೊತ್ತು. ಮಾಮೂಲು, ಲಂಚ ಲಾಭ-ಇವೆಲ್ಲಕ್ಕೂ ಇದು ಎಡೆಕೊಟ್ಟಿದೆ. ಪ್ರೊಹಿಬಿಷನ್ ಜಾರಿಗೆ ಬಂದುದಾಗಿ ಕೆಲವರಿಗೆ ಮಾಮೂಲು—ಲಂಚ ಪಡೆಯುವುದಕ್ಕೆ ಅನುಕೂಲವಾಗಿದೆ. ಸಮತಾವಾದ ಸಮಾಜವು ರಚನೆಯಾಗುವುದು ಹೋಗಿ ದೊಡ್ಡ ದೊಡ್ಡ ಲೀಡರುಗಳು—ಗ್ಯಾಂಗ್ ಲೀಡರುಗಳು—ಇದರಿಂದಾಗಿ ಹಣ ಮಾಡುವಂಥ ಅಥವಾ ಪ್ರಭಾವ ಬೀರುವಂಥ ಸಂದರ್ಭ ಹೆಚ್ಚುತ್ತದೆ. ಆದ್ದರಿಂದ ಪ್ರೊಹಿಬಿಷನ್ನನ್ನು ಮುಂದುವರಿಸುವುದಾದರೆ ಇದರ ಕೆಲಸವನ್ನು ಪೋಲೀಸ್ ಡಿಪಾರ್ಟ್‌ಮೆಂಟಿಗೆ ತಪ್ಪಿಸಿ ಬೇರೆ ಒಬ್ಬ ಮುಖ್ಯಾಧಿಕಾರಿಗೆ ಕೊಡುವುದು ಮುಖ್ಯವೆಂದು ಹೇಳುತ್ತೇನೆ.

ಮೂರನೆಯದಾಗಿ ಒಂದು ಮಹತ್ತರವಾದ ವಿಚಾರವೆಂದರೆ ಗಡಿ ವಿವಾದದ ಪ್ರಶ್ನೆ. ಇದು ನಮ್ಮ ದೇಶದಲ್ಲಿ ಒಂದು cancer ರೋಗದಂತಿದೆ. ಅದಕ್ಕೆ ಆಗಬೇಕಾದದ್ದು ಔಷಧಿ ಇಲ್ಲವಾದರೆ ಆಪರೇಷನ್— ಇವೆರಡರಲ್ಲಿ ಒಂದು ಆಗಬೇಕು. ನಾನು ನಿಜವಾಗಿ ಹೇಳುವುದಾದರೆ, ಈ ವಿಷಯದಲ್ಲಿ ನಮ್ಮ ಮುಖ್ಯ ಮಂತ್ರಿಗಳ ಸಹನಶಕ್ತಿ ಹಾಗೂ ಧೈರ್ಯವನ್ನು ನಾನು ಮೆಚ್ಚುತ್ತೇನೆ. ಅವರು ನಮ್ಮ ಆಶ್ವಾಸನ ಕೊಟ್ಟಿದಾರೆ, ಧೈರ್ಯ ಕೊಟ್ಟಿದ್ದಾರೆ. ಆದರೆ ಒಂದು ಶಬ್ದ ಮಾತ್ರ ಇದುವರಗೂ ಅವರ ಬಾಯಿಂದ ಬರಲಿಲ್ಲ. ಕನ್ನಡಿಗನಾಗಿ ನಾನದನ್ನು ಹೇಳಬಯಸುತ್ತೇನೆ. ಕ್ಯಾಸರಗೋಡು ಅಚ್ಚ ಕನ್ನಡದ ನಾಡು ಎಂಬುದರಲ್ಲಿ ಯಾವತೆರದ ಅಡ್ಡಿಯೂ ಅಲ್ಲ. ಆ ವಿಷಯದಲ್ಲಿ ಯಾವ ತೆರದ ಕಷ್ಟವಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಲಿಲ್ಲ. ನಮ್ಮ ಕೇಳಿಕೆಗಳಿಗೆಲ್ಲಾ ಬೆಲೆಯಿಲ್ಲದಂತಾಗಿದೆ. ಪ್ರಜಾಪ್ರಭುತ್ವ ತತ್ವಕ್ಕೆ ಎಲ್ಲ ರೀತಿಯಲ್ಲೂ ಬೆಲೆ ಕೊಟ್ಟ ನಮ್ಮಗಳ ಸಹನ ಶಕ್ತಿಯನ್ನು ಇಂದು ಪರೀಕ್ಷೆ ಮಾಡುವಂತಿದೆ ನಮ್ಮ ಸಹನ ಶಕ್ತಿಯನ್ನು ಬಲಹೀನತೆಯೆಂದು ತಿಳಿದುಕೊಳ್ಳದೆ, ಈಹೊತ್ತು ಗಡಿ ವಿವಾದ ತೀರ್ಮಾನವಾಗುವಾಗ, ಯಾವ ತೆರದಲ್ಲಿ ರಾಜ್ಯ ಪುನರ್ವಿಂಗಡಣಾ ಸಮಿತಿಯು ತಮ್ಮ ತಪ್ಪನ್ನು ಒಪ್ಪಿಕೊಂಡು ವಿಚಾರವನ್ನು ತಮಗೆ ತಿಳಿಸಿದರೋ ಹಾಗೆಯೇ, ಬೇಗನೆ ಕೆಲಸ ಕೈಮೀರಿ ಹೋಗುವುದಕ್ಕೆ ಮುಂಚೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸಹನಶಕ್ತಿ ಮತ್ತು ಒಗ್ಗಟ್ಟಿನ ಶಕ್ತಿಗೆ ಬೆಲೆಕೊಟ್ಟು ಈ ಕಾರ್ಯ ನೆರವೇರಿಸಿಕೊಡಬೇಕು. ಈ ಬಗ್ಗೆ ನಡೆಯಬೇಕಾದ ಕೆಲಸವನ್ನು ನಮ್ಮ ಮುಖ್ಯ ಮಂತ್ರಿಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಕ್ಕಿಯ ಬೆಲೆ ಜಾಸ್ತಿಯಾಗುತ್ತಾ ಬರುತ್ತಿರುವುದನ್ನು ತಡೆಗಟ್ಟಲು ಅಕ್ಕಿಯ ದಾಸ್ತಾನನ್ನು ಕಳೆದ ವರ್ಷ ಮಾಡಿಯೂ ಈ ವರ್ಷ ಅಕ್ಕಿಯನ್ನು ಹೆಚ್ಚು ಧಾರಣೆ ಮಾರುತ್ತಿರುವಾಗ, ಅದಕ್ಕೆ ಬೇಕಾದ ಕಾನೂನು ಲೈಸೆನ್ಸ್‌ಗಳು ಜಾರಿಯಾಗುತ್ತಲಿವೆ. ಈ ಸಂಬಂಧದಲ್ಲಿ ಒಂದು ವಿಚಾರ ಹೇಳಬಯಸುತ್ತೇನೆ.

ದೇಶದ ಪ್ರತಿಯೊಂದು ಭಾಗದಲ್ಲಿಯೂ ಮಣ್ಣಿನ ಶಕ್ತಿಯಲ್ಲಿ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋದಲ್ಲಿ, ಅದರ ಫಲವತ್ತಿನಲ್ಲಿ ವ್ಯತ್ಯಾಸವಿರುವುದರಿಂದ ಅದನ್ನು ಗಣನೆಗೆ ತೆಗೆದುಕೊಂಡು ಅಲ್ಲಿ ಬೆಳೆದ ಅಕ್ಕಿಯ ಧಾರಣೆಯನ್ನು ಗೊತ್ತುಮಾಡುವುದು ಸರ್ಕಾರದ ಕರ್ತವ್ಯ. ಪ್ರತಿಯೊಬ್ಬ ರೈತನಿಗೂ ಅವನು ಮಾಡುವ ಕೆಲಸಕ್ಕೆ ಅವನ ಉತ್ಪಾದನೆಗೆ ನ್ಯಾಯವಾದ ಬೆಲೆ ಸಿಕ್ಕುವಂತೆ ಮಾಡುವುದು ಅಗತ್ಯ. ಪೇಟೆಯಲ್ಲಿರುವವರಿಗೆ, ಕಾರ್ಖಾನೆಯಲ್ಲಿ ಕೆಲಸ ಮಾಡುವ ಜನರಿಗೆ ಅಕ್ಕಿಯ ಬೆಲೆಯ ಜಾಸ್ತಿಯಾಯಿತೆಂದು ಕಾಣಬಹುದು. ಆದರೂ ದೇಶಾಭಿಮಾನವಿದ್ದಲ್ಲಿ, ಹಳ್ಳಿಯ ರೈತನಿಗೆ ಪ್ರತಿಯೊಬ್ಬರೂ ಅವನ ಉತ್ಪಾದನೆಗೆ ನ್ಯಾಯವಾದ ಬೆಲೆ ಕೊಡಲೇಬೇಕು: ಹೀಗಿರುವಾಗ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ರೈತರ ಅನುಭವ ಹೇಳುವುದಾದರೆ, ಅಲ್ಲಿಯ ಕೃಷಿಕನ ಜೀವನದ ಕಷ್ಟವನ್ನು ಯಾರೂ ಮರೆಯುವಂತಿಲ್ಲ. ಅವನಿಗಿರತಕ್ಕ ಉತ್ಪತ್ತಿಯ ಖರ್ಚು ಬೇರೆ ಎಲ್ಲ ಕಡೆಗಿಂತಲೂ ಹೆಚ್ಚು. ಆದ್ದರಿಂದ ಅವನಿಗೆ ಮಣಕ್ಕೆ 15 ರೂಪಾಯಿ 20 ರೂಪಾಯಿಗಳನ್ನು ಗೊತ್ತುಮಾಡಿದರೆ ಏನೂ ಫಲಸಿಕ್ಕಂತಾಗುವುದಿಲ್ಲ. ಕಡೆಯ ಪಕ್ಷ 20-26 ರೂಪಾಯಿಗಳನ್ನಾದರೂ ಗೊತ್ತುಮಾಡಬೇಕೆಂದು ಹೇಳುತ್ತೇನೆ.

ಕೋ-ಆಪರೇಟಿವ್ ಭೂಸುಧಾರಣೆಯಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಎಂದು ಬರುತ್ತದೆ. ಇದರ ಸಂಬಂಧವಾಗಿ ನಾನೀಗ ಹೆಚ್ಚಿಗೆ ಹೇಳಬಯಸುವುದಿಲ್ಲ. ಸರ್ವಿಸ್ ಕೋ-ಆಪರೇಟಿವ್‌ಸ್ ಎಂಬುದು ಈ ಸಂಬಂಧ ಮೊದಲು ಬಂದದ್ದು. ಇವುಗಳ ಮುಖಾಂತರ ಜನರ ವಿಶ್ವಾಸವನ್ನು ಒಂದೆರಡು ವರ್ಷಗಳಲ್ಲಿ ಗಳಿಸದೆ ಇದ್ದರೆ, ಬೇರೆ ಕೋ-ಆಪರೇಟಿವ್‌ಸ್‌ಗಳಿಂದ ಸಾಧ್ಯವಿಲ್ಲವೆಂದು ನಾನು ಹೇಳಬಲ್ಲೆ. ಆದ್ದರಿಂದ ತಾವು ಮೊದಲು ಸರ್ವಿಸ್ ಕೋ-ಆಪರೇಟಿವ್‌ಗಳನ್ನು ಏರ್ಪಾಡುಮಾಡಿ ಹಳ್ಳಿಯ ಜನರಿಗೆ ಬೇಕಾದ ಎಲ್ಲ ಸಹಾಯ ಸೌಲಭ್ಯಗಳನ್ನೂ ಒದಗಿಸಿಕೊಟ್ಟರೆ ಅವರ ಪ್ರೀತಿ ವಿಶ್ವಾಸವನ್ನು ಗಳಿಸಿದಂತಾಗುತ್ತದೆ. ಅದು ಬಿಟ್ಟು ಬರೀ ಉದ್ದ ಉದ್ದದ ತತ್ವಗಳನ್ನು ಪ್ರಚಾರ ಮಾಡಿದರೆ ಸಾಲದು. ನೀವು ಕಾರ್ಯತಃ ಮಾಡಿ ತೋರಿಸಬೇಕು. ಏಕೆಂದರೆ, ಈಗಿನ ಕಾಲದಲ್ಲಿ ಕೋ-ಆಪರೇಟಿವ್‌ಗಳ ಪರಿಚಯ ಕೇವಲ ಹತ್ತರಷ್ಟು ಜನರಿಗೆ ಮಾತ್ರ ಉಂಟಾಗಿದೆ. ನೂರರಲ್ಲಿ 50 ಜನರಿಗೆ ಇದು ಮುಟ್ಟಿ, ಅವರಿಗೆ ಅದರ ಪ್ರಯೋಜನ ಕಾರ್ಯರೂಪ

ದಲ್ಲಿ ಸಿಕ್ಕದೆ ಇದ್ದರೆ, ಅವರಿಂದ ಮಿಕ್ಕ ವಿಷಯಗಳಲ್ಲಿ ಕೋ-ಆಪರೇಷನ್ ಸಿಕ್ಕುವುದಿಲ್ಲ.

ಎರಡನೆಯದಾಗಿ, ಬಂಜರು ಭೂಮಿಯ ವಿಲೇವಾರಿಯ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಬಂಜರು ಭೂಮಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲಿ ಎರಡು ಲಕ್ಷ ಎಕರೆಯಷ್ಟಿದೆ. ಸ್ವಲ್ಪ ಖರ್ಚು ಮಾಡಿದರೆ ಸಾಗುವಳಿಗೆ ತರಬಹುದಾದದ್ದು 90,000 ಎಕರೆಯಿದೆ. ಅದನ್ನು ಕೋ-ಆಪರೇಟಿವ್ ಫಾರಂ ಎಂದು ಹೇಳದೆ ಇದ್ದರೂ ರೈತರಿಗೆಲ್ಲರಿಗೂ ಬಿಟ್ಟುಕೊಟ್ಟು ವ್ಯವಸಾಯ ಮಾಡಿಸುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಇನ್ನೊಂದು ವಿಚಾರ ಹೇಳಿ ಮುಗಿಸುತ್ತೇನೆ. ರೈತರ ಜೀವನದ ಮಟ್ಟ ಮೇಲಕ್ಕೆ ಏರಬೇಕಾದರೆ ಬರೀ ಕೃಷಿಯಿಂದ ಸಾಧ್ಯವಿಲ್ಲ. ಮಹಾತ್ಮಾ ಗಾಂಧಿಯವರು ಯಾವ ತತ್ವವನ್ನು ಹೇಳುತ್ತಾ ಬಂದಿದ್ದರೋ ನಾವೂ ಅದೇ ತತ್ವವನ್ನು ಬೋಧಿಸುತ್ತಿದ್ದೇವೆಯೇ ಹೊರತು ಕಾರ್ಯ ರೂಪದಲ್ಲಿ ನಿಜವಾಗಿಯೂ ಏನೂ ಮಾಡುತ್ತಿಲ್ಲ. ಅದೇನೆಂದರೆ, ಗೃಹ ಕೈಗಾರಿಕೆಗಳನ್ನು ಮತ್ತು ಸಣ್ಣ ಕೈಗಾರಿಕೆಗಳನ್ನು ಸಹಕಾರ ತತ್ವದ ರೀತ್ಯಾ ನಡೆಸಲು ಪ್ರಯತ್ನ ಮಾಡಬೇಕು. ರೈತನ ಆರ್ಥಿಕ ಮಟ್ಟ ಇಂಥ ಉಪವೃತ್ತಿಗಳಿಲ್ಲದೆ ಮೇಲಕ್ಕೇರುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾಡಿಕೊಟ್ಟ ಹೊರತು ರೈತರಿಗೆ ಸರ್ಕಾರದಲ್ಲಿ ಪ್ರೀತಿ ವಿಶ್ವಾಸಗಳು ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಖನಿಜ ಸಂಪತ್ತು ಬಹಳ ದೊಡ್ಡದು. ವನಸಂಪತ್ತು, ಮೀನಿನ ಸಂಪತ್ತು, ಹೀಗೆ ಎಲ್ಲಾ ಸಂಪತ್ತುಗಳಿಂದ ಕೂಡಿದ ಸಮೃದ್ಧಿಯಾದ ರಾಜ್ಯವೆಂಬ ಮಾತನ್ನು ಕೇಳುತ್ತಿದ್ದೇನೆ. ಕರಾವಳಿಯಲ್ಲಿ ಮೀನಿನ ಸಂಪತ್ತಿದೆ. ಆದರೆ ಇಷ್ಟೆಲ್ಲಾ ಶಬ್ದಗಳನ್ನು ಈ ಸಭೆಯಲ್ಲಿ ತರುತ್ತಾ ಇದ್ದರೂ, ಇದರಲ್ಲಿ ಬೇಕಾದಷ್ಟು ಕೆಲಸ ನಿಜವಾಗಿ ಆಗಿಲ್ಲ. ಈ ಬಜೆಟ್ಟಿನಲ್ಲಿ ಅದಕ್ಕೆ ಬೇಕಾದಷ್ಟು ಹಣ ಕೊಟ್ಟಿರುವುದು ಸಾಲದು, ಉತ್ತೇಜನ ಸಾಲದು. ಇವತ್ತು ನಮ್ಮ ರಾಜ್ಯ ಎಲ್ಲಾ ಸಂಪತ್ತುಗಳಿಂದ ಕೂಡಿದ್ದರೂ ಕೂಡ ಜನತೆಯ ಶಾಂತತೆ, ಮನಸ್ಸಿನ ಸಂಪತ್ತು ಎದ್ದು ಕಾಣಬೇಕಾಗಿದೆ. ಆ ವಿಷಯದಲ್ಲಿ ಸರ್ಕಾರ ಹೆಚ್ಚಿಗೆ ಗಮನ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಟಿ. ಮರಿಯಪ್ಪ.—ಏನು ಮಾಡಬೇಕೆಂಬುದನ್ನು ಹೇಳಿ.

ಶ್ರೀ ಕೆ. ನಾಗಪ್ಪ ಆಳ್ವ.—ನನಗೆ ಈಗ ಅಷ್ಟಾಗಿ ಕಾಲಾವಕಾಶ ಸಿಕ್ಕಿಲ್ಲ. ಆದರಿಂದ ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಸಮಯ ಕೊಟ್ಟರೆ ಆಗ ಎಲ್ಲ ವಿಚಾರಗಳ ಮೇಲೆ ವಿಶದವಾಗಿ ಮಾತನಾಡಬೇಕೆಂಬ ಆಶೆಯಲ್ಲಿದ್ದೇನೆ.

ಇನ್ನು ಕರಾವಳಿ ಪ್ರದೇಶದಿಂದ ಒಳನಾಡಿಗೆ ಸಂಪತ್ತಿನಿಂದ ಕೂಡಿದ ರಾಷ್ಟ್ರೀಯ ದಾರಿ ಒಂದು ಹೆದ್ದಾರಿ ಆಗಬೇಕಾಗಿದೆ. ಅದು ಒಂದು ದೊಡ್ಡ ಬಂದರು. ಈ ಬಂದರಿನ ವಿಷಯವಾಗಿ ಮುಖ್ಯ ಮಂತ್ರಿಗಳಿಂದ ಒಂದು ಆಶ್ವಾಸನ ಬಂದಿದೆ. ಮಂಗಳೂರು ಬಂದರು ಸರ್ವೋತ್ಕೃಷ್ಟವಾದ ಬಂದರು ಎಂಬುದಾಗಿ ಇಂಡಿಯಾ ಸರ್ಕಾರದಿಂದ ಕಳೆದ ಐದು ವರ್ಷಗಳಿಂದ ಎಷ್ಟೋ ಆಶ್ವಾಸನ ಕೊಟ್ಟರು. ಅದು ಆಗಲಿಲ್ಲ. ಅದು ಕೂಡಲೇ ಆಗಬೇಕು. ಇದರ ಜೊತೆಗೆ ಹಾಸನ-ಮಂಗಳೂರು ರೈಲು, ನಮ್ಮ ಮಲೆನಾಡಿನ ಅಭಿವೃದ್ಧಿ ಇವು ಆಗಬೇಕಾದರೆ ಮತ್ತು ಇಡೀ ಭಾರತದ ಅಭಿವೃದ್ಧಿಯಾಗಬೇಕಾದರೆ ನಮಗೆ ಸರ್ವೋತ್ಕೃಷ್ಟವಾದ ಬಂದರು ಆಗಬೇಕು. ಅದರ ಜೊತೆಗೆ ಹಾಸನ-ಮಂಗಳೂರು ರೈಲ್ವೆ ಜಾಗ್ರತೆಯಾಗಿ ಆಗಬೇಕು. ಎಷ್ಟು ಪ್ರಾಮುಖ್ಯತೆಯನ್ನು ಶರಾವತಿ ಯೋಜನೆಗೆ ಕೊಟ್ಟಿದ್ದೀರೋ ಅಷ್ಟೇ ಪ್ರಾಮುಖ್ಯತೆಯನ್ನು ಹಾಸನ-ಮಂಗಳೂರು ರೈಲು ಮಾರ್ಗ ಹಾಕುವುದಕ್ಕೂ ಕೊಡಬೇಕು. ಅಂತಹ ಒಂದು ಒತ್ತಾಯ ಕೇಂದ್ರ ಸರ್ಕಾರದ ಮೇಲೆ ಬೀಳುವುದು ಅಗತ್ಯವಿದೆ. ಅದಕ್ಕಾಗಿ ನಮ್ಮ ಸರ್ಕಾರದವರು ಹೆಚ್ಚು ಕೆಲಸಮಾಡಬೇಕಾಗಿದೆ.

ಇನ್ನು ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ವಿಷಯವಾಗಿ ಪ್ರತ್ಯೇಕವಾಗಿ ಯಾವ ಮಾತೂ ಬಂದಿಲ್ಲ. ಮಲೆನಾಡು ಸಮೃದ್ಧಿಯಾದರೆ ಇಡೀ ದೇಶದ ಸಂಪತ್ತು ಹೆಚ್ಚಲಿಕ್ಕೆ ಕಾರಣವಿದೆ. ಈ ವಿಷಯದಲ್ಲಿ ಹೆಚ್ಚಿನ ನಿಗಾ ತೆಗೆದುಕೊಂಡು ಜನರಿಗೆ ಎದ್ದು ಕಾಣುವಂಥ ಕೆಲವು ಕೆಲಸಗಳನ್ನು ಮಾಡಬೇಕಾದರೆ ನಾನಾ ಯೋಜನೆಗಳನ್ನು ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಜನಾರೋಗ್ಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ನಾನು ಹೆಲ್ತ್ ಡಿಮ್ಯಾಂಡ್ ಚರ್ಚೆಯ ಕಾಲದಲ್ಲಿ ಸ್ವಲ್ಪ ಉದ್ದವಾಗಿ ಭಾಷಣಮಾಡಬೇಕೆಂದಿದ್ದೇನೆ. ಮುಖ್ಯವಾಗಿ ಆರೋಗ್ಯ ಇಲಾಖೆಯಲ್ಲಿ ಡಾಕ್ಟರುಗಳು ಹೆಚ್ಚಾಗಬೇಕು. ಆ ಇಲಾಖೆಯ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು.

ಫ್ಯಾಮಿಲಿ ಪ್ಲಾನಿಂಗ್ ವಿಷಯದಲ್ಲಿ ಒಂದು ಆಜ್ಞೆ ಜಾರಿಯಲ್ಲಿದೆ. ಇದರಲ್ಲಿ ಮಿತಸಂತತಿಪ್ರಚಾರ ವಿಷಯವಾಗಿ ಹೆಚ್ಚಿಗೆ ಬಡವರ ಮಟ್ಟಿಗೆ ಮಾಡಿ, ಅವರು ಹೆಚ್ಚಿನ ಪ್ರಯೋಜನ ಪಡೆದುಕೊಳ್ಳುವಂತೆ ಮಾಡುವುದು ಅಗತ್ಯವಿದೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀ ಶಿವಪ್ಪನವರು ಈ ಬಗ್ಗೆ ಕೆಲವು ಮಾತಗಳನ್ನಾಡಿದರು. ನನಗೆ ಅದರಿಂದ ಬಹಳ ಬೇಸರವಾಗಿದೆ. ಅವರು ಒಳ್ಳೆ ಭಾಷಣಕಾರರು, ಒಳ್ಳೆಯ ಅನುಭವಸ್ಥರು, ಬುದ್ಧಿವಂತರು, ಯಾವ ವಿಚಾರವನ್ನೂ ತಿಳಿಯದೆ ಮಾತನಾಡುವವರಲ್ಲ. ಈ ಮಿತ ಸಂತಾನ ಪದ್ಧತಿ ಈ ಲೋಕದ ಅನೇಕ ದೇಶಗಳಲ್ಲಿ ಇರುವುದು ಮಾತ್ರವೇ ಅಲ್ಲ. ಅದು ನಮ್ಮ ನೆರೆಹೊರೆ ಪ್ರದೇಶಗಳಲ್ಲಿಯೂ ಇದೆ. ಅಂಥಾದ್ದರಲ್ಲಿ ಅವರು ಏನೂ ತಿಳಿಯದೆ ಯಾರೋ ಹೇಳಿದ ಮಾತುಗಳನ್ನು ಕೇಳಿ ಇಲ್ಲಿ ಕೆಲವು ಅಲ್ಪ ಮಾತುಗಳಿಂದ ಅವರ ಒಂದು ಸಣ್ಣತನವನ್ನು ತೋರಿಸಿದ್ದಾರೆ. ಬೊಂಬಾಯಿನಲ್ಲಿ ಅನೇಕ ವರ್ಷಗಳ ಆಡಳಿತದ ಅನುಭವವನ್ನು ಪಡೆದು ಈ ಆರೋಗ್ಯ ಇಲಾಖೆಯಲ್ಲಿಯೇ ಹೆಚ್ಚಿನ ಅನುಭವವನ್ನು ಪಡೆದಿರುವ ನಮ್ಮ ಆರೋಗ್ಯ ಮಂತ್ರಿಗಳಾದ ಶ್ರೀಮಾನ್ ಡಾ॥ ಕೆ. ಹೆಗ್ಗಡೆಯವರು ಇಲ್ಲಿ ಇದ್ದಾರೆ. ಅವರು ಎಲ್ಲ ವಿಚಾರಗಳನ್ನೂ ತಿಳಿದು ಮಾಡಿದ್ದಾರೆ. ಇವತ್ತು ಆನರರಿ ಡಾಕ್ಟರ್ ಆಗಿರುವವರು ಅವರ ಸೇವಾ ಬುದ್ಧಿಯಿಂದ ಅವರ ಅನುಭವದ ಪ್ರಯೋಜನವನ್ನು ಜನತೆಗೆ ಸಿಕ್ಕುವಂತೆ ಮಾಡಿ ಜನರ ಪ್ರೀತಿ, ವಿಶ್ವಾಸವನ್ನು ಗಳಿಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಹೇಳುತ್ತೇನೆ.

ಕಡೆಯದಾಗಿ ಇನ್ನು ಪಂಚಾಯಿತಿ ಮತ್ತು ಕೋ-ಆಪರೇಟಿವ್ ಸೊಸೈಟಿ ಬಿಲ್ಲನ್ನು ಇದೇ ಅಧಿವೇಶನದಲ್ಲಿ ಪಾಸ್ ಆಗುವಂತೆ ವ್ಯವಸ್ಥೆಮಾಡಬೇಕು. ಕೇಂದ್ರ ವೇತನದ ಸಮಿತಿ ಬಂದಮೇಲೆ ವೇತನಮಟ್ಟ ಸರಿಯಾಗುತ್ತದೆ ಎಂದು ಹೇಳತ್ತಾರೆ. ಕೆಲವು ಕಡೆಗಳಲ್ಲಿ ನಿಜವಾಗಿ certain anomalies ಇವೆ. ಅವನ್ನು ಮಾತ್ರ ಹೇಳ ಬಯಸುತ್ತೇನೆ. ವಿದ್ಯಾ ಇಲಾಖೆಯಲ್ಲಿ ತುಂಬ ಕೆಲಸ ಮಾಡಿದ್ದಾರೆ,

(ಶ್ರೀ ಕೆ. ನಾಗಪ್ಪ ಆಳ್ವ)

ಆದರೆ ವೇತನದಲ್ಲಿರತಕ್ಕ ವ್ಯತ್ಯಾಸದ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ಟ್ರೈನ್ಡ್ ಅಂಡ್ ಅನ್‌ಟ್ರೈನ್ಡ್ ಗ್ರ್ಯಾಜುಯೇಟ್ಸ್ ವಿಷಯದಲ್ಲಿ 20 ರೂಪಾಯಿಗಳ ಹೆಚ್ಚು ಕಡಿಮೆ ಇದೆ. ಎಸ್. ಎಸ್. ಎಲ್. ಸಿ. ಟ್ರೈನ್ಡ್ ಅಂಡ್ ಅನ್‌ಟ್ರೈನ್ಡ್, ಅವರ ಸಂಬಳದಲ್ಲಿ ಆ ರೀತಿ ವ್ಯತ್ಯಾಸ ಇದ್ದರೂ ಚಿಂತೆ ಇಲ್ಲ, ಆದರೆ ಅವರು ಒಂದು ಮಟ್ಟಕ್ಕೆ ಬರಬೇಕಾದರೆ ಅವರ ಸಂಬಳದ ಮಟ್ಟದಲ್ಲಿ ವಿಪರೀತವಾಗಿ ವ್ಯತ್ಯಾಸವಿರಬಾರದು. ಇದೇ ರೀತಿಯಲ್ಲಿ ಇನ್ನೂ ಅನೇಕ ಇಲಾಖೆಗಳಲ್ಲಿ ಇಂತಹ ನ್ಯೂನತೆಗಳಿವೆ. ಅವನು ಸರಿಮಾಡಿಕೊಳ್ಳಬೇಕು ಎಂಬುದಾಗಿ ಸರ್ಕಾರದವರನ್ನು ಕೇಳಿಕೊಂಡು ನನಗೆ ಮಾತನಾಡಲು ಸದವಕಾಶವನ್ನು ಕಲ್ಪಿಸಿ ಕೊಟ್ಟಂಥ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri G. VENKATAI GOWDA (Palaiyam).—Mr. Speaker, Sir, the Budget Estimates presented to us, I should say, are not satisfactory. They are most disappointing in my opinion. The surplus that is shown, *viz.*, 48.40 lakhs is only a nominal surplus and it is superficial which cannot be reconciled with the existing circumstances. To a greater extent there is exaggeration in the revenue receipts if we closely scrutinise every item.

Sri T. MARIAPPA.—Inflation in revenue?

Sri G. VENKATAI GOWDA.—We find that Rs. 100 lakhs have been added under revenue receipts. Scrutinising item by item, page 31, it is seen from the revised estimates 58-59 that they have got 5.38 lakhs in excess. I could show to the Minister two or three items which go to substantiate my plea that Rs. 100 lakhs have been provided in excess which if it is taken into account will be a deficit.

It is stated on page 12 that the decrease in land revenue in the revised for 1958-59 is mainly due to suspension and remission of land revenue in certain areas of the State due to the prevalence of scarcity conditions. I would like to know whether we can rule out the possibility of such a thing not occurring again.

Sri T. MARIAPPA.—Not on the same scale.

As regards State Excise, the Government are committed in introducing prohibition in Bidar District and in one taluk in Hassan District. That will take away a substantial portion of the excise revenue. Then they propose to stop the sales of opium and ganja and that also will take away a substantial portion of the excise duties In the revised estimate for 1958-59, excise duties are shown at Rs. 300 lakhs and in the budget they have reduced it only by Rs. 8 lakhs. I say they should have left a margin of at least Rs. 25 because when we are introducing prohibition we will lose our revenue. So I say that the figures of revenue shown are exaggerated.

Likewise, under Stamps and Registration, increase in the revised estimates for 1958-59 is due to increase in the number of registrations. How can we expect that there will be more number of registrations in the coming year?

Likewise, even in Civil Works, they have estimated a surplus of Rs. 322 lakhs over and above what was estimated in the revised budget of 1958-59. This is something with which nobody can reconcile. Therefore, I suggest that this is only a superfluous surplus.

With regard to financial stability of the State, much argument was advanced and my friend Sri Mallaradhya has held the view that the finances of the State are very sound. He almost threw a challenge that nobody could rebut his view. I would point out two or Three instances which go to show that our financial position is not sound. The Finance Minister yesterday laid on the Table of the House supplementary estimates asking for the approval of the House for an additional expenditure of Rs. 380 lakhs. According to the revised estimate for 1958-59 the revenue surplus would be about Rs. 240 lakhs. Over and above that they are now asking for the approval of this House for a sum of Rs. 380 lakhs towards expenditure for the year 1958-59. This revenue surplus of Rs. 240 lakhs gets merge din the revised expenditure estimate for the year 1958-59. If that is admitted, then there will be a deficit of Rs. 140 lakhs for 1958-59. If that is the case. then the closing balance for 1958-59 gets affected. According to the figures furnished to us the closing balance for 1958-59 is Rs. 89.9 lakhs. If the deficit of Rs. 140 lakhs for 1958-59, as

pointed out by me just now, is taken into consideration, then the closing balance will be minus 31 lakhs and odd. When the closing balance of this year is affected, naturally the opening balance of 1959-60 also gets affected. Therefore, I submit that the financial position of the State is not sound. Also, the Finance Minister will agree that we mainly depend on Central assistance. Suppose the Central Government is not going to give the *ad hoc* grant of Rs. 6 crores, will we be able to stand on our own legs? Does it not show that we depend on others? Especially when we are depending on others, that shows that our financial position is not sound. In such a state of affairs, to say that we are financially sound is nothing but illusory. We do not know for how many years the Central Government is going to give this assistance. It is found from the budget speech that our share on account of the tax on railway passengers is about Rs. 48.46 lakhs. This amount is the figure that the Government have shown as surplus. If the Central Government take into consideration this amount while giving the *ad hoc* grant and they merge this in the *ad hoc* grant, then this estimate of assistance becomes a nullity. When we depend on the Central Government for this assistance, we cannot say that we are financially sound.

Also, the Finance Minister expressed his anxiety to find out resources to implement the Five-Year Plan for 1960-61. Last year he said that we would be required to raise about Rs. 30 crores internally for the next 3 years. Now one year has gone and we have to find out the resources for the remaining two years, but he has said nothing in his budget speech about how to find these resources.

Sri T. MARIAPPA.—I have found out nearly Rs. 18 crores resources this time. It is no magic.

Sri G. VENKATAI GOWDA.—In his last year's budget speech, he had said that we would have to find about Rs. 35 crores but making allowance for small savings we would be required to raise about Rs. 20 crores internally. This was what he said last year.

5 P.M.

So far as repaying the public debts is concerned, I venture to point out that a substantial portion of our revenue is taken away every year. We are paying about Rs. 588 lakhs towards interest and about Rs. 467 lakhs towards repayment of some public debts. Thus more than Rs. 10 crores are taken away like this. Thus substantial portion of the revenue is being taken away to pay our debt charges. Unless the Finance Minister is able to find a way out to get the various debts consolidated and their terms and conditions rationalised, I believe that we will not be in a position to withstand these hardships. The fact that the Government of India has accepted all the recommendations of the Finance Commission except this recommendation relating to consolidation and rationalisation of the loans, goes to show that the Government of India might not be willing to accept the representation of the Government of Mysore. It is for this Government to bring pressure upon the Central Government and make them take up the work of consolidation and rationalisation of these loans. Otherwise there is no salvation for us. What I feel is that our Government might have represented to the Central Government that our financial position is stable and that might be the reason why they are not conceding to this request of ours.

[MR. DEPUTY SPEAKER in the Chair]

As the Hon'ble Member Sri Mallaradhya pointed out yesterday, all the loans borrowed for unproductive works should not be made to bear interest and those which were borrowed for productive works should be charged to bear interest only from the date when they begin to yield return. It is the primary duty of the Finance Minister to see to this fundamental thing.

So far as debts transferred to this State are concerned, I have got a word or two to say. Loans worth so many lakhs of rupees have been transferred to the new Mysore State after State reorganisation. Our Government have not been able to assess and verify whether those debts transferred to new Mysore State were actually spent in the

(SRI G. VENKATAI GOWDA)

integrated areas. Suppose for instance loans worth Rs. 20 lakhs have been transferred from Madras State to Mysore State on account of South Kanara, is it not the duty of the Government of Mysore to see whether that amount of Rs. 20 lakhs has been utilised in South Kanara or not? Unless that amount of Rs. 20 lakhs has been actually spent in South Kanara area, what justification is there for us to accept the liability to repay that loan? We should not be blind to facts. Because the Central Government has given an *ad hoc* grant of Rs. 6 crores, that does not mean that we should not say anything. We should place our viewpoint before the Centre and it is for them to concede or not.

Have the Government verified as to what extent the debts that have been transferred to the new State of Mysore were utilised for the benefit of this State? Unless the amount has been utilised for the benefit of this area, what justification is there for our accepting the liability?

SRI T. MARIAPPA.—The debts are calculated on the basis of population.

SRI G. VENKATAI GOWDA.—Assuming there are 20 lakhs of people in South Kanara and Rs. 20 lakhs have been transferred as debt to this State, if this sum had not been spent for the good of this area, what justification is there for our taking up this amount on our head? Before we accept the liability of repayment, should we not ask to what extent the amount has been used in this area?

SRI T. MARIAPPA.—No final calculations have been arrived as yet. In fact periodical meetings are held. Each item is thrashed out and ultimately definitely well-established principles are arrived at and we accept the debt. Not till then.

SRI G. VENKATAI GOWDA.—My submission is that Government has to ascertain as to what portion of the debt transferred has been utilised in the areas of this State and to that extent we should be made liable.

Due to States Reorganisation, this State had to face many difficulties and the payment of interest, so far as transferred loans are concerned, is not justifiable. Government has to fight with the Central Government for exemption at laest to the extent of the interest.

Sir, public borrowing is becoming the order of the day. Indiscriminate borrowing would lead to several complications. Hon'ble Finance Minister is aware that if we resort to borrowing or to float loans, it would result in deficit financing. We are all aware of the dangers inherent in deficit financing.

SRI T. MARIAPPA.—Printing of notes would amount to deficit financing. If we borrow and invest in productive assets, it does not amount to deficit financing.

SRI G. VENKATAI GOWDA.—We are paying 588 lakhs towards interest every year and an equal amount towards repayment. More than one-fifth of the State Revenues is being given away in this form. Would not this have the effect of making our finances unsound? Every taxable source has been exhausted and the Finance Minister cannot think of taxing any more. Formulation of the Third Plan is on the anvil and I do not know how he is going to find resources for the Third Plan. Taking all these aspects into consideration, I submit that the financial position of the State is bad. The Finance Minister himself has tacitly admitted this when he has expressed great concern over the finances in his speech. In page 6 he says:

> "This has placed a severe strain on the State's resources and will continue to cause anxiety in the matter of providing adequate funds for development expenditure."

SRI T. MARIAPPA.—The financial position is one thing finding, resources for continued eppenditure is another.

SRI G. VENKATAI GOWDA.—However, the Finance Minister deserves to be congratulated on one thing: He has kept in view the recommendations of the Finance Commission in not allowing revenue receipts to run into deficit. I appreciate this.

Even in respect of allocation of amounts out of the plan

outlay to the various regions of the State, Government have not done justice. For example, in Coorg District, which is having a population of only 3 lakhs, the allotment is 3 crores and 75 lakhs. The allotment for Madras Karnatak, which has a population of about 17 lakhs, is only 5 crores. Thus allocation of amounts is not consistent with the backwardness or the needs of the areas concerned.

In respect of the other matters, I may be permitted to point out once again the disparity that is existing in the emoluments of State employees. Hon'ble Finance Minister has been pleased to observe... ..

Sri T. MARIAPPA.—Please compare Madras and Mysore. What is the disparity?

Sri G. VENKATAI GOWDA.—It has been Government's declared policy to reduce disparities between the low-paid and high-paid, at least to the ratio of 1:10. To what extent have we moved in this direction? Government is unable to pay Rs. 50 to a peon, yet the highest paid officer gets Rs. 2500. We are not doing social justice to these people. We are not moving towards socialism. Government have repeatedly said that technical personnel are not forthcoming for service. That is because the scales are unattractive. For example, a Veterinary Compounder has to pass matriculation and undergo training for six months and after all this, he gets Rs. 30 plus something, almost the same as a peon's pay. A Second Division clerk who is also a School Final, gets Rs. 50 plus D.A., etc. What is the encouragement given to technical staff? In fact I have written a letter to the Chief Minister about the need o pay the technically trained people more than the second division clerks. I agree that we have to cut the coat according to the cloth. But may I ask if we cannot administer the State without the assis tance of officers on Rs. 2500?

Sri T. MARIAPPA.—Our maximum pay is only Rs. 1500. Those who get more are the I.C.S. and I.A.S. officers who are from the Central services.

Sri G. VENKATAI GOWDA.—They get their pay from the exchequer of this State. They are looking after the affairs of this State. When we are unable to pay the other staff adequately, why should we have the luxury of these officers? Let us do away with this differentiation. Let the ratio be within 1:10. Let us pay Rs. 100 as the lowest salary and Rs. 1000 as the maximum. I have spoken about the pay of veterinary compounders. So also the stockman. Whenever selecting stockmen, preference is given to others rather than compounders. And when you do not give credit to the persons due, I fear that we may not get the fruits of administration. As my friend Sri Veere Gowda was pointing out, unless you pay an attractive sum and take full service in this regard, we cannot say that we could effect economy in the expenditure or secure efficiency in the administration. With these observations, I thank the Chair and conclude.

ಶ್ರೀಮತಿ ಸುಶೀಲ ಬಾಯ್ ಹಿರಾಚಂದ್ ಷಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ, ನಮ್ಮ ಮುಂದೆ ಇಟ್ಟಿರುವ 1959-60ನೆಯ ಇಸವಿಯ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ಹಣಕಾಸಿನ ಮಂತ್ರಿಗಳು ಉಳಿತಾಯ ಬಡ್ಜೆಟ್ಟನ್ನು ಮಾಡಿದ್ದಕ್ಕಾಗಿ ನನ್ನ ವಂದನೆಗಳನ್ನು ಅರ್ಪಿಸಿ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಮನುಷ್ಯನ ಜೀವನಕ್ಕೆ ಆರೋಗ್ಯ, ಆಹಾರ, ಶಿಕ್ಷಣ ಇರಬೇಕು. ಭೂಮಿ ಏನಿದೆ ಅದರ ದೆಶೆಯಿಂದ ಯಾರು ವ್ಯವಸಾಯ ಮಾಡುತ್ತಾರೋ ಅವರಿಗೆ ಹೆಚ್ಚಿನ ಸಹಾಯವನ್ನು ನಮ್ಮ ಸರ್ಕಾರದವರು ಮಾಡಬೇಕು. ಒಂದು ಉದಾಹರಣೆ ಹೇಳುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ವ್ಯವಸಾಯ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ಬಿಜಾಪುರ ಜಿಲ್ಲೆಯೊಳಗೆ ಐದು ವರ್ಷದೊಳಗೆ ಎರಡು ವರ್ಷ ಮಳೆ ಬರುತ್ತದೆ; ಇನ್ನು ಮೂರು ವರ್ಷ ಬರಗಾಲ. ಒಂದು ವರ್ಷ ಸುಗ್ಗಿ ಆದರೆ, ಆಹಾರ ಧಾನ್ಯಗಳನ್ನು ಪೇಟೆಗೆ ತೆಗೆದುಕೊಂಡು ಹೋಗಿ ಮಾರಿ ಅದರಿಂದ ಬಂದ ದುಡ್ಡಿನಲ್ಲಿ ಗೌರ್ನ್ಮೆಂಟಿನ ಲೋನ್ ತೆಗೆದುಕೊಂಡಿದ್ದಲ್ಲಿ, ಇನ್ನೂ ಯಾರು ಯಾರಿಗೆ ಲೋನ್ ಕೊಡಬೇಕಾಗಿರುವಲ್ಲಿ ಅದಕ್ಕೆ ಒಪ್ಪಿಸುತ್ತಾರೆ. ಮೇಲೆ ಇರುವುದು ಹೊಟ್ಟೆ ಬಟ್ಟೆಗೆ ಅಷ್ಟೇ ಆಗುತ್ತದೆ. ಬರಗಾಲ ಬಂದರೆ ಪರಿಸ್ಥಿತಿ ಬಹಳ ಕಷ್ಟವಾಗುತ್ತದೆ. ಸರ್ಕಾರದವರಿಂದ ಲೋನ್ ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ನಮ್ಮ ತಾಲ್ಲೂಕಿನಿಂದ ಕೆಲವರು ಅರ್ಜಿ ಹಾಕಿದ್ದರು. ಇದುವರೆಗೆ ಯಾರಿಗೂ ಹಣ ಸಿಕ್ಕಲಿಲ್ಲ. 500 ರೂಪಾಯಿಗಳು ಮಂಜೂರು ಆದರೆ, ರೈತರ ಕೈಗೆ 400 ರೂಪಾಯಿಗಳು, ಸಿಕ್ಕುತ್ತವೆ. ಹೀಗಾಗಿ ತಗಾಯಿ ಹಣ ಸಿಕುತ್ತಾ ಇಲ್ಲ. ಕೋ-ಆಪರೇಟೀವ್ ಸೊಸೈಯಿಟಿ ಮೂಲಕ ಒಕ್ಕಲಿಗರಿಗೆ ಹಣ ಸಿಕ್ಕುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕು ಎಂದು ವಿನಂತಿಮಾಡುತ್ತೇನೆ. ವ್ಯವಸಾಯಕ್ಕೆ ಸಾಮುಗ್ರಿಗಳನ್ನು ಪಡೆಯುವುದು ಬಹಳ ತೊಂದರೆಯಾಗಿದೆ. ಒಂದು ಜಿಲ್ಲೆಯೊಳಗೆ ಒಂದು ತಾಲ್ಲೂಕಿಗೆ ಹೋದರೆ ಹಳಿ ಕೇಳಿದರೆ ಹಳ ಇಲ್ಲ ಎನ್ನುತ್ತಾರೆ. ಇನೊಂದು ತಾಲ್ಲೂಕಿಗೆ ಹೋಗಿ

(ಶ್ರೀಮತಿ ಸುಶೀಲ ಬಾಯ್ ಹಿರಾಚಂದ್ ಷಾ)

ಕೇಳಿದರೆ ಹರಿ ಇಲ್ಲ ಎಂದು ಹೇಳುತ್ತಾರೆ. ಮತ್ತೊಂದು ತಾಲ್ಲೂಕಿನಲ್ಲಿ ಕೇಳಿದರೆ ಎರಡೂ ಇಲ್ಲ ಎಂದು ಹೇಳುತ್ತಾರೆ. ಹೀಗೆ ತೊಂದರೆಯಾಗಿದೆ. ನಿರಾವರಿ ಸೌಕರ್ಯ ಅಲ್ಲಿ ಇಲ್ಲ. ಕೆರೆ ಕೆನಾಲ್ ಬಹಳ ಕಡಮೆ ಇದೆ. ಬಾವಿ ದೆಶೆಯಿಂದ ಹೆಚ್ಚಿನ ವ್ಯವಸಾಯ ಆಗಬೇಕು. ಆದ್ದರಿಂದ ಬಿಜಾಪುರ ಜಿಲ್ಲೆಗೆ ಹೆಚ್ಚಿಗೆ ಬಾವಿಗಳನ್ನು ತೆಗೆಸಲು ಹಣ ಕೊಡಬೇಕು. ಬೊಂಬಾಯಿ ಸರ್ಕಾರದವರು ಒಂದು ಬಾವಿ ತೆಗೆಸುವುದಾದರೆ 500 ರೂಪಾಯಿಗಳನ್ನು ಮಂಜೂರು ಮಾಡುತ್ತಿದ್ದರು. ಬಾಕಿ ಲೋನ್ ಕೊಡುತ್ತಿದ್ದರು ಈ ಸರ್ಕಾರದವರು 250 ರೂಪಾಯಿಗಳನ್ನು ಕೊಡುತ್ತಾರೆ. ಬರೀ ಬಾವಿಯ ದೆಸೆಯಿಂದ ಜಿಲ್ಲಾಧಿಕಾರಿಗಳು ಎಷ್ಟು ಹಣ ಬೇಕೋ ಅಷ್ಟು ಹಣ ಒದಗಿಸುವುದಿಲ್ಲ. ಹಿಂದುಗಡೆ ಸರ್‌ಕ್ಯುಲರ್ ಹೋಗಬೇಕು. ಆಮೇಲೆ ಹಣ ಒದಗಿಸಿಕೊಳ್ಳಬೇಕು. ಈ ಹಣ ಒದಗಿಸಿದಮೇಲೆ ಅರ್ಜಿ ತಹಸೀಲ್‌ದಾರರ ಹತ್ತಿರ ಒಂದು ತಿಂಗಳು ಇರುತ್ತದೆ. ಮಂಜೂರು ಆದ ಮೇಲೆ ಪ್ರಾಂತ್ ಆಫೀಸಿಗೆ ಹೋಗುತ್ತದೆ. ಪ್ರಾಂತ್ ಆಫೀಸಿನಿಂದ ಫೆಬ್ರವರಿ ಮಾರ್ಚಿಗೆ ಬರುತ್ತದೆ. ಅದರಮೇಲೆ ಹಣ ಲ್ಯಾಪ್ಸ್ ಆಗುತ್ತದೆ. ಇಂಥಪರಿಸ್ಥಿತಿ ಆಗಬಾರದು. ಹಣ ಮಂಜೂರು ಆಗುವುದು ಕಷ್ಟ. ಅಂಥಪರಿಸ್ಥಿತಿಯಲ್ಲಿ ಹಣ ಮಂಜೂರು ಆದಮೇಲೆ ಯಾವ ಹಣ ಮಂಜೂರು ಆಗುತ್ತದೋ ಅದು ಒಂದು ವರ್ಷದೊಳಗೆ ಖರ್ಚಾಗಬೇಕು. ಲೋನ್ ಲ್ಯಾಪ್ಸ್ ಆಗುವುದಕ್ಕೆ ಒಂದು ವರ್ಷದ ಅವಧಿ ಕೊಡಬೇಕು. ಮುಂದೆ ಅರ್ಜಿ ಹಾಕುವ ಪರಿಸ್ಥಿತಿ ಬರಬಾರದು. ಅದನ್ನು ಮಾಡಿದರೆ ಜನರಿಗೆಲ್ಲಾ ಅನುಕೂಲವಾಗುತ್ತದೆ. ಬಾವಿಯಿಂದ ಎಲ್ಲಾ ಆಹಾರ ಧಾನ್ಯಗಳನ್ನೂ ಬೆಳೆಸಬೇಕು. ದುಷ್ಕಾಲದ ದೆಶೆಯಿಂದ ಬಾವಿ ತೆಗೆಯುವ ಲೋನನ್ನು ಒಂದು ವರ್ಷದೊಳಗಾಗಿ ಕೊಡಬೇಕು. ಹಿಂದೆ ಬೊಂಬಾಯಿ ಸರ್ಕಾರದವರು 500 ರೂಪಾಯಿಗಳನ್ನು ಕೊಡುತ್ತಿದ್ದರು. ಅದೇ ರೀತಿ ತಾವೂ ಸಹ 500 ರೂಪಾಯಿಗಳನ್ನು ಸಹಾಯ ಮಾಡಬೇಕು.

ಇನ್ನು ಆರೋಗ್ಯದ ವಿಷಯದಲ್ಲಿ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ರೋಡಿನ ತೊಂದರೆ ಬಹಳ ಇದೆ, ತಾಲ್ಲೂಕಿಗೆ ಔಷಧಿಗೆ ಬರಬೇಕಾದರೆ ಕಷ್ಟ. ಮಳೆಗಾಲದಲ್ಲಿ ಬಂಡಿ ಸಹ ಆ ರೋಡಿನಲ್ಲಿ ಹೋಗುವುದು ಬಹಳ ಕಷ್ಟವಾಗುತ್ತದೆ. ಸೀಕ್ ಬಿದ್ದರೆ ತಾಲ್ಲೂಕಿಗೆ ಬರಬೇಕು. ಅಲ್ಲಿನ ಆಸ್ಪತ್ರೆಗಳಲ್ಲಿ L.M.P. ಮತ್ತು R.M.P. ಡಾಕ್ಟರುಗಳು ಇರುವುದು ನಮ್ಮ ತಾಲ್ಲೂಕಿಗೆ ಮೆಟರ್ನಿಟಿ ಆಸ್ಪತ್ರೆ ಏನೂಕೊಟ್ಟಿದ್ದು ಇಲ್ಲ. ಹಿಂದೆ ಆರೋಗ್ಯ ಮಂತ್ರಿಗಳಾಗಿದ್ದ ಶ್ರೀ ಆರ್. ಎಂ. ಪಾಟೀಲ್‌ರವರು ನಮ್ಮ ತಾಲ್ಲೂಕಿನಲ್ಲಿ ಒಂದು ಮೆಟರ್‌ನಿಟಿ ಆಸ್ಪತ್ರೆಯನ್ನು ಓಪನ್ ಮಾಡಿದರು. ಆಸ್ಪತ್ರೆಯನ್ನು ಓಪನು ಮಾಡಿದಮೇಲೆ ಆರು ತಿಂಗಳು ಮಿಡ್‌ವೈಫ್ ಸಿಕ್ಕಲಿಲ್ಲ. ಡಾಕ್ಟರುಗಳು ಸಿಕ್ಕುವುದು ಬಹಳ ಕಷ್ಟ. ಜಿಲ್ಲಾ ಆಸ್ಪತ್ರೆಗೆ ಬಂದರೆ ಅಲ್ಲಿ ಅಡ್ಮಿಷನ್ ಸಿಕ್ಕುವುದು ಬಹಳ ಕಷ್ಟ. ಅಡ್ಮಿಷನ್ ಸಿಕ್ಕಿದಮೇಲೆ ಔಷಧಿ ಉಪಚಾರ ಮಾಡುವದೆಶೆಯಿಂದ ತೊಂದರೆ ಬಹಳ ಬರುತ್ತದೆ. ಇಂಜಕ್ಷನ್ ಹೇಗೆ ಕೊಡುವುದು ? ನಮ್ಮ ಬಡ್ಜೆಟ್ ಹಣ ಕಡಮೆ ಇರುತ್ತದೆ. ಇದ್ದ ಹಣದೊಳಗೆ ಸೌಕರ್ಯ ಮಾಡಬೇಕು. ಮೂರು ವರ್ಷದ ಹಣ ನೋಡಿ ಬಡ್ಜೆಟ್ ಮಂಜೂರು ಮಾಡುತ್ತಾರೆ. ಅದು ಕಡಮೆ ಇರುತ್ತದೆ. ಮೊದಲಿನಿಂದಲೂ ಕಡಮೆ ಹಣ ಇರುವುದರಿಂದ ಹೆಚ್ಚಿಗೆ ಹಣಕೊಟ್ಟು ಆರೋಗ್ಯ ಇಲಾಖೆಗೆ ಸಹಾಯ ಮಾಡಬೇಕು. ಜನಸಂಖ್ಯೆ ಐದು ಸಾವಿರಕಿಂತ ಹೆಚ್ಚು ಇದ್ದ ಪಕ್ಷದಲ್ಲಿ ಮೆಟರ್‌ನಿಟಿ ಆಸ್ಪತ್ರೆಯನ್ನು ಕೊಡಬೇಕು. ಮಿಡ್‌ವೈಫ್ ಕೊಡಬೇಕು. ಸೋಷಿಯಲ್ ವೆಲ್‌ಫೇರ್ ಕೆಲಸ ಮಾಡುತ್ತೇವೆ ಯಾರಾದರೂ ಕೆಲಸಕ್ಕೆ ಬನ್ನಿ ಎಂದರೆ ಕೆಲಸಕ್ಕೇ ಬರುವುದಿಲ್ಲ. ನಾವು ಕೆಲಸ ಶುರು ಮಾಡಿದಮೇಲೆ ಜನತೆಯ ಮನಸ್ಸು ನಮ್ಮ ಕಡೆಗೆ ಆಕರ್ಷಿತವಾಯಿತು. ಹಳ್ಳಿಗಳಲ್ಲಿ ಮಿಡ್‌ವೈಫ್ ಮತ್ತು ಮೆಟರ್‌ನಿಟಿ ಆಸ್ಪತ್ರೆಗಳಿಂದ ಎಷ್ಟೋ ಉಪಯೋಗ ಇದೆ. ಆದ್ದರಿಂದ ಐದು ಸಾವಿರ ಜನ ಇರುವಕಡೆ ಮೆಟರ್‌ನಿಟಿ ಆಸ್ಪತ್ರೆಯನ್ನು ತೆಗೆಯುವಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು.

ಇನ್ನು ಶಿಕ್ಷಣ ವಿಷಯದಲ್ಲಿ ಹೇಳಬೇಕಾದರೆ, ಬೊಂಬಾಯಿ ಸರ್ಕಾರದೊಳಗೆ ನಾವು 25 ಪರ್ಸೆಂಟ್ ಹಣ ತುಂಬುವುದು ಇತ್ತು. ಮೈಸೂರು ಸರ್ಕಾರದವರು ಈಗ ಹಳ್ಳಿಗರು 40 ಪರ್ಸೆಂಟ್ ಕೊಟ್ಟರೆ ನಾವು ಹಣವನ್ನು ಕೊಡುತ್ತೇವೆ ಎಂದು ಕಂಡೀಷನ್ಸ್ ಹಾಕಿದ್ದಾರೆ. ಆದ್ದರಿಂದ ಅದನ್ನು ದಯವಿಟ್ಟು 25 ಪರ್ಸೆಂಟ್ ಮಾಡುವುದು ಬಹಳ ಚಲೋ ಇದೆ.

ಶ್ರೀ ಬಿ. ಡಿ. ಜತ್ತಿ.—40 ಪರ್ಸೆಂಟ್ ಈ ಸರ್ಕಾರ ಮಾಡಿದ್ದು ಅಲ್ಲ. ಮುಂಬೈ ಸರ್ಕಾರ ಮಾಡಿದ್ದು, ತಮಗೆ ಗೊತ್ತು ಎಂದು ಕಾಣುತ್ತದೆ.

ಶ್ರೀಮತಿ ಸುಶೀಲಾ ಬಾಯ್ ಹೀರಾ ಚಂದ್ ಷಾ.—ಬಿಜಾಪುರ ದುಷ್ಕಾಲ ಮತ್ತು ಬರಗಾಲ ಜಿಲ್ಲೆ. 40 ಪರ್ಸೆಂಟ್ ತುಂಬುವುದು ಕಷ್ಟ. ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಸ್ಕೂಲ್ ಓಪನಿಂಗ್ ಸೆರಮನಿಗೆ ಬಂದಿದ್ದರು. ಆಗ ನಾನು ಅವರಿಗೆ ಹೇಳಿದೆ, "ಕಟ್ಟಡ ಕಟ್ಟುವುದು ಬಹಳ ಕಷ್ಟ. ಎಲ್ಲಾ ಸಾಮಾನುಗಳು ತುಟ್ಟಿ ಇವೆ. ಕಟ್ಟಡದ ಸ್ಥಳ ಗೊತ್ತುಮಾಡಿದಮೇಲೆ 75 ಪರ್ಸೆಂಟ್ ಕೊಟ್ಟಮೇಲೆ ಮೂರು ಸಾವಿರ ರೂಪಾಯಿಗಳು ಆಗಿವೆ. ಕಂಟ್ರಾಕ್ಟ್ ತೆಗೆದುಕೊಂಡವನು 3,000 ರೂಪಾಯಿ ಹಾಕಿದ್ದಾನೆ. ಅವನು ಸವಾಲು ಹಾಕಿದ್ದಾನೆ, ತಾವು ಹಣ ಕೊಡುತ್ತೀರೋ ಪಂಚಾಯತಿಗೆ ಕೊಡಲೋ" ಎಂದು. ಅವರಿಗೆ ಕೊಟ್ಟರೆ ಕಟ್ಟಡ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಹಣ ಹೆಚ್ಚು ಮಾಡಬೇಕು.

ಶ್ರೀ ಸಿದ್ಧಾಂತಿಯವರು ಲೈಟ್ ವಿಷಯ ಹೇಳಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ನೀರು ಮತ್ತು ಲೈಟಿಗೆ ಬಹಳ ತೊಂದರೆ ಇದೆ. ಎಂಟು ದಿವಸಗಳೊಳಗೆ ಏಳು ದಿವಸ ಲೈಟಿನ ತೊಂದರೆ ಇರುತ್ತದೆ. ಏಳು ಗಂಟೆಕಾಲ ಹೋಗಿ ಹತ್ತು ಗಂಟೆಯ ಕಾಲಕ್ಕೆ ಲೈಟ್ ಬರುತ್ತದೆ. ಯಾರಿಗಾದರೂ ಊಟಕ್ಕೆ ಹೇಳಿದರೆ ಒಂದು ಗ್ಯಾಸ್ ಲೈಟ್ ಇಡಬೇಕು. ಮಂದಿ ಊಟಕ್ಕೆ ಬರುವವರು ಇದ್ದಾರೆ ಲೈಟು ಕಟ್ಟುಮಾಡಬೇಡಿ ಎಂದು ಹೇಳಬೇಕಾಗಿದೆ. ಹಬ್ಬದದಿವಸ ಲೈಟ್ ಇರುವುದಿಲ್ಲ. ಪೂಜೆಹೊತ್ತಿಗೆ ಲೈಟು ಹೋದರೆ ಅಶುಭ ಎಂದು ಹೇಳುತ್ತಾರೆ. ಎಣ್ಣೆ ಬತ್ತಿ ಇಟ್ಟುಕೊಂಡು ಲೈಟ್ ಹಾಕುತ್ತಾರೆ. ಪ್ರತಿದಿವಸ ಲೈಟು ಹೋದರೆ ಶುಭ ಎಲ್ಲಿಂದಬಂತು ? ಈ ಪರಿಸ್ಥಿತಿಗೋಸ್ಕರವೇ ನಮ್ಮ ಜಿಲ್ಲೆಯಲ್ಲಿ ಬರಗಾಲ ಇರುವುದು.

ಈ ವರ್ಷ ರೋಡಿನ ಕೆಲಸವನ್ನು ನಮ್ಮ ಜಿಲ್ಲೆಯಲ್ಲಿ ಇನ್ನೂ ಶುರುಮಾಡಿಲ್ಲ. ಆದ್ದರಿಂದ ರೋಡಿನ ಕೆಲಸಕ್ಕೆ ಹೆಚ್ಚಿನ ಲಕ್ಷ್ಯ ಕೊಟ್ಟು ಬರಗಾಲದ ಪ್ರದೇಶದ ಜನಗಳಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಹೇಳಿ ನನಗೆ ನಾಲ್ಕು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri J. P. SARWESH (Serum).—We would like to know whether we are

going to get a chance or not. You are discriminating.

Mr. DEPUTY SPEAKER.—I am following the list.

Sri H. M. CHANNABASAPPA (Minister for Public Works and Electricity).—I rise to a point of order. One of the members said that the Chair was discriminating against members. Is it proper?

Mr. DEPUTY SPEAKER.—The Speaker is not at all discriminating. He is not bound by the list. He calls the member whoever catches his eye.

†ಶ್ರೀ ಎಚ್. ಎ. ಕರಿಲಿಂಗಣ್ಣವರ್ (ಗೋಕಾಕ-1).—ಅಧ್ಯಕ್ಷರೇ, ಅರ್ಥಸಚಿವರ ಉಳಿತಾಯದ ಬಡ್ಜೆಟ್ಟನ್ನು ಸ್ವಾಗತಮಾಡಿ ಒಂದೆರಡು ಮಾತುಗಳನ್ನು ವಿಜ್ಞಾಪನೆ ಮಾಡಲು ಎದ್ದಿದ್ದೇನೆ. ನಮ್ಮ ಗೋಕಾಕ ತಾಲ್ಲೂಕು ಬರಗಾಲದ ತಾಲ್ಲೂಕು. ಬೆಳಗಾವಿ ಜಿಲ್ಲೆಯೊಳಗೆ ಐದು ತಾಲ್ಲೂಕುಗಳು ಬರಗಾಲದ ತಾಲ್ಲೂಕುಗಳು. ಬಿಜಾಪುರ ಜಿಲ್ಲೆ ಸಂಪೂರ್ಣ ಬರಗಾಲದ ಜಿಲ್ಲೆ. ಅದರ ಸಲುವಾಗಿ ಬರಗಾಲದ ನಿವಾರಣೆಯನ್ನು ಮಾಡಬೇಕಾಗಿದೆ. ದೇಶದೊಳಗೆ ಆಹಾರದ ಉತ್ಪಾದನೆ ಕಡಮೆಯಾಗುತ್ತಿದೆ. ಈ ಬರಗಾಲದ ಭಾಗದೊಳಗೆ ನೀರಾವರಿ ಸೌಕರ್ಯಗಳನ್ನು ಮಾಡಿದರೆ ಬರಗಾಲದ ಪರಿಸ್ಥಿತಿ ದೂರವಾಗಿ ದೇಶದೊಳಗೆ ಆಹಾರದ ಕೊರತೆ ಬೀಳುವುದು ದೂರವಾಗುತ್ತದೆಂದು ನಾನು ಸ್ಪಷ್ಟಪಡಿಸುತ್ತೇನೆ. ಇವರ ಪೈಕಿ ಘಟಪ್ರಭ ಯೋಜನೆಯನ್ನು ಬಹಳ ದಿವಸಗಳಿಂದ, ಮುಂಬೈ ಪ್ರಾಂತದೊಳಗೆ ಇದ್ದಾಗ ಸಹಿತ, ಮಾಡಬೇಕೆಂದು ಇದ್ದರು. ಅದು ಇನ್ನೂ ಪೂರ್ತಿಯಾಗಿಲ್ಲ. ಅದರ ಸಲುವಾಗಿ ಈ ಯೋಜನೆಯನ್ನು ಹಡಲಗ ಎಂಬಲ್ಲಿಂದ ಬದಲುಮಾಡಿ ತಿಕ್ಕಳ ಹತ್ತಿರ ಕಟ್ಟಬೇಕೆಂದು ಮಾಡಿರುವುದನ್ನು ತ್ವರಿತವಾಗಿ ಪೂರೈಸಿದರೆ ಬಿಜಾಪುರ ಜಿಲ್ಲೆ ಮತ್ತು ಬೆಳಗಾವಿ ಜಿಲ್ಲೆಯ ಐದು ತಾಲ್ಲೂಕುಗಳಿಗೂ ನೀರಾವರಿಯಾಗಿ ಬರಗಾಲ ಪರಿಸ್ಥಿತಿ ದೂರವಾಗಿ ಆಹಾರಧಾನ್ಯ ಸ್ವಲ್ಪ ಸಮೃದ್ಧಿಯಾಗುತ್ತದೆಂದು ಸ್ಪಷ್ಟಪಡಿಸುತ್ತೇನೆ. ಹಾಗೆಯೇ ಮಲಪ್ರಭಾ ಯೋಜನೆಯಿಂದ ಕೆಲವು ಬರಗಾಲದ ಪ್ರದೇಶಗಳಿಗೆ ನೀರು ಬರುತ್ತದೆ. ಅದರ ಪ್ರಕಾರ ಬರಗಾಲವು ದೂರವಾಗುತ್ತದೆ ಎಂದು ಸ್ಪಷ್ಟಪಡಿಸುತ್ತೇನೆ.

[MR. SPEAKER in the Chair]

ಎರಡನೆಯಮಾತು, ಮಾನ್ಯ ಬೊಮ್ಮೇಗೌಡರು ಮಾತನಾಡುತ್ತ ಘಟಪ್ರಭ ಯೋಜನೆಯಿಂದ ನೀರನ್ನು ಕೊಟ್ಟರೂ ಅಲ್ಲಿಯ ಜನರು ತೆಗೆದುಕೊಳ್ಳುವುದಿಲ್ಲವೆಂದು ಹೇಳಿವರು. ಆ ವಿಷಯ ಅವರಿಗೆ ಗೊತ್ತಿಲ್ಲ. ಈಗ ಘಟಪ್ರಭ ಯೋಜನೆಯ ನೀರನ್ನು ತೆಗೆದುಕೊಳ್ಳುತ್ತಾರೆ. ಅದು ಖಾಯಂ ನೀರಾವರಿ ಯೋಜನೆ ಇದೆಯೇ, ಹಂಗಾಮಿ ಯೋಜನೆ ಇದೆಯೇ ಎನ್ನುವುದರ ಸಲುವಾಗಿ ಜನ ಅದರಕಡೆ ಅಷ್ಟು ಲಕ್ಷ್ಯ ಕೊಟ್ಟಿರಲಿಲ್ಲ. ಖಾಯಂ ನೀರಾವರಿ ಯೋಜನೆಯಾದುದರಿಂದ ಘಟಪ್ರಭ ಮತ್ತು ಮಲಪ್ರಭ ಯೋಜನೆಗಳಿಂದ ಎಲ್ಲರೂ ನೀರಾವರಿಗೆ ನೀರನ್ನು ತೆಗೆದುಕೊಳ್ಳುತ್ತಾರೆ. ಅದರ ಸಲುವಾಗಿ ಮಾನ್ಯ ಮಂತ್ರಿಗಳಿಗೆ ಈ ವಿಷಯವನ್ನೆಲ್ಲ ಸ್ಪಷ್ಟವಾಗಿ ತಿಳಿಸಿದ್ದೇನೆ, ಅವರಿಗೆ ಮನಗಾಣಿಸಿದ್ದೇನೆ. ಅವರೂ ಒಪ್ಪಿಕೊಂಡಿದ್ದಾರೆ. ಅದರ ಸಲುವಾಗಿ ಮಾನ್ಯಮಂತ್ರಿಗಳು ಇದನ್ನು ಕಾರ್ಯಗತ ಮಾಡಿದರೆ ಯೋಗ್ಯವಾಗುತ್ತದೆ. ಆದಕಾರಣ ಅಲ್ಲಿಯ ಜನ ನೀರನ್ನು ತೆಗೆದುಕೊಳ್ಳುವುದಿಲ್ಲವೆನ್ನುವ ಮಾತು ಸರಿಯಲ್ಲವೆಂದು ಸ್ಪಷ್ಟಪಡಿಸುತ್ತೇನೆ.

ಹೋಂಗಾರ್ಡ್‌ಗಳ ಸಲುವಾಗಿ ಒಂದು ಮಾತನ್ನು ಹೇಳುತ್ತೇನೆ. ಮುಂಬೈ ಕರ್ಣಾಟಕದ ನಾಲ್ಕು ಜಿಲ್ಲೆಗಳೊಳಗೆ ಪಾನನಿರೋಧವು ಜಾರಿಗೆ ಬಂದಾಗ ಇವರು ಬಹಳ ಉತ್ತಮ ಕೆಲಸವನ್ನು ಮಾಡಿದರು; ಪೋಲೀಸರು ಮಾಡುವ ಕೆಲಸಕ್ಕಿಂತ ಉತ್ತಮವಾಗಿ ಕೆಲಸಮಾಡಿಕೊಂಡು ಹೋಗುತ್ತಿದ್ದರು. ಅದರ ಸಲುವಾಗಿ ಹೋಂಗಾರ್ಡ್‌ಗಳು ಪ್ರತಿಯೊಂದು ಹಳ್ಳಿಗೂ ಇರತಕ್ಕದೆಂದು ಸ್ಪಷ್ಟಪಡಿಸುತ್ತೇನೆ.

ಮುಂಬೈ ಪ್ರಾಂತ ವಿಭಜನೆಯಾಗುವಾಗ ಸೇಲ್ಸ್ ಟ್ಯಾಕ್ಸ್ ಅನ್ನು ಸಕ್ಕರೆ ಮತ್ತು ಕೆಲವು ಪದಾರ್ಥಗಳ ಮೇಲೆ ಎರಡುಸಲ ವಸೂಲುಮಾಡಲಿಕ್ಕೆ ಹತ್ತಿದ್ದಾರೆ. ಈ ರೀತಿ ಮಾಡುವುದರಿಂದ ಬಹಳ ತೊಂದರೆಯುಂಟಾಗಿದೆ. ಇದಕ್ಕೆ ತಡೆ ಆಜ್ಞೆಯನ್ನು ಮಾಡಬೇಕೆಂದು ಸ್ಪಷ್ಟಪಡಿಸುತ್ತೇನೆ.

ಇನಾಂ ರದ್ದಿಯಾತಿಯ ಸಲುವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಹಳೆಯ ಮೈಸೂರಿನೊಳಗೆ ಇನಾಂ ರದ್ದಿಯಾತಿ ಕಾಯಿದೆಯ ಪ್ರಕಾರ ಕೆಲಸ ಮಾಡುತ್ತಿರುವುದನ್ನು ಹಿಂದಿನ ಅಧಿವೇಶನದಲ್ಲಿ ಸ್ವಾಗತಮಾಡಿದಂಥ ಪರಿಸ್ಥಿತಿ ಇದೆ. ಮುಂಬೈ ಕರ್ಣಾಟಕದ ಭಾಗಗಳಿಗೂ ಸಹ ಈ ಕಾಯಿದೆಯನ್ನು ಅನ್ವಯಿಸಬೇಕೆಂದು ಸ್ಪಷ್ಟಪಡಿಸುತ್ತೇನೆ. ರೈತರಿಗೆ ಅನುಕೂಲವಾಗುವಂಥ ಪರಿಸ್ಥಿತಿ ಮಾಡಬೇಕು. ಮುಂಬೈ ಕರ್ಣಾಟಕದಲ್ಲಿ ಸಹ ಹಳೆಯ ಮೈಸೂರಿನಲ್ಲಿರುವಂಥ ಕಾಯಿದೆಯನ್ನು ಅನ್ವಯಿಸಬೇಕೆಂದು ಹೇಳುತ್ತೇನೆ. ನಮ್ಮ ಮೈಸೂರು ಪ್ರಾಂತದೊಳಗೆ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಕರ್ಯವಿಲ್ಲ, ಶಾಲಾ ಕಟ್ಟಡಗಳಿಲ್ಲ, ದವಾಖಾನೆಗಳಿಲ್ಲ. ಅದಕ್ಕಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯು ಮುಗಿಯುವುದರೊಳಗಾಗಿ ಪ್ರತಿಯೊಂದು ಹಳ್ಳಿಗೂ ಶಾಲಾ ಕಟ್ಟಡ, ಕುಡಿಯುವ ನೀರಿನ ಸೌಕರ್ಯ, ಔಷಧಿ ನೀಡಿಕೆಗೆ ದವಾಖಾನೆ, ಇವನ್ನೆಲ್ಲಮಾಡಿ ಹಳ್ಳಿಯ ಜನರಿಗೆ ಇರುವ ಅನಾನುಕೂಲಗಳನ್ನು ಪರಿಹಾರ ಮಾಡಬೇಕೆಂದು ಹೇಳುತ್ತೇನೆ.

ನನಗೆ ಕೊಟ್ಟಂಥ ವೇಳೆಯ ಸಲುವಾಗಿ ಅಧ್ಯಕ್ಷರಿಗೆ ಅಭಿವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

†ಶ್ರೀ ಕೆ. ಟಿ. ದಾಸಪ್ಪ (ಹಾಸನ).—ಮಾನ್ಯ ಅಧ್ಯಕ್ಷರೇ, ವ್ಯವಸಾಯದ ಇಲಾಖೆಗೆ ಆಯುವ್ಯಯದ ವೆಚ್ಚದಲ್ಲಿ ಸುಮಾರು 2,48,09,000 ರೂಪಾಯಿಗಳನ್ನು ಒದಗಿಸಿದ್ದಾರೆ. ಅದು ಬಹಳ ಕಡಮೆ ಎಂದು ನಾನು ಈ ಸಂದರ್ಭದಲ್ಲಿ ಸೂಚನೆಮಾಡುತ್ತೇನೆ. ಪೋಲೀಸ್ ಇಲಾಖೆಗೆ ಒಂದೂಕಾಲು ಕೋಟಿ ರೂಪಾಯಿಗಳನ್ನು ಕೊಟ್ಟಿರುವಾಗ ಈ ವ್ಯವಸಾಯ ಇಲಾಖೆಗೆ ಕಡಮೆ ಮಾಡಿದ್ದಾರೆ. ಎಲ್ಲ ದೇಶಗಳಲ್ಲಿಯೂ ಹೆಚ್ಚು ಆಹಾರವನ್ನು ಬೆಳೆಯಬೇಕು, ಆಹಾರದ ಉತ್ಪತ್ತಿಯನ್ನು ಜಾಸ್ತಿಮಾಡಬೇಕು, ಎಂದು ಹೇಳುತ್ತಿರುವಾಗ, ಭಾಷಣಗಳನ್ನು ಮಾಡುತ್ತಿರುವಾಗ, ಪ್ರತಿವರ್ಷವೂ ಆಯುವ್ಯಯದ ವೆಚ್ಚದಲ್ಲಿ ವ್ಯವಸಾಯ ಕ್ಕೋಸ್ಕರ ಬಹಳ ಕಡಮೆ ಹಣವನ್ನು ಇಡುತ್ತಿದ್ದಾರೆ.

(ಶ್ರೀ ಕೆ. ಟಿ. ದಾಸಪ್ಪ)

ಇದು ಬಹಳ ಶೋಚನೀಯವಾದ ವಿಚಾರ. ಹಾಸನ ಜಿಲ್ಲೆ ದೊಡ್ಡ ಅಣೆಕಟ್ಟುಗಳಿರುವ ಜಿಲ್ಲೆಯಲ್ಲ. ನಮ್ಮ ಜಿಲ್ಲೆಯಲ್ಲಿ ಕೆರೆಗಳು ಜಾಸ್ತಿ ಇವೆ. ನಾನು ಅನೇಕ ವಿಚಾರಗಳನ್ನು ಮರಾಮತ್ತು ಶಾಖೆಯ ಮಂತ್ರಿಗಳವರ ಹತ್ತಿರ ಹೇಳಿದ್ದೇನೆ. ಹೋದವರ್ಷ ನಮ್ಮ ಜಿಲ್ಲೆಯಲ್ಲಿ ಅನೇಕ ಕೆರೆಗಳು ಒಡೆದು ಹೋಗಿರುತ್ತವೆ. ಇವುಗಳಿಗೆ ಅಂದಾಜನ್ನು ತಯಾರುಮಾಡಿಸಿ ಕಳಿಸಿದ್ದರೂ ಕೂಡ ಅವುಗಳಿಗೆ ಇನ್ನೂ ಮಂಜೂರಾತಿಯಾಗಿಲ್ಲ. ಯಾವ ಕಾರಣದಿಂದ ಈ ರೀತಿ ಮಾಡುತ್ತಿದಾರೆನ್ನುವುದು ನಮಗೆ ತಿಳಿಯುತ್ತಿಲ್ಲ. ಆಫೀಸಿನಲ್ಲಿ ಹೋಗಿ ವಿಚಾರಿಸಿದರೆ ಅಂದಾಜುಗಳು ಮಂಜೂರಾತಿಗೆ ಹೋಗಿವೆ, ಇಂಜಿನಿಯರ ಆಫೀಸಿನಿಂದ ಬಂದಿಲ್ಲವೆನ್ನುವ ರೀತಿಯಲ್ಲಿ ಉತ್ತರವನ್ನು ಕೊಡುತ್ತಾರೆ ಈ ರೀತಿ ಯಾದರೆಎಷ್ಟುವರ್ಷಗಳಲ್ಲಿ ಆ ಕೆರೆಗಳನ್ನೆಲ್ಲ ಪೂರ್ತಿ ಮಾಡುತ್ತಾರೆ ಎನ್ನುವುದು ಗೊತ್ತಾಗುತ್ತಿಲ್ಲ. ಮಾನ್ಯ ಮಂತ್ರಿಗಳು ಹಾಸನಕ್ಕೆ ಬಂದಿದ್ದಾಗ ಈ ವಿಷಯವನ್ನು ತಿಳಿಸಿವೆ. ಅವರು ಬೆಂಗಳೂರಿಗೆ ಹೋದ ಕೂಡಲೇ ಒಂದೆರಡು ಕೆರೆಗಳ ರಿಪೇರಿಗೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದರು. ಇಲ್ಲಿಯವರೆಗೂ ಆ ಕೆರೆಗಳಿಗೆ sanction ಆಗಿಲ್ಲ, work order ಕೊಟ್ಟಿಲ್ಲ. ಮಗಳೂರು ಕೆರೆಗೆ ಎಸ್ಟಿಮೇಟ್ ಆಗಿದೆ. ಈ ಕೆರೆ ಒಡೆದು ಸಾವಿರಾರು ರೂಪಾಯಿಗಳ ಹಾನಿಯಾಗಿದೆ. ಹಾನಿಯಾಗಿರುವುದಕ್ಕೆ ಅವರಿಗೆ ಕಂದಾಯದಲ್ಲಿ ರೆಮಿಷನ್‌ಮಾಡಿದ್ದಾರೆಯೇ? ಇಲ್ಲ. ಆದಷ್ಟು ಜಾಗ್ರತೆಯಾಗಿ ಈ ಕೆರೆಗಳನ್ನು ಸರಿಪಡಿಸಬೇಕು. ಮುದ್ದನಹಳ್ಳಿ ಕೆರೆ, ಹಿತ್ತಲಕಟ್ಟೆ ಕೆರೆ, ತೇಜೂರು ಕೆರೆ, ಹೊಂಗೆರೆ—ಇವುಗಳನ್ನು ಶೀಘ್ರವಾಗಿ ತೆಗೆದುಕೊಳ್ಳಬೇಕು. Minor irrigation ಕಡೆ ಸರ್ಕಾರದವರು ಕೂಡಲೇ ನಿಗಾಕೊಡಬೇಕೆಂದು ಈ ಮೂಲಕ ನಾನು ಸೂಚನೆಯನ್ನು ಕೊಡುತ್ತೇನೆ.

ಹೋದವರ್ಷ ಮಾನ್ಯಮಂತ್ರಿಗಳ ಸಂಗಡ ಹೇಳಿದ್ದರೂ ಕೂಡ ಇವೊತ್ತಿನವರೆಗೂ ಕೆಲಸವಾಗದೆ ಹಾಗೆಯೇ ಇದೆ. ಹೋದವರ್ಷದ ಬೆಳೆಯಿಲ್ಲದೆ ಹೋದರೂಕೂಡ ರೈತರಿಗೆ ಕಂದಾಯ ರೆಮಿಷನ್ ಮಾಡುತ್ತೇವೆಂದು ಹೇಳಿದ್ದರು. ಆದರೆ ಕಂದಾಯವನ್ನು ರೆಮಿಷನ್‌ಮಾಡುವುದಿಲ್ಲವೆನ್ನುವ ರೀತಿಯಲ್ಲಿ ಸರ್ಕಾರದವರು ಒಂದು ಆಜ್ಞೆ ಮಾಡಿದ್ದಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಯಾರು ಹೇಳಿದರು ?

ಶ್ರೀ ಕೆ. ಟಿ. ದಾಸಪ್ಪ.—ಸಂಬಂಧಪಟ್ಟ ಅಧಿಕಾರಿಗಳು ಹೇಳಿದ್ದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಂದಾಯ ರೆಮಿಷನ್‌ಮಾಡುವುದನ್ನು ರೂಲ್ಸ್‌ಪ್ರಕಾರ ಮಾಡುತ್ತಾರೆ.

ಶ್ರೀ ಕೆ. ಟಿ. ದಾಸಪ್ಪ.—ಪ್ರತಿಯೊಂದಕ್ಕೂ ಬೆಂಗಳೂರಿಗೂ ಹಾಸನಕ್ಕೂ ಹೋಗಬೇಕಾಗಿದೆ. ರೈತರಿಗೆ ಒಂದೆರಡುವರ್ಷ ಕೆಲಸ ಹಾಳು. ರೈತರು ದೇಶದ ಬೆನ್ನುಮೂಳೆ ಅವರಿಗೋಸ್ಕರ ವಿಲ್ಲ ಕೆಲಸವನ್ನೂ ಮಾಡಬೇಕಾದ್ದು ನಮ್ಮ ಆದ್ಯ ಕರ್ತವ್ಯವೆಂದು ಸರ್ಕಾರದವರು ಅನೇಕ ಭಾಷಣಗಳನ್ನು ಮಾಡುತ್ತಾರೆ, ಪ್ರತಿಯೊಂದು ಕಡೆಯೂ ಹೇಳುತ್ತಾರೆ. ರೈತರು ಸುಮ್ಮನೆ ಇವತ್ತಿನ ದಿವಸ ಹೊರಲಾರದಷ್ಟು ತೆರಿಗೆಯನ್ನು ಹೊರುತ್ತಿದ್ದಾರೆ, ಬರೀ ಬಂಡವಾಳಸ್ಥರು ಸರಕಾರದಮೇಲೆ ಬೀಳುತ್ತಾರೆ. ಆದುದರಿಂದ ರೈತರಕಡೆಗೆ ಸರಕಾರದವರು ಸರಿಯಾಗಿ ಗಮನಕೊಡುತ್ತಿಲ್ಲ ಎಂದು ಇಲ್ಲಿ ಸರಕಾರದ ಗಮನಕ್ಕೆ ತರುತ್ತಿದ್ದೇನೆ.

Sri H. M. CHANNABASAPPA.—I may bring to the notice of the Hon'ble Member that the progress under minor irrigation in Hassan District is the best.

ಶ್ರೀ ಕೆ. ಟಿ. ದಾಸಪ್ಪ.—ದೇಶದಲ್ಲಿ ಕೆರೆಗಳ ಕಡೆ ಸಾಕಷ್ಟು ಗಮನ ಸರಕಾರ ಕೊಡುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿರುವ ಎಷ್ಟೋ ಕೆರೆಗಳಲ್ಲಿ defects ಇವೆ. ಇಂತಹವುಗಳನ್ನು ದುರಸ್ತಿಮಾಡಬೇಕಾದುದು ಅಗತ್ಯ. ಅನಂತರ ವಿವರಗಳನ್ನು ಬೇಕಾದರೆ ಕೊಡುತ್ತೇನೆ. ಹಾಸನದ ಡಿಸ್ಟ್ರಿಕ್ಟಿನಲ್ಲಿ ಯಾವ ಯಾವದೋ ತಾಲ್ಲೂಕಿನಲ್ಲಿ ದುರಸ್ತನ್ನು ಮಾಡಿದರೆ ಏನು ಪ್ರಯೋಜನವಾಗುತ್ತದೆ. ಈ ದುರಸ್ತಿ ಕೆಲಸಗಳನ್ನು ನೀವು ಮಾಡುವಾಗ ಪ್ರತಿಯೊಂದು ತಾಲ್ಲೂಕನ್ನೂ ಗಮನಕ್ಕೆ ತೆಗೆದುಕೊಂಡು ಸರಿಸಮಾನತೆಯಿಂದ ಮಾಡಬೇಕಾದುದು ಆದ್ಯಕರ್ತವ್ಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಹಾಸನಕ್ಕಾಗಿ ಒಂದು ಅಂಡರ್‌ಡ್ರೇನೇಜು ಸ್ಕೀಮನ್ನುಮಾಡಿ ಹಿಂದೆ ಸರಕಾರದಲ್ಲಿ ಏಳು ಲಕ್ಷ ರೂಪಾಯಿಗಳಷ್ಟು ಹಣ ಸೆಂಟ್ರಲ್ ಗವರ್ನಮೆಂಟ್‌ನಿಂದ ಬಂದಿದ್ದುದನ್ನು ಕೋಲಾರಕ್ಕೆ divert ಮಾಡಿದ್ದಾರೆ. ಯಾರ ಮಾತುಗಳನ್ನು ಕೇಳಿ ಹೀಗೆ ಸೆಂಟ್ರಲ್ ಗವರ್ನಮೆಂಟಿನಿಂದ ಬಂದ ಏಳು ಲಕ್ಷ ದುಡ್ಡನ್ನು ಈ ರೀತಿ ಕೋಲಾರಕ್ಕೆ ಏತಕ್ಕಾಗಿ divert ಮಾಡಬೇಕಾಗಿತ್ತು? ಹಿಂದಿನಿಂದಲೂ ಈ ಹಾಸನದಲ್ಲಿ ಸರಿಯಾದ water facilities ಆಗಿಲ್ಲ, ಅದರಿಂದ ಈ ಹಾಸನಕ್ಕಾಗಿ ಮೊದಲನೆ priority ಕೊಟ್ಟಿದೆ ಎಂದು ಹೇಳುತ್ತಿದ್ದೀರಿ. ಆದರೆ ಈಗ ಬಂದ ಹಣವನ್ನೂ ಕೂಡ ಇಲ್ಲಿಗೆ ಉಪಯೋಗಿಸಲಿಲ್ಲ. ಈಗ underground drainage ಮತ್ತು water facilities ಗಳಿಲ್ಲದಿರುವುದರಿಂದ ಇಲ್ಲಿ ಸೊಳ್ಳೆಯಕಾಟ ಜಾಸ್ತಿಯಾಗಿದೆ ಎಂದು ಮಂತ್ರಿಗಳು ಬಂದಿದ್ದಾಗ ಅನೇಕ ಬಿನ್ನವತ್ತಳೆಗಳ ಮೂಲಕ ಬಿನ್ನವಿಸಿಕೊಂಡಿದ್ದೇನೆ. ಈ ಸಾರಿಯಾದರೂ ಹಾಸನಕ್ಕೆ ಈ underground drainage ಗಾಗಿ ಹಣವನ್ನು ಒದಗಿಸಬೇಕೆಂದು ಈ ಮೂಲಕ ಸರಕಾರವನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಸ್ವಾಮೀ, ನಮ್ಮ ಹಾಸನದ ಪಶುವೈದ್ಯಶಾಲೆಯಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ.

ಮತ್ತೆ ಗ್ರಾಮ ಕೈಗಾರಿಕೆ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಗ್ರಾಮ ಕೈಗಾರಿಕೆಗಳಿಗೋಸ್ಕರ ಇವತ್ತಿನ ದಿವಸ ಹಣ ಹಂಚುವುದಕ್ಕಾಗಿ ಸೊಸೈಟಿಗಳನ್ನು ಮಾಡಿದ್ದಾರೆ. ಆದರೆ ಇದರಲ್ಲಿ ಸಹಾಯ ಬಡವರಿಗೆ ಸಿಕ್ಕುತ್ತಿಲ್ಲ. ಯಾರು ಪ್ರಭಾವಶಾಲಿಗಳು, ದೊಡ್ಡವರಾಗಿ ಯಾರು ಅನುಕೂಲಸ್ಥರಾಗಿರುವರೋ ಅವರಿಗೇ ಈ ಗ್ರಾಮಾಂತರದ ಸೊಸೈಟಿಗಳಿಂದ ಸಹಾಯ ಸಿಕ್ಕುತ್ತದೆ. ಇದರಿಂದಾಗಿ ಬಡವರಿಗೆ ಸರಿಯಾದ ಸಹಾಯ ಸಿಕ್ಕುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ಹಾಸನದಲ್ಲಿರುವ ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಬಡವರಿಗೆ ಯಾವ ವಿಧವಾದ ಸಹಾಯವೂ ದೊರಕುತ್ತಿಲ್ಲ. ಇಲ್ಲಿ ತಿಗಣೆಯ ಕಾಟ ಮತ್ತು ಸೊಳ್ಳೆಗಳ ಕಾಟ ಅಷ್ಟಿಷ್ಟಲ್ಲ. ಹೇಳತೀರದು. ಇಲ್ಲಿನ ಮೆಡಿಕಲ್ ಆಫೀಸರುಗಳಿಗೆ ಎಷ್ಟು

ಸಾರಿ ಹೇಳಿಸಿದರೂ ಅವರಿಂದಲೂ ಉಪಯೋಗವಾಗುತ್ತಿಲ್ಲ. ಅವರನ್ನು ಹೋಗಿ ಕೇಳಿದರೆ ಅವರು "ನಾವೇನುಮಾಡೋಣ ಏನೂ ಸಾಧ್ಯವಿಲ್ಲ" ವೆನ್ನುತ್ತಾರೆ. ಈ ಬಗ್ಗೆ ನಮ್ಮ ಸರಕಾರದವರು ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ಈ ತಿಗಣೆ, ಸೊಳ್ಳೆಗಳನ್ನು ನಾಶಮಾಡಿದರೆ ಇದರಿಂದ ಜನಗಳು ರೋಗಕ್ಕೆ ತುತ್ತಾಗದಂತೆ ಇರಲು ಸಾಧ್ಯವಾಗುತ್ತದೆ. ಇದಕ್ಕೆ ತಕ್ಕ ವ್ಯವಸ್ಥೆಯನ್ನು ಸರಕಾರ ಮಾಡಬೇಕು. ಮೈಸೂರು ದೇಶದಲ್ಲೆಲ್ಲ ಈ ಸೊಳ್ಳೆಯ ಕಾಟ ಬರಬರುತ್ತಾ ಬಹಳ ಜಾಸ್ತಿಯಾಗುತ್ತಿದೆ. ಇದಕ್ಕಾಗಿ D.D.T ಯನ್ನೇನೋ ಹೆಲ್ತ್ ಡಿಪಾರ್ಟ್‌ಮೆಂಟಿನವರು ಕೊಡುತ್ತಾರೆ. ಅದರಂತೆ ಗೋಡೆಗಳಿಗೂ ಹೊಡೆಸುತ್ತಾರೆ. ಹೀಗೆ ಮಾಡಿದರೂ ಏನೂ ಪ್ರಯೋಜನವಾಗುತ್ತಿಲ್ಲ. ಈಗ ಸರಕಾರದಿಂದ ಕೊಡುತ್ತಿರುವ D.D.T. ಯಿಂದ ದೇಶದಲ್ಲಿರತಕ್ಕವರಿಗೆ ಏನಾದರೂ ಉಪಯೋಗವಾಗಿದೆಯೋ ಎನ್ನುವುದನ್ನು ಯೋಚನೆಮಾಡಬೇಕು. ಆದಕಾರಣ, ಸರಕಾರ ಈ ಹೆಲ್ತ್ ಇಲಾಖೆಗಾಗಿ ಖರ್ಚುಮಾಡುತ್ತಿರುವ ಹಣವನ್ನು ಸರಿಯಾದ ವಿಧದಲ್ಲಿ ಖರ್ಚುಮಾಡುತ್ತಿಲ್ಲ. ಇದನ್ನು ಸರಿಪಡಿಸಬೇಕು. ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಈ ಸೊಳ್ಳೆಗಳ ಮತ್ತು ತಿಗಣೆಗಳ ಕಾಟವನ್ನು ಹೇಳತೀರದು. ಪ್ರತಿಯೊಬ್ಬ ರೋಗಿಯ ಹಿತದೃಷ್ಟಿಯಿಂದಲೂ ಸೊಳ್ಳೆಪರದೆಯನ್ನು ಕೊಡಬಹುದು. ಆದರೆ ತಿಗಣೆಗಳಿಗೆ ಯಾವುದಾದರೂ D.D.T. ಸಂಶೋಧನೆ ಮಾಡಿದಹಾಗೆ ಇದರಮೇಲೂ ಯಾವುದಾದರೂ ಪ್ರಯೋಗವನ್ನು ಮಾಡಲು ಯೋಚಿಸಬೇಕು.

ಇವೊತ್ತಿನದಿವಸ ಮೈಸೂರು ದೇಶದಲ್ಲಿ ಹಾಸನ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಉತ್ತಮವಾದ ಆಲೂಗಡ್ಡೆಯನ್ನು ಬೆಳೆಯುತ್ತಿದ್ದಾರೆ. ಈಚೆಗೆ ಇದಕ್ಕೆ ಮೂರು-ನಾಲ್ಕು ವರ್ಷಗಳಿಂದ ಒಂದು ತರಹದ ರೋಗಬಂದು ಒಂದಡಿಯಷ್ಟು ಸಸಿಗಳವರೆಗೆ ಬೆಳೆದು ಕೊನೆಗೆ ಸತ್ತುಹೋಗುತ್ತವೆ. ಇದರಿಂದ ರೈತರಿಗೆ ಲಕ್ಷಾಂತರ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಹಿಂದಿನ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ರುದ್ರಪ್ಪನವರು "ಹಾಸನದಲ್ಲಿ ಒಂದು Research Centreನ್ನು ತೆಗೆಯುತ್ತೇವೆ" ಎಂದು ಹೇಳಿದರು. ಆದರೆ ಆ ಹಿಂದಿನ ಮಂತ್ರಿಮಂಡಲ ಹೋಯಿತು. ಹೊಸ ಮಂತ್ರಿಮಂಡಲ ಬಂದಿತು. ಈ ಮಂತ್ರಿಮಂಡಲ ಇಲ್ಲಿಯವರೆಗ ಏನಾದರೂ ಈ ಕಡೆಗೆ ಗಮನ ಕೊಟ್ಟರೆ ತಾನೇ ಏನಾದರೂ ಅನುಕೂಲವಾಗುತ್ತಿತ್ತು? ಅದರಿಂದಾಗಿ ರೈತರಿಗೆ ತೊಂದರೆಯಾಗುತ್ತಿದೆ. ಇದಕ್ಕೆ ಯಾವ ಕಾರ್ಯಕ್ರಮವನ್ನೂ ಇನ್ನೂ ಕೈಗೊಂಡಿಲ್ಲ ಎಂದು ನಾನು ಇಲ್ಲಿ ಕಡ್ಡಾಯವಾಗಿ ಹೇಳುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು ಸುಮಾರು 11-12 ವರ್ಷಗಳಾಗುತ್ತ ಬಂದವು. ಆದರೆ ನಮ್ಮ ದಕ್ಷಿಣ ಪ್ರದೇಶಗಳಲ್ಲಿ ಒಂದು ಅಡಿಯಷ್ಟಾದರೂ ರೈಲು ಮಾರ್ಗವನ್ನು ಹಾಕಲು ಸರಕಾರದ ಕೈಲಿ ಆಗುತ್ತಿಲ್ಲ. ಇದರಿಂದ ಆಡಳಿತದ ದಕ್ಷತೆ ಕಡಮೆ ಎನ್ನುವುದು ಮತ್ತು ದೇಶದ ಅಭಿವೃದ್ಧಿ ಕಡೆ ಸರಿಯಾದ ಗಮನವನ್ನು ಕೊಡುತ್ತಿಲ್ಲ ಎನ್ನುವುದೂ ಗೋಚರವಾಗುತ್ತದೆ. ಹಾಸನ—ಮಂಗಳೂರು ರೈಲುಮಾರ್ಗವನ್ನು ಹಾಕಿಸಬೇಕೆಂದು ಎಷ್ಟೋ ವರ್ಷಗಳಿಂದಲೂ ಕೇಳುತ್ತಿದ್ದುದನ್ನು ಮಾಡಿದ್ದಿದ್ದರೆ ಇಷ್ಟುವರ್ಷಗಳಲ್ಲಿ ಅದರ ಪ್ರಯೋಜನ ದೇಶಕ್ಕೆ ದೊರೆಯುತ್ತಿತ್ತು. ತಾವು ಇದನ್ನು ಕಾರ್ಯಗತಮಾಡುವುದಕ್ಕೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ, ಹಳ್ಳಿಗಾಡಿನಲ್ಲಿ ರಸ್ತೆಗಳ ವಿಷಯವನ್ನು ಇವತ್ತಿನ ದಿವಸ ನೋಡಿದರೆ, ಪ್ರತಿಯೊಂದು ಕಡೆಯೂ ಊರಿಂದೂರಿಗೆ ಹೋಗುವ ರಸ್ತೆಗಳೇ ಇಲ್ಲ. ಎಲೆಕ್ಷನ್ನಿನ ಕಾಲದಲ್ಲಿ ಆಡಳಿತ ಪಕ್ಷದವರು ಹಳ್ಳಿಗಳಿಗೆ ಬಂದು ಅಲ್ಲಿಯ ಜನಕ್ಕೆ "ನಿಮಗೆ ಬೇಕಾದಷ್ಟು ರಸ್ತೆ ಇತ್ಯಾದಿಗಳನ್ನು ಮಾಡಿಸಿಕೊಡುತ್ತೇವೆ, ಚಿನ್ನದ ಕಳಸವನ್ನು ಹಾಕಿಸಿಕೊಡುತ್ತೇವೆ" ಎಂದು ಹೇಳಿ, ಅಧಿಕಾರಕ್ಕೆ ಬಂದಮೇಲೆ ಅವನ್ನೆಲ್ಲ ಮರೆತುಬಿಡುತ್ತಾರೆ. ಆಡಳಿತಾಧಿಕಾರದಲ್ಲಿರುವವರು ಪಟ್ಟಣಗಳ ತೊಂದರೆ ಏನು, ಹಳ್ಳಿಯಲ್ಲಿರುವ ಸ್ಥಿತಿಯೇನು? ಎನ್ನುವುದನ್ನೆಲ್ಲ ಯೋಚಿಸಿ ಹಳ್ಳಿಗಳನ್ನು ಪಟ್ಟಣಗಳ ಮಟ್ಟಕ್ಕೆ ತರಬೇಕಾದುದು ಅಗತ್ಯ. ಆದರೆ ಈಗ ಏನಾಗಿದೆ ಎಂದರೆ, ಪಟ್ಟಣಗಳ ಕಡೆಗೇ ಹೆಚ್ಚು ಗಮನವನ್ನು ಕೊಟ್ಟುಬಿಡುತ್ತಿದ್ದಾರೆ. ಇವತ್ತಿನ ದಿವಸ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಟಾರು ರೋಡು, ಸಿಮೆಂಟಿನ ರೋಡುಗಳನ್ನು ಮಾಡಿಸುತ್ತಿದ್ದಾರೆ. ಆದರೆ ಹಳ್ಳಿಗಾಡಿನಲ್ಲಿ ಒಂದು ಸಾಮಾನ್ಯವಾದ ಗಾಡಿ ಹೋಗುವುದಕ್ಕೆ ರೋಡಿಲ್ಲದೇ ಹೋಗಿದೆ. ಇದರಿಂದಾಗಿ ಹಳ್ಳಿಗಳ ಕಡೆಗಳಲ್ಲಿ ಎತ್ತಿನ ಗಾಡಿಗಳು ಹೋಗುವುದಕ್ಕೂ ಬಹಳ ಕಷ್ಟವಾಗಿದೆ. ಇಂತಹ ಹಳ್ಳಿಗಳನ್ನೆಲ್ಲ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಿದ್ದ ಸರಕಾರ ಇವತ್ತಿನ ದಿನ ಬರಿಬಾಯಲ್ಲಿಯೇ ಹೇಳುತ್ತಿದ್ದಾರೆಯೇ ವಿನಾ ಯಾವ ಹಳ್ಳಿಗೆ ಯಾವ ರೋಡನ್ನು ಮಾಡಿಸಿದ್ದಾರೆ ಎನ್ನುವುದನ್ನು ಬೆರಳುಮಾಡಿಸಿ ಹೇಳಲಿ. ಬರೀ ಬೆಂಗಳೂರಿನಿಂದ ಹಾಸನಕ್ಕೆ ರೋಡನ್ನು ಮಾಡಿಸಿ ನಮ್ಮ ಪ್ರಾಂತಕ್ಕೆ ದೊಡ್ಡದೊಡ್ಡ ಮನುಷ್ಯರು ಬರಲನುಕೂಲವಾಗಲಿ ಎಂದು ಮಾಡಿದ್ದಾರೆಯೇ ಹೊರತು ಬಡ ರೈತರಿಗೆ ಒಂದು ಎತ್ತಿನಗಾಡಿ ಹೋಗುವಂತಹ ರಸ್ತೆಯನ್ನು ಏನಾದರೂ ಮಾಡಿಸುವುದಕ್ಕೆ ಎಲ್ಲಿಯಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ? ಸುಮ್ಮನೆ ಮಂಗಳೂರಿನಿಂದ ಮೈಸೂರು, ಹಾಸನದಿಂದ ಬೆಂಗಳೂರು ಈ ರೀತಿಯಾಗಿ ದೊಡ್ಡ ದೊಡ್ಡ ರೋಡುಗಳನ್ನು ಮಾಡಿದರೆ ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಬಡ ರೈತರಿಗಾಗಿ ಯಾವ ಕಾರ್ಯಕ್ರಮವನ್ನಾದರೂ ಹಾಕಿದ್ದಾರೆಯೇ ಎನ್ನುವುದನ್ನು ನೋಡಿದರೆ ಅಂತಹ ಹಳ್ಳಿಯವರಿಗೆ ಅನುಕೂಲವಾಗುವಂತಹಯಾವ ರೋಡನ್ನೂ ಸಹಾ ಮಾಡಿಲ್ಲ ಎಂದು ಹೇಳಬೇಕಾಗಿದೆ.

ಶ್ರೀ ಟಿ. ಮರಿಯಪ್ಪ.—ಹಳೆಯ ಮೈಸೂರಿನಲ್ಲಿ I.V.C. Road ಎಂದು ಎರಡುಸಾವಿರ ಮೈಲಿಗಳಷ್ಟು ಮಾಡಿಯಾಗಿದೆ.

ಶ್ರೀ ಕೆ. ಟಿ. ದಾಸಪ್ಪ.—ನಾವು ಕಾಣುವ ಹಾಗೆ ನಮ್ಮ ಡಿಸ್ಟ್ರಿಕ್ಟಿನ ಹಳ್ಳಿಗಾಡಿನಲ್ಲಿ ಎಲ್ಲಿಯೂ ಮಾಡಿಲ್ಲ. ನಾನು ಹಳ್ಳಿಯಲ್ಲೇ ಹುಟ್ಟಿದವನಾಗಿ, ಹಳ್ಳಿಯಲ್ಲೇ ತಿರುಗಾಡುವವನು. ತಾವೆಲ್ಲಿ ಮಾಡಿದ್ದೀರಿ? ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಹೇಳಿ ಪ್ರಯೋಜನವಿಲ್ಲ. ನಾಳೆ ಉತ್ತರ ಕೊಡುವಾಗ ಒಂದೊಂದಾಗಿ ಹೇಳಿ ತಮ್ಮ ಗಮನವನ್ನು ಸೆಳೆಯುತ್ತೇವೆ.

ಶ್ರೀ ಟಿ. ಮರಿಯಪ್ಪ.—ಜಾವಗಲ್—ಹಾರ್ನಹಳ್ಳಿ ರಸ್ತೆ ಮಾಡಿಸಿದ್ದೇವೆ. ಮೇಲಾಗಿ ಅದು remote interior road.

ಶ್ರೀ ಕೆ. ಟಿ. ದಾಸಪ್ಪ.—ನಾನು ಹಾಸನ ಡಿಸ್ಟ್ರಿಕ್ಟಿನಲ್ಲಿ ಅನೇಕ ಕಡೆ ತಿರುಗಾಡಿದ್ದೇನೆ. ಮಲೆನಾಡಿನಲ್ಲಂತೂ ಮೂರು ತಿಂಗಳಕಾಲ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ನಡೆದುಕೊಂಡು ಹೋಗುವುದಕ್ಕೆ ಕೂಡ ಆಗುವುದಿಲ್ಲ. ಅಂಥ ಹಳ್ಳಿಗಳಿಗೇನು ತಾವು

(ಶ್ರೀ ಕೆ. ಟಿ. ದಾಸಪ್ಪ)

ಕಾರ್ಯಕ್ರಮ ಹಾಕಿದ್ದೀರಿ ? ಮುಂದಾದರೂ ಈ ಬಗ್ಗೆ ತಕ್ಕ ಏರ್ಪಾಡುಮಾಡಿ ಹಳ್ಳಿಯ ಜನರಿಗೆ ಉಪಕಾರ ಮಾಡಬೇಕೆಂದು ಹೇಳುತ್ತೇನೆ. ಈ ಹೊತ್ತಿನ ದಿವಸ ತಾವೇನಿದ್ದರೂ ನಾನಾ ಸಪ್ತಾಹಗಳನ್ನು ನಡೆಸುತ್ತಿದ್ದೀರಿ ಅಷ್ಟೆ. ಖಾದಿ ಸಪ್ತಾಹ, ಕೆರೆ ಸಪ್ತಾಹ ಈ ರೀತಿ ಸಪ್ತಾಹಗಳನ್ನು ನಡೆಸಿದ್ದರಿಂದಲೇ ಕೆಲಸಮಾಡಿದಂತಾಗುವುದಿಲ್ಲ. . . .

Sri H. M. CHANNABASAPPA.—Yesterday, I gave facts and figures that out of Rs. 186 lakhs provision, we had spent Rs. 103 lakhs on minor irrigation schemes upto December. Do you think it is all child's play?

ಶ್ರೀ ಜಿ. ವೆಂಕಟೇಗೌಡ.—ಎಂಟು ಎಸ್ಟಿಮೇಟುಗಳನ್ನು ಮಾಡಿ ಕಳುಹಿಸಿದ್ದಾರೆ. ಇದುವರೆಗೆ ಒಂದೂ ಕಾರ್ಯತಃ ಆಗಿಲ್ಲ.

Sri H. M. CHANNABASAPPA.—Immediately an estimate comes it cannot be sanctioned unless it is scrutinised.

ಶ್ರೀ ಕೆ. ಟಿ. ದಾಸಪ್ಪ.—ಹೋದ ವರ್ಷ ನಮ್ಮ ಡಿಸ್ಟ್ರಿಕ್ಟಿನಲ್ಲಿ ಒಂದು ಕೆರೆ ಒಡೆದು ಹೋಯಿತು. ಇವತ್ತಿನವರೆಗೂ ಅದನ್ನು ಸರಿಪಡಿಸಿಲ್ಲ. ಹೀಗಾದರೆ ರೈತ ಬದುಕುವುದು ಹೇಗೆ ? ಸರ್ಕಾರಕ್ಕೆ ಹಣದ ಕೊರತೆಯಿಲ್ಲವೆಂದು ಹೇಳುತ್ತಿದ್ದೀರಿ. ಆದರೂ ಕೆಲಸಮಾಡಬೇಕು ಅಲ್ಲವೇ ? ಎಂಜಿನಿಯರನ್ನು ಕೇಳಿದರೆ, ಚೀಫ್ ಎಂಜಿನಿಯರಿಗೆ ಕಳುಹಿಸಿಕೊಟ್ಟಿದ್ದೇವೆ, ಟೆಕ್ನಿಕಲ್ ಅಭಿಪ್ರಾಯ ಪಡೆಯಲು ಕಳುಹಿಸಿಕೊಟ್ಟಿದ್ದೇವೆ ಎಂದೆಲ್ಲಾ ಹೇಳುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳುವುದೇನು, ಸುಮ್ಮನೆ ಕೇಳದೆ ಮಾಡದೆ ಕೆಲಸ ಮಾಡಿಬಿಡಬೇಕೆಂದೇನು ?

ಶ್ರೀ ಕೆ. ಟಿ. ದಾಸಪ್ಪ.—ಕಾನೂನು ಪ್ರಕಾರ ಮಾಡಿ ಎಂದೇ ನಾನು ಕೇಳಿಕೊಳ್ಳುವುದು. ಆದರೂ ಬೇಗ ಮಾಡಬೇಕು ಎಂದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದ್ದನ್ನು ಮಾಡಿ ಎಂದು ಬೇಕಾದರೆ ಹೇಳಿ. ಮಾಡಿದ್ದನ್ನು ಇಲ್ಲವೆಂದರೆ ಹೇಗೆ ?

ಶ್ರೀ ಕೆ. ಟಿ. ದಾಸಪ್ಪ.—ಮೈಸೂರು ದೇಶದಲ್ಲಿ 10-11 ಸಾವಿರ ಕೆರೆಗಳು ನಾದುರಸ್ತಿನಲ್ಲಿವೆ. ನಾವಿದನ್ನು ಹೇಳುತ್ತಲೇ ಇರುತ್ತೇವೆ; ತಾವು ಮರೆಯುತ್ತಲೇ ಇರುತ್ತೀರಿ. ನಾವು ಮತ್ತೆ ಜ್ಞಾಪಿಸಿದ್ದಕ್ಕೆ ನೀವು ಕೋಪಮಾಡಿಕೊಂಡರೇನು ಪ್ರಯೋಜನ? ಅಧಿಕಾರದಲ್ಲಿರುವವರು ಯಾವಾಗಲೂ ಶಾಂತರೀತಿಯಿಂದಿರಬೇಕು. ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಸಣ್ಣಗೌಡ (ಲಿಂಗಸುಗೂರ್).—ಮಾನ್ಯ ಅಧ್ಯಕ್ಷರೇ, 1959-60ನೆಯ ಸಾಲಿನ ಆಯವ್ಯಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಿರತಕ್ಕಂಥಾದ್ದನ್ನು ಸ್ವಾಗತಿಸುತ್ತಾ, ಅದಕ್ಕಾಗಿ ನಮ್ಮ ಅರ್ಥ ಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ.

ಇಂದು, ನಮ್ಮ ಕನ್ನಡನಾಡು, ಐದು ಭಾಗಗಳಿಂದ ಬಂದ ಪ್ರದೇಶಗಳಿಂದ ಕೂಡಿದ್ದಾಗಿ ಅದನ್ನೀಗ ಸರಿಯಾಗಿ ಒಂದುಗೂಡಿಸಿ ಸುಂದರವಾಗಿ ಕಟ್ಟಬೇಕೆಂದು ಅಭಿಲಾಷೆಯುಳ್ಳವರಾಗಿದ್ದೇವೆ. ನಮ್ಮ ದೇಶದಲ್ಲಿ 28,808 ಹಳ್ಳಿಗಳಿವೆ. ಎಲ್ಲಿಯತನಕ ಈ ಎಲ್ಲ ಹಳ್ಳಿಗಳ ಅಭಿವೃದ್ಧಿಯಾಗುವುದಿಲ್ಲವೋ ಅಲ್ಲಿಯವರೆಗೂ ನಮ್ಮ ರಾಜ್ಯವನ್ನು ಸುಂದರವಾಗಿ ಕಟ್ಟಿದೆವೆಂದು ಹೇಳುವುದಕ್ಕಾಗುವುದಿಲ್ಲ. ಹೀಗಿರುವಲ್ಲಿ, ಇಂದು ನಮ್ಮ ಸರ್ಕಾರ ಹೆಚ್ಚಿನ ದುಡ್ಡನ್ನು ಪಟ್ಟಣದ ಮೇಲೆ ಖರ್ಚುಮಾಡುತ್ತಿದ್ದಾರೆ. ಹಿಂದೆ ಹೈದರಾಬಾದ್ ರಾಜ್ಯದಲ್ಲಿ ನಾವಿದ್ದಾಗಲೂ, ಅಲ್ಲಿಯೂ ದೊಡ್ಡ ದೊಡ್ಡ ಪಟ್ಟಣಗಳಿಗೆ ಹಣವನ್ನು ಉಪಯೋಗಿಸುತ್ತಾ, ಹಳ್ಳಿಗಳನ್ನೆಲ್ಲಾ ನಿರ್ಲಕ್ಷಿಸುತ್ತ ಬಂದಿದ್ದಾರೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಳ್ಳಿಯ ಅಭಿವೃದ್ಧಿಯ ಕಡೆಗೆ ಗಮನ ಕೊಡಬೇಕೆಂದರೆ, ಮೊದಲನೆಯದಾಗಿ, ಅಲ್ಲಿನ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ, ವಾಸಕ್ಕೆ ಯೋಗ್ಯವಾದ ಮನೆ, ಉಚಿತ ವಿದ್ಯಾಭ್ಯಾಸದ ಏರ್ಪಾಡು, ಆರೋಗ್ಯದ ಬೆಳೆವಣಿಗೆ—ಇವುಗಳ ಕಡೆಗೆ ಹೆಚ್ಚು ಗಮನ ಕೊಡಬೇಕು. ಇವುಗಳ ಏರ್ಪಾಡೇ ಹಳ್ಳಿಗಳ ಅಭಿವೃದ್ಧಿ ಸಾಧನೆಗೆ ಆವಶ್ಯಕ ; ಅವುಗಳಾದ ಹೊರತು ಹಳ್ಳಿಗಳ ಅಭಿವೃದ್ಧಿಯಾದಂತಿಲ್ಲ. ಹಳ್ಳಿಯ ಜನರ ಜೀವನಕ್ಕೆ ಆಧಾರವಾದ ಭೂಮಿಯ ಸಂಪತ್ತು ಕೂಡ ಇಂದು ಕಡಮೆಯಾಗಿದೆ. ಫಲವತ್ತು ಕಡಮೆಯಾಗಿದೆ. ಇವುಗಳನ್ನು ಉತ್ತಮ ಸ್ಥಿತಿಗೆ ತರಬೇಕಾದರೆ ಸರ್ಕಾರದಿಂದ ಯಾವ ಸೌಕರ್ಯಗಳು ಒದಗಬೇಕೋ ಅವು ಒದಗಿಲ್ಲ. ರೈತರ ಬಡತನ ಹೆಚ್ಚುತ್ತಿದೆ. ಜೊತೆಗೆ, ಸಾಲದ ಹೊರೆ ಆತನ ಮೇಲೆ ಏರುತ್ತಿದೆ. ನಮ್ಮ ಹೈದರಾಬಾದ್ ಭಾಗದಲ್ಲಿ ಹಿಂದಿನ ಸರ್ಕಾರ ಕೊಟ್ಟಿದ್ದ ಕೆಲವು ಹಳೆಯ ಸಾಲದ ಬಾಕಿಗಳಿವೆ. ಆ ಸಾಲಗಳು ಹಳೆಯವಾಗಿ ಬಡ್ಡಿ ಒಂದಕ್ಕೆ ಎರಡರಷ್ಟಾಗಿ ಬೆಳೆದಿದೆ. ಇಂದು ಅವುಗಳನ್ನು ತೀರಿಸುವುದೆಂದರೆ ರೈತ ಉಳಿಯಲಾರ. ಈ ವಿಷಯವನ್ನು ಮಂತ್ರಿಗಳಿಗೆ ನಾವು ಅನೇಕ ಸಾರಿ ಹೇಳಿದ್ದೇವೆ. ಇತ್ತ ಸರ್ಕಾರದ ಸಾಲ ಅತ್ತ ಕೋ-ಆಪರೇಟಿವ್ ಸೊಸೈಟಿಗಳ ಸಾಲ ಮತ್ತು ಪ್ರೈವೇಟ್ ಸಾಲ ಎಲ್ಲಾ ಸೇರಿಕೊಂಡು ಆ ರೈತರಿಗೆ "ಸಾಲ ಜೀವಕ್ಕೆ ಶೂಲ" ಎಂಬಂತಾಗಿದೆ. ಆದ್ದರಿಂದ ಸರ್ಕಾರದವರು ದಯವಿಟ್ಟು ರೈತರು ಕೊಡಬೇಕಾಗಿರುವ ಹಳೆಯ ಸಾಲವನ್ನು ತೆಗೆದರೆ ಅವರನ್ನು ಉಳಿಸಿದಂತಾಗುತ್ತದೆ. ಹೈದರಾಬಾದ್ ರಾಜ್ಯದಲ್ಲಿದ್ದಾಗಲೇ ಇದನ್ನು ಕೇಳಿಕೊಂಡಿದ್ದೆವು. ಅವರು ಉದಾರದೃಷ್ಟಿಯಿಂದ ರೈತರು ಕೊಡಬೇಕಾಗಿದ್ದ (Revenue arrears) ಹಫ್ತಿಯ ಬಾಕಿಯನ್ನೇನೋ ತೆಗೆದರು. ತಕಾವಿ ಸಾಲದ ಬಾಕಿಯನ್ನೂ ಯೋಚನೆ ಮಾಡುವಷ್ಟರಲ್ಲಿ ಆ ಸರ್ಕಾರ ಹೋಗಿ ಇಂಟಿಗ್ರೇಷನ್ ಆಯಿತು. ಇಂದು ನಮ್ಮ ಸರ್ಕಾರ ಈ ಸಾಲಗಳಿಂದ ರೈತರನ್ನು ವಿಮೋಚನೆಗೊಳಿಸುವ ಮನಸ್ಸು ಮಾಡಬೇಕಾಗಿದೆ. ಎಷ್ಟೋ ಸಂದರ್ಭಗಳಲ್ಲಿ ವಾಸ್ತವವಾಗಿ ರೈತರಿಗೆ ಈ ತಕಾವಿ ಸಾಲಗಳೇ ಅವರ ಕೈಸೇರಿಲ್ಲ. ಒಬ್ಬರ ಹೆಸರಿನ ಮೇಲೆ ಇನ್ನೊಬ್ಬರು ಹೆಬ್ಬೆಟ್ಟಿನ ರುಜು ಹಾಕಿ ಸಾಲ ತೆಗೆದುಕೊಂಡಿರುವ ಸಂದರ್ಭಗಳೂ ಉಂಟು. ಹೀಗಾಗಿ ಸಾಲ ತೆಗೆದುಕೊಂಡಿಲ್ಲದಿರುವವರು ಈಗ ಸಾಲ ಹೊತ್ತುಕೊಂಡವರಾಗಿದ್ದಾರೆ. ಇದನ್ನೆಲ್ಲಾ ದೃಷ್ಟಿಯಿಟ್ಟುಕೊಂಡು ಆ ರೈತರನ್ನು ಉದ್ಧಾರ ಮಾಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, ನಮ್ಮಲ್ಲಿ ಬಾವಿಗಳ ಯೋಜನೆಯೆಂದು ಕೈಕೊಂಡು ಅನೇಕ ಬಾವಿಗಳನ್ನು ಮಾಡಿಸಿ

ದ್ದರು. ಆದರೆ, ಇಂದು, ಆ ಬಾವಿಗಳಲ್ಲಿ ಅನೇಕವುಗಳಿಗೆ ಕಟ್ಟೆಯೆಲ್ಲಾ ಬಿದ್ದು ಆ ಬಾವಿಗಳು ಮುಚ್ಚಿ ಹೋಗಿವೆ. ಅವುಗಳನ್ನೀಗ ದುರಸ್ತು ಮಾಡಬೇಕಾಗಿದೆ. ಸರ್ಕಾರದವರು ಈಗ ಇದನ್ನು ಗಮನಿಸಿ ಇಂಥ ಕುಡಿಯುವ ನೀರಿನ ಬಾವಿಗಳು ಎಷ್ಟಿವೆ, ಅವುಗಳನ್ನೆಲ್ಲವನ್ನೂ ದುರಸ್ತು ಮಾಡಬೇಕೆಂದು ಹೇಳುತ್ತೇನೆ. ಎಷ್ಟೋ ಕಡೆ ಜನರೂ ಕೂಡ ತಾವು ಅರ್ಧ ಭಾಗ ಕೊಡುವುದಾಗಿ ಮುಂದೆ ಬಂದಿದ್ದಾರೆ. ಇಷ್ಟಾದರೂ ಸರ್ಕಾರದವರು ಇದಕ್ಕೆ ಗಮನ ಕೊಡದಿರುವುದು ಶೋಚನೀಯವೆಂದು ಹೇಳುತ್ತೇನೆ.

ನಮ್ಮ ಭಾಗದಲ್ಲಿ ಬಹು ದಿನಗಳಿಂದ ನೇಗಿಲು ವಗೈರೆ ಇಲ್ಲ. ಈಗ ಪಡವಾಗಿ ಕಾಣುವ ಜಮೀನುಗಳು ಬೇಕಾದಷ್ಟಿವೆ. ಇವುಗಳನ್ನು ಸಾಫ ಮಾಡಿಸಬೇಕಾದರೆ ಟ್ರಾಕ್ಟರುಗಳ ಅನುಕೂಲತೆಯನ್ನು ಕೊಡುವುದಾಗಿ ಸರ್ಕಾರದವರು ಹೇಳಿದ್ದಾರೆ. ಆದರೆ ಟ್ರಾಕ್ಟರಿಗೆ ಒಂದು ಎಕರೆಗೆ 32 ರೂಪಾಯಿಗಳನ್ನು ಕೊಡಬೇಕೆಂದು ಗೊತ್ತುಮಾಡಿದ್ದಾರೆ. ಇದರಿಂದಾಗಿ ಯಾರು ಶ್ರೀಮಂತರೋ, ಹಣವಿರುವವರೋ ಅವರು ಮಾತ್ರ ಇದರ ಉಪಯೋಗವನ್ನು ಪಡೆಯುವುದಕ್ಕಾಯಿತು. ಬಡವರಿಗೆ ಟ್ರಾಕ್ಟರಿಗೆ ಕಟ್ಟಬೇಕಾದ ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ನಿರಾಶೆಯಾಗಿದ್ದಾರೆ. ಈ ಕಷ್ಟವನ್ನು ನಿವಾರಿಸುವ ದೃಷ್ಟಿಯಿಂದ ಹೋದಸಾರಿ ತಕಾವಿ ಸಾಲದ basis ಮೇಲೆ ರೈತರಿಗೆ ಟ್ರಾಕ್ಟರನ್ನು ಒದಗಿಸಬೇಕೆಂದು ಕೇಳಿಕೊಂಡಿದ್ದೆವು. ಟ್ರಾಕ್ಟರನ್ನು ಹೊಡೆಯಿಸಿ ಕೊಟ್ಟರೆ ಹೆಚ್ಚಿನ ಸಹಾಯ ಮಾಡಿದಂತಾಗುತ್ತದೆ, ಆಹಾರವನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಸಹಾಯಮಾಡಿದಂತಾಗುತ್ತದೆಂದು ಹೇಳುತ್ತೇನೆ

ಅಲ್ಲದೆ, ನಮ್ಮಲ್ಲಿ ತುಂಗಭದ್ರ ಯೋಜನೆಯಾದರೂ, ಆದರಿಂದ ಕೆಲವು ತಾಲ್ಲೂಕುಗಳಿಗೆ ಮಾತ್ರ ಉಪಯೋಗವಿದೆ. ನಮ್ಮ ಕಾನ್‌ಸ್ಟಿಟ್ಯುಯನ್ಸಿಯಾದ ಲಿಂಗಸುಗೂರಿಗೆ ಆ ಯೋಜನೆಯಿಂದ ನೀರು ಸಿಕ್ಕುವುದಿಲ್ಲ. ಆದ್ದರಿಂದ ಆದಷ್ಟು ಹಳ್ಳಿಗಳಲ್ಲಿ ಬಾವಿಯಿಂದ ತೋಟಗಾರಿಕೆ ಮಾಡುವವರಿಗೆ ಹೆಚ್ಚಿನ ಹಣ ಕೊಡಬೇಕು. ಈ ಒಂದು ಸಾವಿರ ರೂಪಾಯಿಗಳಲ್ಲಿ 250 ರೂಪಾಯಿ ಸಬ್ಸಿಡಿ, 750 ರೂಪಾಯಿ ಸಾಲದ ರೂಪವಾಗಿ ಕೊಟ್ಟರೂ, ಏಳೆಂಟು ಜನರಿಗೂ ನೀವು ಇಟ್ಟಿರುವ ಹಣ ಸಾಕಾಗುವುದಿಲ್ಲ. ಬಾವಿಗೋಸ್ಕರ ಹೆಚ್ಚು ನೆರವನ್ನು ಕೊಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಎಷ್ಟೋ ಗ್ರಾಮಗಳಲ್ಲಿ ಗ್ರಾಮಪಂಚಾಯಿತಿಗಳಿವೆ. ಇವುಗಳ ವಿಷಯ ಹೇಳಿಬಿಟ್ಟರೆ ಮನಸ್ಸಿಗೆ ಬಹಳ ವಿಷಾದವಾಗುತ್ತದೆ. ನಮ್ಮಲ್ಲಿ ಎರಡು ಮೂರು ವರ್ಷಗಳ ಹಿಂದೆ ಗ್ರಾಮಪಂಚಾಯಿತಿ ಆಯಿತು. ಏನೂ ಕೆಲಸವಾಗಿಲ್ಲ. ಶುಚಿತ್ವವಿಲ್ಲ; ಬೆಳಕಿಲ್ಲ; ಯಾವ ಸಣ್ಣ ಪುಟ್ಟ ಕೆಲಸಗಳೂ ಆಗಿಲ್ಲ. ಅಲ್ಲಿತನಕ ಅಧಿಕಾರಿಗಳೂ ಗ್ರಾಮಪಂಚಾಯಿತಿಗಳಿಗೆ ಯಾವ ರೀತಿ ನಡೆಯಬೇಕೆನ್ನುವುದನ್ನು ತಿಳಿಸಿಲ್ಲ. ನೂರಕ್ಕೆ 90 ಗ್ರಾಮಗಳು ಬಿರ್‌ಕುರ್ ಹಿಂದಿದ್ದ ಹಾಗೆಯೇ ಇವೆ. ಈ ಪಂಚಾಯಿತಿಗಳಿಂದ ಉಪಯೋಗವಾಗಬೇಕಾದರೆ, ದಕ್ಷರಾದ ಒಬ್ಬ ಆಫೀಸರನ್ನು ಕಳುಹಿಸಿ, ಅವುಗಳನ್ನು ಸುಧಾರಿಸಬೇಕು. ಹಳ್ಳಿಗಳ ಗ್ರಾಮಪಂಚಾಯಿತಿಗಳಲ್ಲಿ ಶ್ಯಾನುಭೋಗರು, ಪಟೇಲರು ಮತ್ತು ಜನರಲ್ಲಿಯೇ ಪಾರ್ಟಿಗಳಾಗಿವೆ. ಹೀಗೆ ಎರಡು ಪಾರ್ಟಿಗಳಿದ್ದರೆ, ಪಂಚಾಯಿತಿಯನ್ನು ಸುಗಮವಾಗಿ, ಯಶಸ್ವಿಯಾಗಿ ನಡೆಸುವುದಕ್ಕಾಗುವುದಿಲ್ಲ. ಸರ್ಕಾರ ಇತ್ತ ಕಡೆ ಗಮನ ಕೊಡಬೇಕು. ಪಂಚಾಯಿತಿಗಳನ್ನು ಮಾಡಿದ್ದರೂ, ಅವೆಲ್ಲ ನಿರುಪಯೋಗವಾಗಿವೆ.

ಹಳ್ಳಿಗಳಲ್ಲಿ ರಸ್ತೆಗಳು ಚೆಂದಾಗಿಲ್ಲ. ಅಲ್ಲಿ ಬೆಳೆದಂಥ ಮಾಲನ್ನು ಮಾರಾಟಕ್ಕೆ ಹೊರಗಡೆ ಸಾಗಿಸುವುದಕ್ಕೆ ಬಹಳ ಕಠಿಣವಾಗುತ್ತದೆ. ಅದಕ್ಕೋಸ್ಕರ ನಮ್ಮ ತಾಲ್ಲೂಕಿನಲ್ಲಿ ಎಷ್ಟು ದೊಡ್ಡ ದೊಡ್ಡ ಗ್ರಾಮಗಳಿವೆಯೋ ಅವುಗಳ ರಸ್ತೆಗಳನ್ನು ಉತ್ತಮಪಡಿಸಲು, ಮತ್ತು ರಸ್ತೆಗಳನ್ನು ಹಾಕಲು ಆದಷ್ಟು ಸಣ್ಣ ಪುಟ್ಟ ಯೋಜನೆಗಳನ್ನು ತೆಗೆದುಕೊಳ್ಳಬೇಕು. ಮಾನ್ಯ ಸಚಿವರು ನಮ್ಮ ತಾಲ್ಲೂಕಿಗೆ ಬಂದಾಗ ಈ ವಿಷಯದಲ್ಲಿ ನೋಟ್ಸ್ ಕೊಟ್ಟಿದ್ದೇವೆ. ಅವರು ಸರ್ವೆಮಾಡಿ ಮುಂದಿನ ವರ್ಷ ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆದ್ದರಿಂದ ಆ ಪ್ರಶ್ನೆಯನ್ನು ಇಲ್ಲೇ ಬಿಡಬೇಕಾಗಿದೆ.

ಬಹಳ ದಿವಸದಿಂದ ಒಂದು ಕೂಗು ಇತ್ತು. ಅದೇನೆಂದರೆ ಗುಲ್ಬರ್ಗದಿಂದ ರಾಯಚೂರು ಜಿಲ್ಲೆಗೆ ಕನೆಕ್ಷನ್ ಕೊಡಲು ಸೇತುವೆ ಆಗಬೇಕೆಂದು. ಈ ವರ್ಷ ಅದು ಪ್ರಾರಂಭವಾಗಿದೆ. ನಮ್ಮ ಸರ್ಕಾರದವರು ಆದಷ್ಟು ಬೇಗನೆ ಆ ಕೋರಿಕೆಯನ್ನು ಕಾರ್ಯಗತ ಮಾಡಬೇಕಾಗಿದೆ. ಗಂಗಾವತಿಯಿಂದ ಲಿಂಗಸುಗೂರಿಗೆ 56 ಮೈಲಿಗಳು; ಮಧ್ಯೆ 20 ಹಳ್ಳಿಗಳಿವೆ. ಮಳೆಗಾಲದಲ್ಲಿ ಜನರಿಗೆ ಬಹಳ ಕಷ್ಟ. ಎಲ್ಲಾ ಸರ್ವೆ ಆಗಿದೆ; ಎಸ್ಟಿಮೇಟ್ ಆಗಿದೆ. ಆದರೆ ಕೆಲಸಕ್ಕೆ ಸ್ಯಾಂಕ್ಷನ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಈ ವರ್ಷವೇ, ಈ ಕೆಲಸವನ್ನು ಪ್ರಾರಂಭ ಮಾಡಿಸಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬನ್ನಿಗೋಳ ಮತ್ತು ಜಾಂತಾಪುರ ಗ್ರಾಮಗಳ ರೈತರಿಗೆ ಈಗ 10-12 ವರ್ಷಗಳ ಮುಂಚೆ ಗ್ರೋ-ಮೋರ್ ಫುಡ್ ಸ್ಕೀಮ್ ಪ್ರಕಾರ ಬಡ ರೈತರಿಗೆ ಜಮೀನನ್ನು ಕೊಟ್ಟರು. 16 ಜನರಿಗೆ ಹೊಲಗಳನ್ನು ಕೊಟ್ಟುಬಿಟ್ಟರು. ಪರ್ಮಿಷನ್ ಪಡೆದು ಜಮೀನನ್ನು ಸಾಗುವಳಿ ಮಾಡಿಕೊಳ್ಳುತ್ತಾ ಬಂದರು. ಆದರೆ ಜಮೀನನ್ನು ಬಿಡಿ ಎಂದು ಆರ್ಡರ್ ಬಂದಿದೆ. 15 ವರ್ಷಗಳಿಂದ ಆ ಹೊಲಗಳನ್ನು ಮಾಡಿಕೊಂಡು ಬಂದಿದ್ದಾರೆ. ಗೊಬ್ಬರ ಮುಂತಾದುವನ್ನು ಹಾಕಿ, ಜಮೀನನ್ನು ಫಲವತ್ತಾಗಿ ಮಾಡಿದ ರೈತರನ್ನು ಆ ಹೊಲಗಳಿಂದ ತೆಗೆದುಹಾಕಿದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಡೆಪ್ಯುಟಿ ಕಮಿಷನರವರಿಗೆ ಈ ವಿಷಯದಲ್ಲಿ ಅರ್ಜಿಗಳನ್ನು ಕಳುಹಿಸಿದ್ದೇವೆ. ಹೊಲ ಇಲ್ಲದೆಯೇ ಅವರು ನಿರ್ಗತಿಕರಾಗಿ, ಊರು ಬಿಟ್ಟು ಹೋಗಬೇಕಾದ ಪ್ರಸಂಗ ಬಂದಿದೆ.

ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದಾಗ ಕುಡಿಯುವ ನೀರಿನ ಅಭಾವದ ವಿಷಯದಲ್ಲಿ ಕೆಲವು ಜನರು ಹೇಳಿಕೊಂಡರು. ಮೋಟಾರು ಬಸ್ಸುಗಳಲ್ಲಿ ನೀರನ್ನೊದಗಿಸುವ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದರು. ನಮ್ಮ ಕಡೆ ಎಷ್ಟೋ ಗ್ರಾಮಗಳಲ್ಲಿ ನಾಲ್ಕೈದು ಮೈಲಿ ದೂರದಲ್ಲಿ ನೀರು ಸಿಕ್ಕುವುದಿಲ್ಲ. ಆ ಗ್ರಾಮಗಳ ಲಿಸ್ಟನ್ನು ಕೊಡಿ ಎಂದರೆ ಕೊಡುತ್ತೇನೆ. ಸರ್ಕಾರದ ವರು ಈ ಗ್ರಾಮಗಳ ಬಗ್ಗೆ ಒಂದು ಯೋಜನೆಯನ್ನು ಕೈಗೊಂಡು ಆದಷ್ಟು ತೀವ್ರವಾಗಿ ಏನಾದರೂ ಮಾಡಬೇಕು. ಕುಡಿಯುವ ನೀರಿನ ಅವಶ್ಯಕತೆ ಬಹಳ ಇದೆ. ಎಲ್ಲಿ ಅನ್ನ ನೀರುಸಿಕ್ಕುವುದಿಲ್ಲವೋ ಅಲ್ಲಿ ಮನುಷ್ಯ ಹೇಗೆ ಬಾಳಬಲ್ಲ?

ಇನ್ನು ಆರೋಗ್ಯದ ವಿಚಾರದಲ್ಲಿ ಹೇಳುವುದಾದರೆ, ನಮ್ಮ ತಾಲ್ಲೂಕು ಆಸ್ಪತ್ರೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಔಷಧಿಬೇಕು. ಅಲ್ಪಸ್ವಲ್ಪ ಔಷಧಿ ಕಳುಹಿಸಿ ಬಿಡುತ್ತೀರಿ. ಬಡ ಜನರಿಗೆ ಸರ್ಕಾರಿ ಆಸ್ಪತ್ರೆಯಿಂದ ಏನೂ ಸಹಾಯವಾಗಿಲ್ಲ. ಎಷ್ಟೋ ದವಾಖಾನೆಗಳಲ್ಲಿ ಡಾಕ್ಟರುಗಳೇ ಇಲ್ಲ. ಇವುಗಳನ್ನೆಲ್ಲಾ ಸುವ್ಯವಸ್ಥಿತ

(ಶ್ರೀ ಬಸಣ್'ಗೌಡ)

ಗೊಳಿಸಬೇಕು. ನಮ್ಮ ಸಂಸ್ಥಾನದಲ್ಲಿ 40 ವರ್ಷಗಳಿಂದ ದವಾಖಾನೆಗಳು ಖಾಸಗಿಯಾಗಿ ನಡೆದು ಬಂದಿವೆ. ಡಾಕ್ಟರಿಲ್ಲದೆ ಕಾಂಪೌಂಡರ್ ಮೇಲೆ ನಡೆದು ಬಂದಿವೆ. ಆಸ್ಪತ್ರೆಗಳಿಗೆ ಆದಷ್ಟು ತೀವ್ರವಾಗಿ ಡಾಕ್ಟರುಗಳನ್ನು ಕಳುಹಿಸಿಕೊಡಬೇಕು. ಆಯುರ್ವೇದಕ್ಕೆ ಎಷ್ಟು ಮಾಹಿತಿ ಕೊಟ್ಟಿದೆ ಎನ್ನುವುದನ್ನು ಸರ್ಕಾರದವರು ತಿಳಿಸಿಲ್ಲ. ಈ ವರ್ಷ ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಮಾಡಿರುವುವುಗಳಿಗೆ ಏನು ಸಹಾಯ ಕೊಟ್ಟಿದ್ದಾರೆ ಎನ್ನುವುದಕ್ಕೆ ಈ ವರ್ಷದ ಬಡ್ಜೆಟ್ಟಿನಲ್ಲಿ ಏನೂ ಪ್ರಾವಿಷನ್ ಮಾಡಿಲ್ಲ. ಇವುಗಳಿಗೆ ಇನ್ನೂ ಸಹಾಯ ಮಾಡುವುದು ಬಹಳ ಅವಶ್ಯ.

6 P.M.

ಇನ್ನು ಅರಣ್ಯ ಖಾತೆಯ ವಿಷಯ. ನಮ್ಮ ಕಡೆ ಅರಣ್ಯಕ್ಕೂ, ಈ ಕಡೆ ಅರಣ್ಯಕ್ಕೂ ಬಹಳ ವ್ಯತ್ಯಾಸ. ನಮ್ಮಲ್ಲಿ ಹಿಂದಿನ ಸರ್ಕಾರದವರು ಅರಣ್ಯದ ಅಭಿವೃದ್ಧಿಗೆ ಬಹಳ ಖರ್ಚುಮಾಡಿದರು. ಆದರೆ ಒಂದು ಗಿಡ ನಿಲ್ಲಲಿಲ್ಲ. ಗುಡ್ಡಗಾಡು ಪ್ರದೇಶ. ಆದ್ದರಿಂದ ಕಾಡು ಹೆಚ್ಚಾಗಿ ಆಗುವುದಿಲ್ಲ. ಅರಣ್ಯಕ್ಕೆ ಹೊಂದಿದ್ದ ಜಮೀನುಗಳನ್ನು ಇದುವರೆಗೆ ರೈತರು ಮಾಡಿಕೊಳ್ಳುತ್ತಾ ಬಂದರೂ ಅವರಿಗೆ ಪಟ್ಟೆ ಸಹ ಆಗಿಲ್ಲ. ಇದರಿಂದ ರೈತರಿಗೆ ಹಾನಿಯಾಗಬಹುದು. ಮೊದಲಿನಿಂದ ಫಾರೆಸ್ಟ್ ಏರಿಯಾದಲ್ಲಿ ಯಾರು ಹೊಲ ಮಾಡಿಕೊಂಡು ಬಂದಿದ್ದಾರೊ, ಆದಷ್ಟು ಮಟ್ಟಿಗೆ ಅವರಿಗೆ ಅದನ್ನು ಬಿಟ್ಟುಬಿಡಬೇಕು. ಅವರನ್ನು ಅಲ್ಲಿಂದ ಕಿತ್ತುಹಾಕಬೇಕು ಎಂದು ಏನು ಹುಕುಂ ಹೊರಡಿಸಿದ್ದಾರೋ ಅದನ್ನು ಸಂಬಂಧಪಟ್ಟ ಮಂತ್ರಿಗಳು ಆಲೋಚನೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ಸಮಾಜ ಕಲ್ಯಾಣ ಕೇಂದ್ರಗಳ ವಿಷಯವನ್ನು ಕುರಿತು ಸ್ವಲ್ಪ ಹೇಳಬೇಕಾಗಿದೆ. ಹೋದವರ್ಷ ಲಂಬಾಣಿಗಳಿಗೆ ಮತ್ತು ಹರಿಜನರಿಗೆ, ವಸತಿಗೆ ಮನೆ ಕಟ್ಟಿಕೊಳ್ಳಲಿಕ್ಕೆ, ದನ ಖರೀದಿ ಮಾಡಲಿಕ್ಕೆ ಮುಂತಾದುವಕ್ಕೆ ಗ್ರಾಂಟು ಕೊಟ್ಟರು. ಇದರ ಪ್ರಕಾರ 400 ರೂಪಾಯಿ ಎರಡು ಜೊತೆ ಎತ್ತುಗಳಿಗೆ ಕಳುಹಿಸಿಕೊಟ್ಟರು. ಈ ಹಣವನ್ನು ತೆಗೆದುಕೊಳ್ಳುವುದಕ್ಕೆ ತಾಲ್ಲೂಕಿನ ಹರಿಜನರೆಲ್ಲಾ ಬಂದುಬಿಟ್ಟರು. ಯಾರಿಗೆ ಕೊಡುವುದು, ಯಾರಿಗೆ ಬಿಡುವುದು? ಹೀಗೆ ಕೊಟ್ಟರೆ ಪ್ರಯೋಜನವೇನಾಗುತ್ತದೆ? ಆಮೇಲೆ ಒಬ್ಬರಿಗೆ 100 ರೂಪಾಯಿ ಗ್ರಾಂಟು ಮಾಡಿದರು. ಇದರ ಬದಲು ಆದಷ್ಟು ಮಟ್ಟಿಗೆ ಸದ್ಯಕ್ಕೆ ಹಣವನ್ನು ಶಿಕ್ಷಣಕ್ಕೆ ಖರ್ಚುಮಾಡಿದರೆ ಬಹಳ ಒಳ್ಳೆಯದು. ನೀವು ಏನು ಹಣ ಕೊಡಬೇಕೆಂದಿದ್ದೀರೋ ಅದನ್ನು ಅವರ ಮಕ್ಕಳ ಶಿಕ್ಷಣಕ್ಕೆ ಖರ್ಚುಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಹಳ್ಳಿಗೆ ಎರಡು ಮನೆ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಅದರಿಂದ ಅದರ ಆರ್ಥಿಕಸ್ಥಿತಿ ಉತ್ತಮವಾಗುತ್ತದೆಯೇ? ಮೊದಲು ಹಣವನ್ನು ಅವರ ಶಿಕ್ಷಣಕ್ಕೆ ಮತ್ತು ಆರೋಗ್ಯಕ್ಕೆ ಖರ್ಚುಮಾಡಬೇಕು.

ಎಷ್ಟೋ ಹಳ್ಳಿಗಳನ್ನು ನೋಡುತ್ತಿದ್ದೇವೆ. ಒಂದೊಂದು ಮನೆಯಲ್ಲಿ ನಾಲ್ಕೈದು ಸಂಸಾರಗಳು ಇದ್ದು ಅವರಿಗೆ ವಸತಿ ಜಾಗವೇ ಇಲ್ಲ. ಎಷ್ಟೋ ಜನರು ಹೆಚ್ಚಾಗಿ ಮನೆ ಕಟ್ಟಲಿಕ್ಕೆ ದರಖಾಸ್ತು ಕೊಟ್ಟಿದ್ದರೂ ಅದು ಇತ್ಯರ್ಥವಾಗಿಲ್ಲ. ಎಲ್ಲಾ ಹಳ್ಳಿಗಳಲ್ಲೂ ಮನೆಗಳ ಅವಶ್ಯಕತೆ ಇದೆ. ನಮ್ಮ ಪ್ರೊಸೀಜರ್ ಮಾಡಿಕೊಂಡು, ಸಿಧಾನಮಾಡಿದರೆ ಜನರ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವಾಗುತ್ತದೆ. ಇಂಡಸ್ಟ್ರಿಯಲ್ ಲೋನ್ ವಿಚಾರದಲ್ಲಿ ಒಂದು ಉದಾಹರಣೆ ಕೊಡಬೇಕಾಗಿದೆ. ನಮ್ಮಲ್ಲಿ ಒಬ್ಬ ವರ್ತಕರು ಸಹಾಯ ಕೊಡಬೇಕು ಎಂದು ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟಿಗೆ ಅರ್ಜಿ ಹಾಕಿದರು. ಅವರು ಅವರ ಫ್ಯಾಕ್ಟರಿಯನ್ನು ಹೆಚ್ಚಿನ ಪ್ರಗತಿಗೆ ತರಬೇಕೆಂದು ಒಂದು ದರಖಾಸ್ತು ಕೊಟ್ಟರು. ಅದು ಇಲ್ಲಿಯವರೆಗೆ ಸ್ಯಾಂಕ್ಷನ್ ಆಗಿಲ್ಲ. ಪ್ರಾಪರ್‌ಟಿ ವ್ಯಾಲ್ಯುಯೇಷನ್‌ನಿಗೆ ಕಳುಹಿಸಿಬಿಟ್ಟಿದ್ದೇವೆ, ಕಾಗದ ವಾಪಸ್ಸು ಬಂದಿಲ್ಲ ಎಂದು ಹೇಳುತ್ತಾರೆ. ಡೆಪ್ಯುಟಿ ಕಮೀಷನರಿಂದ, ಎಷ್ಟು ಪ್ರಾಪರ್‌ಟಿ ಇದೆ ಎಂದು ತಿಳಿಸಲಿಕ್ಕೆ ತಹಸೀಲ್‌ದಾರರಿಗೆ ಕಾಗದ ಕಳುಹಿಸಿದ್ದಾರೆ. ಒಂದು ವರ್ಷವಾದರೂ ಅದು ಇತ್ಯರ್ಥವಾಗಿಲ್ಲ. ಈ ರೀತಿಯಾದರೆ ಏನು ಪರಿಣಾಮ? ಸಂಬಂಧಪಟ್ಟ ಮಂತ್ರಿಗಳು ಈ ವಿಷಯವನ್ನು ಸ್ವಲ್ಪ ಗಮನಕ್ಕೆ ತಂದುಕೊಳ್ಳಬೇಕು. ಲೋನು ಕೊಡುವುದಿದ್ದರೆ ಕೊಡಬೇಕು. ಇಲ್ಲದಿದ್ದರೆ ಎಲ್ಲಿಯಾದರೂ ಎರಡನೆಯ ವ್ಯವಸ್ಥೆ ಮಾಡಿಕೊಳ್ಳುತ್ತಾರೆ.

ಸಹಕಾರ ಸಂಘದ ಕೆಲಸ ನಮ್ಮಲ್ಲಿ ಏನು ನಡೆದಿದೆಯೋ, ಅದರಿಂದ ಸ್ವಲ್ಪ ಪ್ರಗತಿ ನಡೆದಿದೆ. ಆದರೆ ಮಾರ್ಕೆಟಿಂಗ್ ಸೊಸೈಟಿಯಿಂದ ಹೆಚ್ಚಿನ ಸಹಾಯ ಮಾಡ ಬೇಕು. ಬಡಜನರಿಗೆ ಮಾರ್ಕೆಟಿಂಗ್ ಸೊಸೈಟಿಗಳು ಬಹಳ ಅವಶ್ಯ ಇವೆ. ಸಾಸಗಾರರು ಮುಂಗಡ ಹಣ ಕೊಟ್ಟು, ಕಾಳು ಬಂದಾಗ ಹೆಚ್ಚು ಹೆಚ್ಚು ತೆಗೆದುಕೊಂಡು ಬಂದಿದ್ದಾರೆ. ರೈತರಿಗೆ ಇವರಿಂದ ಬಹಳ ತೊಂದರೆಯಾಗಿದೆ. ಆದಷ್ಟು ತೀವ್ರವಾಗಿ ಅಂಥ ಸಂಘಗಳನ್ನು ಹೆಚ್ಚುಮಾಡಿ, ಮಾರ್ಕೆಟಿಂಗ್ ಸೊಸೈಟಿಗಳನ್ನು ನಿರ್ಮಾಣ ಮಾಡಿದರೆ, ಎರಡನೆಯವರಿಗೆ ಹೋಗುವ ಲಾಭ ರೈತರಿಗೇ ಉಳಿದು, ಅವರಿಗೆ ಆರ್ಥಿಕ ಪರಿಸ್ಥಿತಿ ಗುಣವಾಗಬಹುದೆಂದು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿಷಯವೇನೆಂದರೆ, ನಮ್ಮ ರಾಯಚೂರು ಜಿಲ್ಲೆಯಲ್ಲಿ ಹತ್ತಿ ಬೆಳೆ ಇದೆ. ಒಂದು ಲಕ್ಷ ಬೇಲು ಹತ್ತಿ ಹೊರಗಡೆ ಹೋಗುತ್ತದೆ. ಆದ್ದರಿಂದ ನೂಲುವ (ಸ್ಪಿನ್ನಿಂಗ್) ಗಿರಣಿಯನ್ನು ಸ್ಥಾಪನೆಮಾಡಿದರೆ ಚೆಂದಾಗಿ ಇರುತ್ತದೆ. ಮೊನ್ನೆ ನಡೆದ ಕೋ-ಆಪರೇಟೀವ್ ಕಾನ್‌ಫೆರೆನ್ಸಿನಲ್ಲಿ ಒಂದು ನಿರ್ಣಯವನ್ನು ಮಾಡಿ ತಮಗೆ ಕಳುಹಿಸಿದ್ದೇವೆ. ಸರ್ಕಾರದವರು ಇತ್ತಕಡೆ ಗಮನಿಸಿ ಸ್ಪಿನ್ನಿಂಗ್ ಆಗುವ ವಿಷಯದಲ್ಲಿ ಸಹಾಯ ಮಾಡಬೇಕೆಂದು ಕೇಳಿಕೊಂಡು, ನನ್ನ ಭಾಷಣವನ್ನು ಮುಗಿಸುತ್ತೇನೆ.

Sri Y. VEERAPPA.—May I know how long we are going to sit?

Mr. SPEAKER.—Up to 8 o'clock.

ಶ್ರೀ ವೈ. ವೀರಪ್ಪ.—ಒಂದು ಸಜೆಷನ್. 12 ಘಂಟೆ ವರೆಗೂ ಕುಳಿತುಕೊಳ್ಳೋಣ.

ಅಧ್ಯಕ್ಷರು.—ಊಟಮಾಡಿ ಕುಳಿತುಕೊಳ್ಳುವುದಕ್ಕೂ ಸಿದ್ಧ.

Sri C. M. ARUMUGHAM.—From the opposition side, we do not participate from now onwards We shall rise today and meet tomorrow. Let the Congress members speak tomorrow.

Mr. SPEAKER.—That is not possible. I will give you a chance.

Sri C. M. ARUMUGHAM.—I am not asking for chance.

[Sri S. P. TALWALKAR spoke in Marathi].

†ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಮಾನ್ಯ ಸಭಾಪತಿಗಳೇ, ಈ ಸಭೆಯಲ್ಲಿ ಮಂಡಿಸಿರತಕ್ಕ 1959-60ನೆಯ ಸಾಲಿನ ಆಯವ್ಯಯ ಅಂದಾಜಿಗೆ ನನ್ನ ಪೂರ್ಣ ಬೆಂಬಲವನ್ನು ಕೊಡುತ್ತ, ಶ್ರೀಯುತ ಮರಿಯಪ್ಪನವರು ಆರ್ಥಿಕ ಮಂತ್ರಿ ಪದವಿಯನ್ನು ಪಡೆದಮೇಲೆ ಪ್ರತಿವರ್ಷವೂ surplus budget ತಂದಿರತಕ್ಕದ್ದು ಸ್ತೋತ್ರಾರ್ಹವಾಗಿದೆ. ಬರೀ ಹಣಕಾಸಿನ ವಿಷಯದಲ್ಲಿ ಉಳಿತಾಯ ಮಾಡುವುದರಿಂದ ದೇಶಕ್ಕೆ ದೊಡ್ಡಪ್ರಗತಿಯಾಯಿತು ಎಂದು ಹೇಳುವ ಹಾಗೆ ಇಲ್ಲ. ದೇಶದ ಆಡಳಿತದ ಹೊರೆ ಯಾವರೀತಿಯಲ್ಲಿಯಾದರೂ ಕಡಮೆಯಾಗಿದೆಯೇ, ಇದರಲ್ಲಿ ಮಿತವ್ಯಯವಾಗುತ್ತಿದೆಯೇ ಎಂಬುದಕ್ಕೆ ನಾವು ಈ ಸಂದರ್ಭದಲ್ಲಿ ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ಇವೊತ್ತು ಸಾಮಾನ್ಯ ಆಡಳಿತದ ವಿಷಯದಲ್ಲಿ ನೋಡುವುದಾದರೆ, ಯಾವಯಾವ ಇಲಾಖೆಯಲ್ಲಿ ಎಷ್ಟರಮಟ್ಟಿನ ಕೆಲಸವಿದೆ, ಯಾವ ಇಲಾಖೆಗೆ ಹೆಚ್ಚಿನ ಕೆಲಸವಿದೆ, ಯಾವುದನ್ನು ಕಡಮೆ ಮಾಡಬೇಕು, ಎನ್ನುವುದನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಅದಕ್ಕನುಗುಣವಾಗಿ ಖರ್ಚಿನ ಬಾಬನ್ನು ಇಟ್ಟರೆ ಉತ್ತಮವೆಂದು ತೋರುತ್ತದೆ. ಅದನ್ನು ಮಾಡಲು ಕೂಡಲೆ ಸರ್ಕಾರ ಕಾರ್ಯಕ್ರಮ ಹಾಕಿದರೆ ಅದರಿಂದ ಸ್ವಲ್ಪಮಟ್ಟಿಗೆ ಅನುಕೂಲವಾಗುತ್ತದೆಂದು ನನ್ನ ಅಭಿಪ್ರಾಯ. ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿಗೆ ನಾವು ಹೆಚ್ಚಿನ ಹಣವನ್ನು ಖರ್ಚುಮಾಡುತ್ತ ಹೋದರೆ ದೇಶದ ಅಭ್ಯುದಯ ಕೆಲಸಗಳಿಗೆ ಸಾಕಾದಷ್ಟು ಹಣವಿರುವುದಿಲ್ಲ. ಆದಕ್ಕಾಗಿ quantum of work ಏನಿದೆ ಎನ್ನುವುದನ್ನು ಒಂದು ಕಮಿಟಿಯೋ ಅಥವಾ ಸರ್ಕಾರವೋ ಆಲೋಚನೆಮಾಡಿ ಸಮತೂಗಿಸಬೇಕೆಂದು ನನ್ನ ಸೂಚನೆ ಇದೆ.

ಸ್ವಾಮಿ, ಇವೊತ್ತು ಎಲ್ಲ ಬಾಬುಗಳಿಗೂ ಹಣವನ್ನು ಒದಗಿಸಿರುತ್ತೀರಿ. ಮುಖ್ಯವಾಗಿ, ಸಹಕಾರ ಮತ್ತು ಪಶುಪಾಲನೆಯ ವಿಷಯವನ್ನು ತೆಗೆದುಕೊಂಡರೆ ಈ ಮೂರು ಇಲಾಖೆಗಳೂ ಬಹಳ ವರ್ಷಗಳಿಂದ ಈ ದೇಶದಲ್ಲಿ ಕೆಲಸಮಾಡುತ್ತಿವೆ. ಈ ಇಲಾಖೆಗಳ ಬಗ್ಗೆ ನಾವು ಟೀಕೆಮಾಡುತ್ತಿದ್ದರೂ ಅದರಿಂದ ಏನೂ ಪ್ರಯೋಜನವಿಲ್ಲವಾಗಿದೆ. ಈ ಖಾತೆಗಳನ್ನು ವಹಿಸಿರತಕ್ಕ ಮಂತ್ರಿಗಳು ಈ ದೇಶದಲ್ಲಿ ಈ ಇಲಾಖೆಗಳು ಮಾಡಬೇಕಾದ ಕೆಲಸವನ್ನು ಮಾಡಿವೆಯೇ, ಆಹಾರ ಉತ್ಪತ್ತಿಗೆ ಏನು ಧಕ್ಕೆಬಂದಿದೆ, ಏತಕ್ಕೋಸ್ಕರ ಹೀಗಾಗಿದೆ, ಎನ್ನುವುದರ ಕಡೆಗೆ ಹೆಚ್ಚಿನ ಗಮನವನ್ನು ಕೊಟ್ಟರೆ ಬಹಳಮಟ್ಟಿನ ಪ್ರಯೋಜನವಾಗಬಹುದು ಎಂದು ಕಾಣುತ್ತದೆ. ಹಿಂದೆ ಈ ವ್ಯವಸಾಯ ಇಲಾಖೆಯಲ್ಲಿ ಡಾಕ್ಟರ್ ಕೋಲ್ಮನ್ ಎಂಬ ಯಾವ ಅಧಿಕಾರಿ ಇದ್ದರೋ ಅವರು ನಿವೃತ್ತರಾದ ಮೇಲೆ ಈ ಇಲಾಖೆಯ ಕೆಲಸಕಾರ್ಯಗಳು ಯಾವ ವೇಗದಲ್ಲಿ ನಡೆಯಬೇಕಾಗಿತ್ತೋ ಆ ವೇಗದಲ್ಲಿ ನಡೆದಿಲ್ಲ. ಶೇಕಡ 75-80 ಭಾಗ ರೈತಾಪಿ ಜನಗಳಿರತಕ್ಕ ಈ ದೇಶದಲ್ಲಿ ಸಂಶೋಧನೆಯ ಕೆಲಸ ನಡೆದು ಅದರಿಂದ ವ್ಯವಸಾಯಗಾರರಿಗೆ ಹೆಚ್ಚಿನ ಫಸಲು ಬಂದು ಅವರ ಆರ್ಥಿಕ ಪರಿಸ್ಥಿತಿ ಅನುಕೂಲವಾಗಬೇಕಾಗಿತ್ತು. ಅದು ಆಗಿಲ್ಲವೆಂದರೆ ತಪ್ಪಾಗಲಾರದು. ಆದುದರಿಂದ ಈ ಖಾತೆಯ ಜವಾಬ್ದಾರಿಯನ್ನು ಹೊತ್ತಿರುವ ಮಂತ್ರಿಗಳು ಈ ಬಗ್ಗೆ ಲಕ್ಷ್ಯವನ್ನು ಕೊಡುತ್ತಾರೆಂದು ನಂಬಿದ್ದೇನೆ.

6-30 P.M.

ಇನ್ನು ಪೋಲೀಸ್ ಇಲಾಖೆಯ ವಿಷಯದಲ್ಲಿ ಮಾನ್ಯ ಸ್ನೇಹಿತರೆಲ್ಲರೂ ಒಂದೇಸಮನಾಗಿ ಟೀಕೆಗಳನ್ನು ಮಾಡುತ್ತಿದ್ದಾರೆ. ಆದರೆ ನಾವು ಎಲ್ಲ ಇಲಾಖೆಯ ಅಧಿಕಾರಿಗಳ ಬಗ್ಗೆಯೂ ಒಂದೇ ಸಮನಾಗಿ ಟೀಕೆ ಮಾಡುತ್ತಹೋದರೆ ಅವರನ್ನು ನಡೆಸತಕ್ಕವರು ಯಾರು? ಅವರನ್ನು ಬಿಟ್ಟರೆ wholesale ಆಗಿ ಇಲಾಖೆ ಎಲ್ಲವನ್ನೂ abolish ಮಾಡುವುದಕ್ಕೆ ಸಾಧ್ಯವೇ? ಎನ್ನುವ ಪ್ರಶ್ನೆ ಬರುತ್ತದೆ. ಇಲಾಖೆಯಲ್ಲಿ ಹೆಚ್ಚಿನ ದಕ್ಷತೆಯಿಂದ ಕೆಲಸಮಾಡತಕ್ಕ ಅಧಿಕಾರಿಗಳೂ ಇದ್ದಾರೆ. ಆದರಲ್ಲಿ ಅನುಮಾನಪಡಬೇಕಾಗಿಲ್ಲ. ಎಲ್ಲಿ ಒಳ್ಳೆಯದಿರುತ್ತದೆಯೋ ಅಲ್ಲಿ ಕೆಟ್ಟದ್ದೂ ಇರತಕ್ಕದ್ದು ಸ್ವಾಭಾವಿಕ. ಇಲಾಖೆಯಲ್ಲಿ ಲೋಪದೋಷಗಳಿವೆ. ಅವನ್ನು ನಿರಿಪಡಿಸುವುದಕ್ಕೆ ಆಲೋಚನೆಮಾಡಿ ಯೋಗ್ಯವಾದ ರಚನಾತ್ಮಕ ಟೀಕೆಗಳಿಗೆ ಗಮನಕೊಟ್ಟರೆ ಸ್ವಲ್ಪ ಮಟ್ಟಿಗೆ ಸುಧಾರಿಸಬಹುದು. ಕೇಂದ್ರ ಸರಕಾರದ ಗೃಹ ಮಂತ್ರಿಗಳಾದ ಪಂತರೂ ಈ ಇಲಾಖೆಯ ವಿಷಯದಲ್ಲಿ ಶ್ಲಾಘನೀಯವಾದ ವಿಷಯಗಳನ್ನು ಹೇಳಿದ್ದಾರೆ. ಆದರೂ ಇನ್ನೂ ಹೆಚ್ಚು ಮಾಡಬೇಕಾದ ಕೆಲಸವಿದೆ. ನಾನು ನೂರಾರು ಪ್ರಾಂತಗಳ ಬಡ್ಜೆಟ್ಟುಗಳನ್ನು ನೋಡಿದಾಗ, ನಮ್ಮ ಸರ್ಕಾರ ಈ ಬಾಬಿಗಾಗಿ ಸಾಕಾದಷ್ಟು ಹಣವನ್ನು ಒದಗಿಸಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅವರಿಗೆ ಕೊಡುವಷ್ಟು ಹಣವನ್ನು ಕೊಡಬೇಕು. ಇವತ್ತಿನ ದಿವಸ ಜನರ ಸುಖ ಮತ್ತು ರಕ್ಷಣೆ ಇವುಗಳಿಗೆ ವ್ಯವಸ್ಥೆ ಮಾಡಬೇಕಾದುದು ಈ ಇಲಾಖೆಯ ಜವಾಬ್ದಾರಿಯಾಗಿದೆ. ಕೇವಲ ಟೀಕೆಯನ್ನೇ ಮಾಡುವುದಾದರೆ ಬರೀ ಟೀಕೆ ಟೀಕೆಗಳಾಗಿ ಉಳಿಯುತ್ತವೆ. ಅಲ್ಲದೆ ಕೆಲವುವೇಳೆ ಕೆಲಸಮಾಡುವ ಅಧಿಕಾರಿಗಳಿಗೂ ಕೆಲಸಮಾಡಲು ನಿರುತ್ಸಾಹ ಮೂಡುತ್ತದೇನೋ ಎನ್ನುವ ಶಂಕೆ ಬರುತ್ತದೆ. ಅದಕಾರಣ ನಾವು ಜವಾಬ್ದಾರಿಯಿಂದ ಕೂಡಿದ ಟೀಕೆಗಳನ್ನು ಮಾಡಬೇಕಾಗಿದೆ; ಯಾರಿಗೂ ನೋವನ್ನುಂಟುಮಾಡುವ ತರದ ಟೀಕೆಯನ್ನು ಮಾಡುವುದರಿಂದ ಆಡಳಿತದ ಇಲಾಖೆಯಲ್ಲಿರುವ ಮುಖ್ಯ ಅಧಿಕಾರಿಗಳು ಮತ್ತು ಅಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳಲ್ಲಿ ಬಂದು ತರದ ನೋವನ್ನುಂಟುಮಾಡುವ ಪರಿಸ್ಥಿತಿ ಒಂದು ಕೆಲಸಗಳು ಸರಿಯಾಗಿ ನಡೆಯುವುದಿಲ್ಲ ಎಂದು ಹೇಳಬೇಕಾಗಿದೆ. ಈ ಸಮಯದಲ್ಲಿ, ಇಲಾಖೆಯಲ್ಲಿರುವ ತೊಂದರೆಯೇನು ಎನ್ನುವುದನ್ನು ನೋಡಬೇಕು. ಅದರಲ್ಲೂ ನಮ್ಮ ಹಳೆಯ ಮೈಸೂರಿನಲ್ಲಿ ಕ್ರಿಮಿನಲ್ಲು ಕೇಸುಗಳ ಮತ್ತು ಸಿವಿಲ್ಲು ಕೇಸುಗಳ ಒಂದು ನಕ್ಷೆಯನ್ನು ಈ ಇಲಾಖೆಯವರು ಒದಗಿಸುತ್ತಿಲ್ಲ. ಇದನ್ನು ಒದಗಿಸಬೇಕು. ಈ ಪೋಲೀಸಿನ ಅಧಿಕಾರಿಗಳು ಸಾಕ್ಷಿಗಳಾಗಿ ಹೋಗುವ ಸಂದರ್ಭದಲ್ಲಿ ಖಾಸಗೀ ಬಸ್ಸುಗಳ ಮಾಲೀಕರು ದಯಾ ದಾಕ್ಷಿಣ್ಯಗಳಿಂದ ಇವರನ್ನು ಕರೆದುಕೊಂಡು ಹೋಗುತ್ತಿದ್ದಾರೆ. ಇವರು ಈ ಕೆಲಸಗಳಿಗೆ ಸಾಕ್ಷಿಗಳಾಗಿ ಹೋಗದಿದ್ದರೆ ಕೇಸುಗಳನ್ನು ರುಜುವಾತು ಮಾಡಲು ಸಾಧ್ಯವಿಲ್ಲವಾಗುತ್ತದೆ. ಬೊಂಬಾಯಿ ಪ್ರಾಂತದಲ್ಲಿ ಈ ಪದ್ಧತಿ ಇಲ್ಲ. ಬರೀ ಮೈಸೂರು ಪ್ರಾಂತದಲ್ಲಿ ಮಾತ್ರ ಇದೆ. ಕ್ರಿಮಿನಲ್ ಕೇಸುಗಳನ್ನು ಮಾಡಲು ಸರಿಯಾಗಿ detect ಮಾಡುತ್ತಿಲ್ಲ ಎಂದು ನಾವು ಹೇಳುವುದು ಸರಿಯಲ್ಲ. ಅವರಿಗೆ ಕೊಡಬೇಕಾದ ಎಲ್ಲ Facilities ಗಳನ್ನು ಮತ್ತು ಕೊಡಬೇಕಾದ ಅನುಕೂಲಗಳನ್ನು ಕೊಟ್ಟರೆ ಅವರು ದಕ್ಷತೆಯಿಂದ ಕೆಲಸಗಳನ್ನು ಮಾಡಬಹುದು. ಇನ್ನು Public Prosecutor ಗಳನ್ನು ನೇಮಿಸುವುದರಲ್ಲಿ ಬಹಳ ವ್ಯತ್ಯಾಸವಿದೆ. ಈ ಹುದ್ದೆಗೆ ದಕ್ಷರಾದ ವಕೀಲಿ ವೃತ್ತಿಯಲ್ಲಿ ಅನುಭವವಿರುವ

(ಶ್ರೀ ಕೆ. ವಿ. ಬೈರೇಗೌಡ)

ವ್ಯಕ್ತಿಗಳನ್ನು ನೇಮಕ ಮಾಡಿದರೆ ಕ್ರಿಮಿನಲ್ ಮತ್ತು ಇತರ ಕೇಸುಗಳು ಸುಲಲಿತವಾಗಿ ನಡೆಯುತ್ತವೆ. ಈ ದೃಷ್ಟಿಯಿಂದ ಈ ಸ್ಥಾನವನ್ನು ಒಂದು influence ಗೆ ಒಳಗಾಗಿ ಭರ್ತಿಮಾಡಿದರೆ ಈ ಸ್ಥಾನದಲ್ಲಿ ಕೆಲಸಮಾಡುವವರು ಒಂದು ತರಹದ ಜವಾಬ್ದಾರಿಯನ್ನು ಅರಿಯದೆ ಹೋಗುವಂತಾಗುತ್ತದೆ. ಹೀಗಾಗಿ ಕೆಲವು ಕೋರ್ಟುಗಳಲ್ಲಿ ಹತ್ತಾರು ಕೇಸುಗಳು ಸರಿಯಾಗಿ ನಡೆಯದೆ ಈಚೆಗೆ ಸೆಷನ್ಸಿಗೆ ಹೋಗುವಂತಾಗಿದೆ. ಇದರಿಂದಾಗಿ ದೇಶದಲ್ಲಿರುವ ಜನತೆಗೆ ಭಯವೇ ಇಲ್ಲದಂತಾಗುವುದು ಎಂದು ಹೇಳಿದರೂ ತಪ್ಪಾಗಲಾರದು. ಆದುದರಿಂದ ಈ ಹುದ್ದೆಗೆ ಯೋಗ್ಯರಾದ ವಕೀಲರನ್ನು ನೇಮಕಮಾಡಿದರೆ ಕಾನೂನನ್ನು ಭದ್ರವಾಗಿ ಪಾಲಿಸಲು ಅನುಕೂಲವಾಗುತ್ತದೆ.

ಸ್ವಾಮೀ, ಈ ಬೆಂಗಳೂರು ನಗರಕ್ಕೆ ಹೊಂದಿಕೊಂಡಂತೆ ಕೆಲವು ಪ್ರದೇಶಗಳ ಬಗ್ಗೆ ನಾನು ಹಿಂದೆ ಹೇಳಿದ್ದೆ. ಪುನಃ ಅದನ್ನೇ ಈಗ ಪ್ರಸ್ತಾಪ ಮಾಡಬೇಕಾಗಿದೆ. ಇದಕ್ಕಾಗಿ ಏನಾದರೂ ಒಂದು ಪರಿಹಾರವನ್ನು ಸರಕಾರ ಬೇರೆ ಕಡೆಗಳಿಗೆ ಹೇಗೆ ಕೊಡುತ್ತಿದೆಯೋ ಅದರಂತೆ ನಮ್ಮ ಬೆಂಗಳೂರು ನಾರ್ತ್ ತಾಲ್ಲೂಕಿನ ಕೆಲವು ಪ್ರದೇಶಗಳಿಗೂ ಕೊಡಬೇಕೆಂದು ಹೇಳುತ್ತೇನೆ.

ನಮ್ಮ ನೆರೆಯಲ್ಲಿರುವ Belt area ದಲ್ಲಿ ಜನಸಂಖ್ಯೆಯು ಒತ್ತಡ ಜಾಸ್ತಿಯಾಗಿದೆ. ಅವರಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದಾರೋ ಅವನ್ನು ಈ ಕೆಲವು ಪ್ರದೇಶಗಳಿಗೆ ಕೊಡುತ್ತಿಲ್ಲ. ದೇವರನಾಗೇನಹಳ್ಳಿಯ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳಿಗೆ ಮೊನ್ನೆ ತಾನೇ ಹೇಳಿದ್ದೆ. ಇದರ ಬಗ್ಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು.

ನಮ್ಮ ಬಾರ್ಡರಿನಲ್ಲಿ ಕೆಲವುಮಂದಿ Tannery ಯಲ್ಲಿ ಕೆಲಸಮಾಡಿಕೊಂಡು ಜೀವನ ನಡೆಸುತ್ತಿದ್ದರು ಈಗ ಅವರಿಗೆ ಬಹಳ ದುಃಖಕರವಾದ ಸ್ಥಿತಿ ಬಂದಿದೆ. ಇದಕ್ಕೇನು ಮಾಡೋಣ ಎನ್ನುವುದೇ ಸಮಸ್ಯೆಯಾಗಿದೆ. ಈ ಕೆಲಸಗಾರರು ಹಿಂದೆ ಮಾಡುತ್ತಿದ್ದ ಸ್ಥಳವನ್ನು ಬದಲಾವಣೆ ಮಾಡಬೇಕೆಂದು ಮಾಡಿ ಈಗ ಅವರನ್ನು ಬೇರೆ ಸ್ಥಳಕ್ಕೆ ಬದಲಾಯಿಸಿರುವುದರಿಂದ ಇವರ ಕೆಲಸಗಳಿಗೆ ಸರಿಯಾದ Tannaery Area ವೇ ಇಲ್ಲದಂತಾಗಿದೆ. ಮೊದಲು ನೂರು ಷಾಪುಗಳಿದ್ದು ಸುಮಾರು ಹತ್ತು ಸಾವಿರ ಕೆಲಸಗಾರರಿದ್ದರು. ಇವರ ಕೆಲಸಕ್ಕೆ ಈಗ ಧಕ್ಕೆ ಒದಗಿ ಬಂದು ಕೇವಲ ಐದಾರು ಷಾಪುಗಳು ಈಗ ಕೆಲಸ ಮಾಡುತ್ತಿವೆ.

ಶ್ರೀ ಟಿ. ಮರಿಯಪ್ಪ.—ಇದನ್ನು ಸ್ಥಳೀಯ ಕೈಗಾರಿಕೆಯಾಗಿ ಮಾಡಬೇಕೆನ್ನುತ್ತೀರಾ ?

ಶ್ರೀ ಕೆ. ವಿ. ಬೈರೇಗೌಡ.—ಇದನ್ನು Co-operative Tannery Farm ತರಹದಲ್ಲಿ ಮಾಡಬೇಕಾಗಿದೆ. ಈಗ ಬೆಂಗಳೂರು ಸಿಟಿಯಲ್ಲೇ, ಕೇಂದ್ರ ಸರಕಾರದ ಕೈಗಾರಿಕೆಗಳು ನಾಲ್ಕಾರಿವೆ ? ದಕ್ಷಿಣ ಮತ್ತು ಉತ್ತರ ತಾಲ್ಲೂಕುಗಳಲ್ಲಿ ವಿಶಾಲವಾದ ಸುಮಾರು ಐನೂರು ಎಕರೆಯಷ್ಟು ಜಮೀನನ್ನು ಈ ಇಂಡಸ್ಟ್ರಿಗಳಿಗಾಗಿ ಅಕ್ವೈರು ಮಾಡಲಾಗಿದೆ. ಹೀಗೆ ಅಕ್ವೈರು ಮಾಡಿಕೊಂಡಿರುವ ಜಮೀನಿನ ಮಾಲೀಕರಿಗೆ compensation ಕೊಡುವುದಕೋಸ್ಕರ ಆಯಾ ಗ್ರಾಮದಲ್ಲಿ ವಾಸಮಾಡತಕ್ಕ ಕಾರ್ಮಿಕ ವರ್ಗದ ಜನರಿಂದ ವಸೂಲಿಮಾಡುತ್ತಿದ್ದಾರೆ. ಇವತ್ತಿನವರೆಗೆ ಸುಮಾರು 1,50,000 ರೂಪಾಯಿಗಳಷ್ಟು ಆದಾಯ ಬಂದಿದೆ. ಇದಕ್ಕೆ ಒಬ್ಬರು Sub-Division Officer ಇದ್ದಾರೆ. ಅದಲ್ಲದೆ ಬೆಂಗಳೂರಿನಲ್ಲೇ ಈ ಮೂರು Factory ಗಳನ್ನು ಏರ್ಪಾಡು ಮಾಡಿದ್ದರೂ ಇದರಲ್ಲಿ ಕೆಲಸಕ್ಕಾಗಿ ಜನರನ್ನು ಹೊರಗಡೆಯಿಂದ ತಂದು ಹಾಕುತ್ತಿರುವುದು ಒಂದು ದೊಡ್ಡ ಕಷ್ಟವಾಗಿದೆ. ಮೈಸೂರು ದೇಶದಲ್ಲೇ ಸ್ಥಾಪಿತವಾಗಿರುವ ಇಂತಹ ಕಾರ್ಖಾನೆಗಳಲ್ಲಿ ಮೈಸೂರು ದೇಶದ ಜನರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಕಲ್ಪಿಸದೇ ಇರುವುದರಿಂದ ಬಹಳ ಕಷ್ಟವಾಗಿದೆ ಎಂದು ಇಲ್ಲಿ ಹೇಳಬೇಕಾಗಿದೆ. ಇದೇ ಸೌಕರ್ಯಗಳನ್ನು ಖಾಸಗಿ ಜನರು ಅವರ ಉದ್ಯಮಗಳಲ್ಲಿ ಕೊಡುತ್ತಿದ್ದಾರೆ.

ಇನ್ನು ಸರ್ಕಾರದವರು ವ್ಯವಸಾಯದ ಜಮೀನಿನಲ್ಲಿ Conversion fine ವಗೈರೆ ವಸೂಲಿ ಮಾಡುತ್ತಿದ್ದಾರೆ ಆದರೆ ಈಗ ನಮ್ಮಲ್ಲಿರುವ Hindustan Aircraft, Bharat Electronics, Hindustan Machine Tools Ltd., Indian Telephone Industries ಈ ಫ್ಯಾಕ್ಟರಿಗಳಿರುವ ಜಾಗಕ್ಕೆ ಕನ್‌ವರ್ಷನ್ ಫೈನ್ ವಸೂಲಿ ಮಾಡಿಲ್ಲ Indian Telephone Industries ಇರುವ ಜಮೀನಿಗೆ Conversion Fine ಗಳನ್ನು ಯಾವುದೋಕಾರಣದಿಂದ ವಸೂಲಿಮಾಡಿಲ್ಲ ಅದನ್ನು ಏತಕ್ಕೆ ಕೊಟ್ಟಿಲ್ಲ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಇದರಿಂದ ಸರಕಾರಕ್ಕೆ ಲಕ್ಷಾಂತರ ರೂಪಾಯಿಗಳಷ್ಟು ಆದಾಯ ಬರುವುದಿದೆ. ಇದಕ್ಕೆ ಗಮನಕೊಡದೆ ಸುಮ್ಮನೆ ಬಿಡುವುದು ಸರಿಯಲ್ಲ.

ಹೀಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ನಮ್ಮ ದೇಶದ ಜಮೀನನ್ನು ತೆಗೆದುಕೊಂಡಿರುವಾಗ ಅವರಲ್ಲಿ ಮೈಸೂರಿನ ಜನರಿಗೇ ಮೊಟ್ಟಮೊದಲನೆಯ ಅವಕಾಶ ದೊರೆಯುವಂತೆ ಮಾಡಬೇಕು. ಯಾವ ಇಂಡಸ್ಟ್ರಿಗಳನ್ನು ಸ್ಟಾರ್ಟು ಮಾಡಿದರೂ ಮೊದಲು ಇಲ್ಲಿನ ಜನರಿಗೆ ಅವಕಾಶ ಕೊಡಬೇಕು.

ಶ್ರೀ ಟಿ. ಮರಿಯಪ್ಪ.—Indian Telephone Industries ನಲ್ಲಿ ಸ್ವಲ್ಪ ಹೀಗೆ ಮಾಡಿದ್ದಾರೆ.

ಶ್ರೀ ಕೆ. ವಿ. ಬೈರೇಗೌಡ.—ಈ ಬಗ್ಗೆ ಅಂಕಿ ಅಂಶಗಳನ್ನು ಸ್ವಲ್ಪಮಟ್ಟಿಗೆ ನಮಗೆ ಒದಗಿಸಿದರೆ ಸ್ವಲ್ಪ ಸಮಾಧಾನವಾಗುತ್ತದೆ.

ಇವೊತ್ತಿನ ದಿವಸ ದೇಶದಲ್ಲೆಲ್ಲ, ಎನ್. ಇ. ಎಸ್. ಮತ್ತು ಸಮಾಜವಿಕಾಸಕೇಂದ್ರಗಳನ್ನು ಎಲ್ಲ ಕಡೆಯಲ್ಲಿಯೂ ಕೊಡುತ್ತಿದ್ದಾರೆ ಇದರ ಕೆಲಸಗಳೆಲ್ಲ 1963ರ ವೇಳೆಗೆ ಪೂರೈಸಿ ಇದರಿಂದ ಪ್ರಯೋಜನ ಪಡೆಯಬೇಕೆಂಬ ಪ್ರಯತ್ನ ನಡೆಯುತ್ತಿದೆ. ಇದರ ಯೋಜನೆಗಳ ಪೈಕಿ ಶೇಕಡಾ ಐವತ್ತರಷ್ಟು ಕೂಡ ಎಲ್ಲ ಕಡೆಗೂ ಬಂದಿಲ್ಲ. ಇದುವರೆಗೂ ಗ್ರಾಮಾಂತರಗಳಿಗೆ ಈ ಯೋಜನೆಗಳ ಪೈಕಿ ಪ್ರತಿಯೊಂದು ಸಂಸಾರಕ್ಕೂ ಅನುಕೂಲ ಮಾಡಿಕೊಡತಕ್ಕ ಯೋಜನೆಯೂ ಇದೆ. ಇದನ್ನ ಯಶಸ್ವಿಯಾಗಿ ಮಾಡದೇ ಹೋದರೆ ಇನ್ನು ಮುಂದೆ ನಮ್ಮ ಗ್ರಾಮಗಳು ಅಭಿವೃದ್ಧಿಗೆ ಬರಲು ಗತ್ಯಂತರವೇ ಇಲ್ಲ ಎನ್ನುವ ಪೂರ್ಣ ತೀರ್ಮಾನವನ್ನೂ ಮಾಡಿಕೊಂಡಿದ್ದಾರೆ. ಅರೀತಿ ಕೆಲಸಗಳಾಗಬೇಕಿತ್ತು. ಆದರೆ ಇಷ್ಟೆಲ್ಲ ಆಗುವುದಕ್ಕೆ ನಿರೀಕ್ಷೆ ಮಾಡಿದಂತೆ ಕೆಲಸವಾಗದಿದ್ದರೂ ಕೂಡ ಖಾನಗೀ ಮಹನೀಯರು ಇದರ ಪೂರ್ಣ ಉಪಯೋಗ ಪಡೆಯಲು ಅವಕಾಶವಾಗಿದೆ. ಈಗಾಗಲೇ ಈ ಯೋಜನೆಗಳಿಗಾಗಿ ಸುಮಾರು ಆರು ಸಾವಿರ ರೂಪಾಯಿಗಳಷ್ಟು ಹಣ ಖರ್ಚಾಗುತ್ತಿದೆ. ಆದರೂ ಕೆಲವು ಕಡೆಗಳಲ್ಲಿ ಹಣವೇ ಇಲ್ಲದಂತಾಗಿದೆ ಎಂದು ನಮ್ಮ ಸ್ನೇಹಿತರು

ಹೇಳಿದರು. ಇದರ ಬಗ್ಗೆ ಹೆಚ್ಚು ಹೆಚ್ಚಾಗಿ ಗಮನ ಕೊಡಬೇಕು, ಯಾವ ಒಂದು ದೃಷ್ಟಿಯಿಂದ ಕೇಂದ್ರ ಸರಕಾರದವರು ರಾಜ್ಯ ಸರ್ಕಾರದವರು ಇವುಗಳನ್ನು ತಂದು ಗ್ರಾಮಾಂತರ ರೈತರುಗಳ ಆರ್ಥಿಕಸ್ಥಿತಿ, ಜೀವನಮಟ್ಟವನ್ನು ಉತ್ತಮ ಮಾಡಲು ನಿರೀಕ್ಷಿಸುತ್ತಿದ್ದಾರೋ ಅದನ್ನು ಮಾಡುವುದಕ್ಕೆ ಸತತ ಪ್ರಯತ್ನ ಮಾಡಬೇಕು. ಇದರಲ್ಲಿ ಕೆಲವು ಲೋಪ ದೋಷಗಳಿವೆ. Social Welfare Board ಗಳಲ್ಲಿ ಅಧ್ಯಕ್ಷರನ್ನಾಗಿ ಹೆಣ್ಣುಮಕ್ಕಳನ್ನು ನೇಮಿಸಲಾಗಿದೆ. ಯಾವ ಹೆಣ್ಣು ಮಕ್ಕಳನ್ನೂ ನಾನು ಅವಹೇಳನ ಮಾಡುತ್ತಿಲ್ಲ. ಈಗ ಇದರಲ್ಲಿ ಒಂದು ರೀತಿಯಾದ overlapping ಆಗಿದೆ. Central Social Welfare Board ನ್ನು ನಿಲ್ಲಿಸಿದರೆ ಮೇಲು.

ಅಲ್ಲಿ ಇವತ್ತು ಆಗಬೇಕಾದದ್ದು ಬೇಕಾದಷ್ಟಿದೆ. ದೇವರ ದಯದಿಂದ ಗಾಳಿಯೇನೋ ಇದೆ. ಆದರೆ ಕುಡಿಯುವುದಕ್ಕೆ ನೀರಿಲ್ಲ. ನಾವು ಇದನ್ನು ಪದೇ ಪದೇ ಹೇಳಿ ಸಾಕಾಗಿದೆ. ಜನರನ್ನು ಪಾಲಿಸುವ ಜವಾಬ್ದಾರಿ ಹೊತ್ತಂಥ ಸರ್ಕಾರಕ್ಕೆ ಇದನ್ನು ಬೇಗನೆ ಮಾಡಿಕೊಡುವುದು ಅವರ ಕರ್ತವ್ಯ. ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮೊದಲು ಮಾಡಿಕೊಡಿ. ಹಳ್ಳಿಗಳಲ್ಲಿ ಅನೇಕ ಕಡೆ ಒಂದು-ಎರಡು ಮೈಲಿಗಳ ದೂರದಿಂದ ನೀರನ್ನು ಕುಂಟೆಯಿಂದಲೋ ಕೊಳದಿಂದಲೋ ಹೊತ್ತು ತಂದು ಜೀವನ ಮಾಡಬೇಕಾದ ಪರಿಸ್ಥಿತಿಯಿದೆ. ಈ ಬಗ್ಗೆ ಸರ್ಕಾರದವರು ತೀವ್ರ ಗಮನಕೊಡಬೇಕೆಂದು ಹೇಳುತ್ತೇನೆ; ಮತ್ತು ಎನ್. ಇ. ಎಸ್. ಬ್ಲಾಕುಗಳಲ್ಲಿ ಇದನ್ನು ಒಂದು ಮುಖ್ಯಕಾರ್ಯಕ್ರಮವಾಗಿ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಹಾಗೆಯೇ Approach ರಸ್ತೆ ಮಾಡುವುದಿದೆ.

ಶ್ರೀ ಟಿ. ಮರಿಯಪ್ಪ.—ಈಗ N.E.S. ನವರು approach ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರಲ್ಲಾ.

ಶ್ರೀ ಕೆ. ವಿ. ಬೈರೇಗೌಡ.—ಈಗ ದೇಶದಲ್ಲಿ P.W.D. ಇಲಾಖೆಗೆ ಸಂಬಂಧಪಟ್ಟಂತೆ ಅನೇಕವಾದ ಕೆಲಸಗಳಾಗುತ್ತಿವೆ. ಶರಾವತಿ ಪ್ರಾಜೆಕ್ಟಿನ ಕೆಲಸ ಅತ್ಯಂತ ಪ್ರಾಮುಖ್ಯವಾದ ಕೆಲಸ. ತಿಂಗಳಿಗೊಮ್ಮೆಯಾದರೂ ಆ ಸ್ಥಳಕ್ಕೆ ಹೋಗಿ ಅಜಮಾಯಿಷಿ ಮಾಡುವುದು ಅವಶ್ಯಕ. ಅದೇರೀತಿ ಈ ಮಾನ್ಯ ಸಭೆಯ ಸದಸ್ಯರುಗಳೂ ಕೂಡ ಆ ಪ್ರಾಜೆಕ್ಟಿನ ಬಳಿಗೆ ಆಗಾಗ್ಗೆ ಹೋಗಿ 40-50 ಸಾವಿರ ಜನ ಕೆಲಸಮಾಡುವ ಈ ಅಗಾಧವಾದ ಕೆಲಸ ಯಾವ ಮಟ್ಟದಲ್ಲಿದೆಯೆಂದು ತಿಳಿದುಕೊಳ್ಳುವದು ಅಗತ್ಯವೆಂದು ಹೇಳುತ್ತೇನೆ.

ಅದೇರೀತಿ N E.S. ಯೋಜನೆ ಒಂದು ಮುಖ್ಯವಾದ ಯೋಜನೆ. ಇದಕ್ಕೆ ಸಂಬಂಧಪಟ್ಟ ಉಪಮಂತ್ರಿಗಳು ಈ ಬಗ್ಗೆ ಸಾಕಷ್ಟು ಉತ್ತೇಜನಕೊಡುತ್ತಿದ್ದರೂ ನಿರೀಕ್ಷಿಸಿದಷ್ಟು ಮಟ್ಟಿಗೆ ಸ್ಥಳೀಯ ಮುಖಂಡತ್ವ ಇನ್ನೂ ಬೆಳೆದಿಲ್ಲ. ಅದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಲೋಕಲ್ ಸೆಲ್ಫ್ ಗೌರ್ನಮೆಂಟ್ ಆಡಳಿದ ವಿಚಾರವಾಗಿ ಹೇಳುವುದಾದರೆ, ಪಂಚಾಯಿತಿ ಆಡಳಿತ ಚೆನ್ನಾಗಿಲ್ಲವೆಂದು ತಿಳಿಸಬೇಕಾಗಿದೆ. ಅಮಲ್ದಾರರಿಗಾಗಲಿ, ಡೆಪ್ಯುಟಿ ಕಮಿಷನರಿಗಾಗಲಿ ಅವರ ಆಡಳಿತವನ್ನು check ಮಾಡುವುದಕ್ಕೆ ಅಧಿಕಾರವಿಲ್ಲದೆ ಹೋಗಿ, ಇಂದು ಯಾವ ಪಂಚಾಯಿತಿ ಮೀಟಿಂಗುಗಳೂ ಅವ್ಯವಸ್ಥೆಯಲ್ಲಿವೆ. ಪಾಂಚಾಯಿತಿ ಆಡಳಿತವೇ ನಮ್ಮ ಜನಕ್ಕೆ ಹೊಸದಾಗಿರುವಾಗ ಆ ಕಡೆಗೆ ಸ್ವಲ್ಪ ಲಕ್ಷ್ಯ ಕೊಡುವುದು ಅಗತ್ಯ. ಮಹಾತ್ಮಾ ಗಾಂಧಿಯವರು ಯಾವರೀತಿ ಪಂಚಾಯಿತಿ ರಾಜ್ಯವನ್ನು ಸ್ಥಾಪಿಸಬೇಕೆಂದು ಆಶಿಸಿದ್ದರೋ ಅದನ್ನು ಈಡೇರಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಕಡೆಯದಾಗಿ ಸಹಕಾರ ಸಂಘಗಳ ವಿಚಾರ. ಶ್ರೀ ಮರಿಯಪ್ಪನವರು ಇದನ್ನು ಸ್ಥಾಪನೆ ಮಾಡಿದರು. ಅವರಿಗೆ ಇವುಗಳ ಆಡಳಿತದವ್ಯವಸ್ಥೆ ಹೇಗಿರಬೇಕೆಂಬುದು ಚೆನ್ನಾಗಿ ಗೊತ್ತಿದೆ. ಕೆಲವು ಸೊಸೈಟಿಗಳಲ್ಲಿ ಸಾಲವನ್ನು ಕೊಟ್ಟಾದಮೇಲೆ ಶೇಕಡ ಆರೂವರೆಯಂತ ಬಡ್ಡಿಯೆಂದು ಮುಂಚೆ ಗೊತ್ತುಮಾಡಿದ್ದುದನ್ನು ಶೇಕಡ ಏಳೂವರೆಗೆ ಬದಲಾವಣೆಮಾಡಿಕೊಳ್ಳಬೇಕೆಂದು ಇಲಾಖೆಯಿಂದ ಸೂಚನೆ ಬಂದಿದೆಯೆಂದು ಹೇಳಿ ವ್ಯತ್ಯಾಸ ಮಾಡುವ ನೀತಿಯಿದೆ. ಹೀಗಾದರೆ, ಇಂಥ ಸೊಸೈಟಿಗಳೊಡನೆ ವ್ಯವಹರಿಸತಕ್ಕ ಖಾಸಗಿ ಜನರ ಮನಸ್ಸಿನಲ್ಲಿ ಯಾವ ರೀತಿಯ ಭಾವನೆ ಉಂಟಾಗುತ್ತದೆ, ಅವರು ಯಾವರೀತಿ ಸೊಸೈಟಿಯ ವಿಷಯದಲ್ಲಿ ನಂಬಿಕೆಯಿಡುತ್ತಾರೆ. ಎಂಬುದನ್ನು ಯೋಚಿಸಬೇಕು. ಮತ್ತೊಂದು ವಿಷಯವೇನೆಂದರೆ, ಈ ಸಾರಿ ರೈತಾಪಿ ಜನರನೇಕರಿಗೆ ಸಾಲ ಕೊಡುತ್ತೇವೆಂದು ಭರವಸೆಕೊಟ್ಟು ಅವರಿಗೆಲ್ಲಾ ಕಾಗದಪತ್ರಗಳನ್ನು ಜೊತೆಮಾಡಿಕೊಳ್ಳುವಂತೆ ಹೇಳಿದರು. ಅದರಂತೆ ಅನೇಕರು ಕಾಗದಪತ್ರಗಳನ್ನಿಟ್ಟುಕೊಂಡು ಕಾಯುತ್ತಿದ್ದರೆ, ಕೊನೆಗೆ ಹೇಳಿಬಿಟ್ಟರು, ತಮಗೆ ರಿಜರ್ವ್‌ಬ್ಯಾಕಿನಿಂದ ಹಣ ಬರಲಿಲ್ಲ ಎಂದು. ಹೀಗೆಲ್ಲಾ ಆದರೆ ಸಹಕಾರ ಸಂಘಗಳ ವಿಷಯದಲ್ಲಿ ಯಾವರೀತಿ ಜನರಿಗೆ ನಂಬಿಕೆಯಿರುತ್ತದೆ? ತಾವು ಸಹಕಾರದ ವಿಷಯದಲ್ಲಿ ಹೆಚ್ಚಿನ ಮಮತೆಯಿರತಕ್ಕವರು, ಆದ್ದರಿಂದ ತಾವು ಈ ವಿಷಯದಲ್ಲಿ ಹೇಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸಮಾಡುತ್ತಿದ್ದಿರೋ ಅದೇ ರೀತಿ ನಿಮ್ಮ ಸಹೋದ್ಯೋಗಿಗಳೂ ಕೆಲಸ ಮಾಡುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಮಾನ್ಯ ಹಣಕಾಸಿನ ಸಚಿವರು ನಮ್ಮ ಮುಂದೆ ಉಳಿತಾಯದ ಬಡ್ಜೆಟ್ಟನ್ನಿಟ್ಟಿದ್ದಾರೆ. ಈ ಸಂಬಂಧದಲ್ಲಿ ಅರ್ಥ ಸಚಿವರು ತೆರಿಗೆಯನ್ನು ಹಾಕಿ ಹಣವನ್ನು ಚೆನ್ನಾಗಿ ಬರಮಾಡಿಕೊಳ್ಳುವ ಯೋಚನೆ ಮಾಡಿದ್ದಾರೆ. ಹೋದ ಸಾರಿ ಒಂಭತ್ತು ತೆರದ ತೆರಿಗೆಗಳನ್ನು ಸಂಸ್ಥಾನಾಮಳೆ uniform taxation ತರುತ್ತೇವೆಂದು ಹೇಳಿ ತಂದು ಸಂಸ್ಥಾನದ ವರಮಾನವನ್ನು ಹೆಚ್ಚಿಸಿದರು. ಇಷ್ಟೆಲ್ಲಾ ಮಾಡಿದರೂ, ಒಂದು ವಿಷಯವೇನೆಂದರೆ, ನೀವು ಹಾಕಿರುವ ತೆರಿಗೆಗಳು ಅನೇಕವು ಸರಿಯಾಗಿ ವಸೂಲಾಗಿಲ್ಲ. ಎಕ್ಸೈಸ್‌ನಲ್ಲಿ, ಸೇಲ್ಸ್‌ಟ್ಯಾಕ್ಸ್‌ನಲ್ಲಿ ಸರಿಯಾದ ಕಾರ್ಯಕ್ರಮ ತೆಗೆದುಕೊಂಡು ನೀವು ಏಕೆ ವಸೂಲು ಮಾಡುತ್ತಿಲ್ಲವೋ ಗೊತ್ತಿಲ್ಲ.

ಶ್ರೀ ಟಿ. ಮರಿಯಪ್ಪ.—ತಮ್ಮ ಮುಂದೆ ಮುದ್ರಣ ಮಾಡಿಸಿ ಒಂದು D.C.B. Statementನ ಪ್ರತಿಗಳನ್ನೇ ಇಟ್ಟಿದ್ದೇನೆ. ಅದರಲ್ಲಿ ಈಗಿನ arrears ಎಷ್ಟು, ಹಳೆಯ arrears ಎಷ್ಟು ಎಂಬುದನ್ನು ತೋರಿಸಿದ್ದೇವೆ. ಎಲ್ಲೋ ಓಬಿರಾಯನ ಬಾಕಿಗಳು ಮಾತ್ರ ಉಳಿದಿವೆ.

ಶ್ರೀ ಎನ್. ರಾಚಯ್ಯ.—ಹೊಸದನ್ನೆಲ್ಲವನ್ನೂ ವಸೂಲು ಮಾಡಿದ್ದೇವೆ.

ಶ್ರೀ ಬಿ. ಚಾಮಯ್ಯ.—ಅರ್ಥಸಚಿವರು ಈಗ passenger goods traffic ಮೇಲೆ ಸಣ್ಣದಾಗಿ ಒಂದು ತೆರಿಗೆಯನ್ನು ಹಾಕಬೇಕೆಂದು ಹೇಳಿದ್ದಾರೆ. ಇದರಿಂದ 50 ಲಕ್ಷ ರೂಪಾಯಿಗಳು ಬರುವ ನಿರೀಕ್ಷೆಯಿದೆಯೆಂದು ತಿಳಿಸಿದ್ದಾರೆ. ಈ ತೆರಿಗೆ ಬಹುಮಟ್ಟಿಗೆ ಸಾಮಾನ್ಯ ಜನರ ಮೇಲೆ ಬೀಳುವುದಾಗಿದೆ. ಇದು ಬಡ

(ಶ್ರೀ ಬಿ. ಚಾಮಯ್ಯ)

ಜನರಿಗೆ ತೊಂದರೆ ಕೊಡುವಂತಹುದು. ಆಂಧ್ರದಲ್ಲಿ, ಮದ್ರಾಸಿನಲ್ಲಿ, ಬೊಂಬಾಯಿನಲ್ಲಿ ಇದನ್ನು ಹಾಕಿದ್ದಾರೆಂದು ಹೇಳಿ, ಇಲ್ಲಿ ಹಾಕಬೇಕೆಂದು ನಿರ್ಧರಿಸಿದ್ದೀರಿ. ಇದನ್ನು ವಿಧಿಸುವುದರಲ್ಲಿ ಜನರಿಗೆ ಹೆಚ್ಚು ತೊಂದರೆ ಯಾಗದಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ತಾವು ಬಂದಿರುವ ಕ್ಷೇತ್ರವಾದ ನಾಗಮಂಗಲದ ವಿಚಾರದಲ್ಲಿ ಒಂದು ಮಾತು. ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಬರಗಾಲಕ್ಕೆ ತೌರುಮನೆಯೆಂದು ಪ್ರಸಿದ್ಧಿಯಾದುದು ಈ ಪ್ರದೇಶ. ಅಲ್ಲಿನ ಜನರ ಸ್ಥಿತಿಗತಿ ಹೇಗಿಹೆಯೆಂಬುದು ತಮಗೆ ಗೊತ್ತು. ಆ ಜನರ ಜೀವನದ ಮಟ್ಟವನ್ನು ಉತ್ತಮಪಡಿಸುವ ಬಗ್ಗೆ ತಾವು ಏನನ್ನೂ ಮಾಡಿಲ್ಲ. ನಿಮ್ಮ ಭಾಷಣವನ್ನು ಓದಿದರೆ ಉದ್ದಕ್ಕೂ ನೌಕರರುಗಳಿಗೆ ಸಂಬಳ ಸಾಲದು ಎಂದೆಲ್ಲಾ ಹೇಳಿದ್ದಾರೆಯೇ ಹೊರತು, ಹಳ್ಳಿಯ ಜನರ ಕೂಗು ತಮ್ಮ ಕಿವಿಗೆ ಬಿದ್ದಂತೆ ಕಾಣಲಿಲ್ಲ. ನೌಕರರುಗಳಿಗೆ ನಾನು ಕೊಡಬೇಡಿ ಎಂದು ಹೇಳುತ್ತಿಲ್ಲ. ಆದರೆ ಹಳ್ಳಿಯವರಿಗೂ ಅನುಕೂಲ ಮಾಡಿಕೊಡಬೇಕಾದದ್ದು ಅಗತ್ಯವೆಂದು ಹೇಳುತ್ತೇನೆ. ಅವರಿಗೂ ಅನ್ನ, ಬಟ್ಟೆ, ವಸತಿ ಸೌಕರ್ಯಗಳನ್ನುಂಟುಮಾಡಿಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ ಇಂಡಸ್ಟ್ರೀಸ್ ಎಲ್ಲವನ್ನೂ ಸೆಂಟ್ರಲೈಜ್ ಮಾಡಿಬಿಟ್ಟಿದ್ದಾರೆ. ಇದನ್ನೆಲ್ಲಾ ಸ್ಪ್ರೆಡ್ ಓವರ್‌ಮಾಡಿ ಎಲ್ಲಾ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲೂ ಕೂಡ ಇಂಡಸ್ಟ್ರೀಸ್ ಸ್ಟಾರ್ಟ್ ಮಾಡಿದರೆ ನಮ್ಮ ಅನ್-ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್‌ಗಳೆಲ್ಲಾ ಸಾಲ್ವ್ ಆಗುತ್ತವೆ. ಎಷ್ಟೋ ಜನ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕುತ್ತದೆ; ಮತ್ತು ಅವರು ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಜನಗಳಿಗೆ ಇರುವ ತೊಂದರೆಗಳು ಎಷ್ಟೋ ಕಡಮೆಯಾಗುತ್ತವೆ.

ಹಳ್ಳಿಗಳಲ್ಲಿ ಮೆಡಿಕಲ್ ಫೆಸಿಲಿಟೀಸ್ ಬಹಳ ಕಡಮೆ ಇದೆ. ಆದ್ದರಿಂದ ಹಳ್ಳಿಗಳಿಗೆ ಮೆಡಿಕಲ್ ಫೆಸಿಲಿಟೀಸ್ ಒದಗಿಸಬೇಕು. ಕರಪ್ಷನ್ ಎಲ್ಲಾ ಡಿಪಾರ್ಟ್‌ಮೆಂಟಿನಲ್ಲೂ ತಾಂಡವವಾಡುತ್ತಿದೆ. ಪೋಲೀಸ್ ಇಲಾಖೆಯಲ್ಲಿ ಲಂಚ ಇದೆ. ಅದರಲ್ಲೂ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಇರುವಷ್ಟು ಲಂಚ ಬೇರೆ ಇನ್ನು ಯಾವ ಇಲಾಖೆಯಲ್ಲೂ ಇಲ್ಲ ಎಂದು ನನ್ನ ಭಾವನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮಗೆ ಏತಕ್ಕೆ ಆ ಅನುಭವ ಬಂತು ?

ಶ್ರೀ ಬಿ. ಚಾಮಯ್ಯ.—ನಮಗೆ ನೀರಾವರಿ ಕೆಲಸ ಆಗಬೇಕು, ಅದಕ್ಕೋಸ್ಕರ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರ ಹತ್ತಿರ ಹೋಗಬೇಕು. ಅಲ್ಲಿ ಅನುಭವ ಪಡೆದಿದ್ದೇನೆ. ಅಲ್ಲಿ ಎಷ್ಟರಮಟ್ಟಿಗೆ ಕೆಲಸ ನಡೆಯುತ್ತದೆ, ಯಾವ ಸಂದರ್ಭದಲ್ಲಿ ಕೆಲಸ ಆಗುತ್ತದೆ, ಯಾವ ಸಂದರ್ಭದಲ್ಲಿ ಕೆಲಸ ಆಗುವುದಿಲ್ಲ ಎಂಬ ವಿಚಾರ ತಿಳಿದುಕೊಂಡಿದ್ದೇನೆ. ಅದನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ನಾನು ಆ ಡಿಮ್ಯಾಂಡಿನ ಮೇಲೆ ಮಾತನಾಡುವಾಗ ಎಲ್ಲಾ ವಿಷಯವನ್ನೂ ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಸದ್ಯದಲ್ಲಿ ಬೆಳೆ ಬೆಳೆಯಬೇಕಾದರೆ ಮೈನರ್ ಇರಿಗೇಷನ್ ದೇಶದಲ್ಲಿ ಬಹಳ ಪ್ರಾಮುಖ್ಯವಾದುದು. ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಮಾಡುವುದರಿಂದ ಸದ್ಯದಲ್ಲಿ ಫಲ ಬರುವುದಿಲ್ಲ. ಆದ್ದರಿಂದ ಮೈನರ್ ಇರಿಗೇಷನ್ನಿಗೆ ಹೆಚ್ಚಿಗೆ ಗಮನ ಕೊಡಬೇಕು. ಈಗಿನ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳಿಗೆ ಕೆಲಸ ಮಾಡುವುದರಲ್ಲಿ ತುಂಬ ಉತ್ಸಾಹ ಇದೆ. ಕೆಲಸ ಮಾಡಬೇಕು ಎಂಬ ಭಾವನೆಯೂ ಇದೆ. ಆದರೆ ಸ್ವಲ್ಪ ಆತುರ. ಅದನ್ನು ಬಿಟ್ಟು ಕೆಲಸ ಮಾಡಬೇಕು. ನಾನು ಅನೇಕ ಸಾರಿ ಹೇಳಿದ್ದೇನೆ. ನಾನು ಬಂದಾಗಲೆಲ್ಲಾ ಕೆಲಸ ಮಾಡಿಸಿಕೊಡುತ್ತೇನೆ ಎಂದು ಹೇಳುತ್ತಾರೆ. ಒಂದು ಸಲ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬಂದಾಗ ಯಾವುದೋ ಒಂದು ಕೆರೆಯ ಹತ್ತಿರ ಹೋದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಊಟ ಮಾಡಿಕೊಂಡು ಸಮಾಧಾನ ಮಾಡಿ ಬಂದೆ.

ಶ್ರೀ ಬಿ. ಚಾಮಯ್ಯ.—ಆ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನನ್ನ ಕ್ಷೇತ್ರಕ್ಕೆ ಬಂದರೆ ನಾನು ಜವಾಬ್ದಾರ. ನನ್ನನ್ನು ಕರೆದುಕೊಂಡು ಹೋಗಿ ಪ್ರತಿಯೊಂದು ಜಾಗದಲ್ಲಿಯೂ ಜನಗಳಿಗೆ ಇರುವ ಕುಂದುಕೊರತೆಗಳನ್ನು ಕೇಳಬೇಕು. ನನ್ನನ್ನು ಬಿಟ್ಟು ಬೇರೆ ಯಾರನ್ನೋ ಕರೆದುಕೊಂಡು ಹೋದರೆ ನಾನು ಕುಂದುಕೊರತೆಗಳನ್ನು ಹೇಳುವುದಕ್ಕೆ ಅವಕಾಶವಿಲ್ಲ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ಹೇಳುವುದು ತಪ್ಪು.

Sri H. M. CHANNABASAPPA.—I had come on surprise inspection and therefore it was not possible to take you. I wanted to know things how they are on surprise inspection.

ಶ್ರೀ ಬಿ. ಚಾಮಯ್ಯ.—ಮೊನ್ನೆ ದಿವಸ ಒಬ್ಬ ಮಹನೀಯರು ಮಾತನಾಡಿದರು. ಅವರು ಮಂಡ್ಯಾ ತಾಲ್ಲೂಕಿನ ಪ್ರತಿನಿಧಿಗಳು ಅವರು ಈ ದಿವಸ ಇಲ್ಲಿಇಲ್ಲ. ಅವರು ನಮ್ಮ ಅರ್ಥಸಚಿವರನ್ನು ಕುರಿತು ಆರೋಪಣೆ ಮಾಡಿದರು. ಅವರ ಆರೋಪಣೆಗೆ ಆಧಾರವಿಲ್ಲ. "ಅರ್ಥಸಚಿವರು ಬಹಳ ಅನುಭವಿಗಳು, ಅವರು ಪ್ರತಿಯೊಂದಕ್ಕೂ ಕೈಹಾಕುತ್ತಾರೆ, ಕೆಲಸ ಆಗುವುದನ್ನು ನಿಲ್ಲಿಸುತ್ತಾರೆ" ಎಂದು ಹೇಳಿದರು. "ಹೊನ್ನೆಮಡುಕೆರೆ ಆಗಬೇಕಾಗಿತ್ತು, ಮಾಡದ ಹಾಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆಗಾಗ್ಗೆ ಹೇಳಿ ತಡೆಗಟ್ಟುತ್ತಿದ್ದಾರೆ" ಎಂದು ಹೇಳಿದರು. ನಾನು ಹೇಳುವುದು ಇದಕ್ಕಿಂತ ತತ್ಪೂರ್ವ ಒಂದು ಕೆರೆ ಆಗಬೇಕು. ಅದು ಅರಕನಕೆರೆ, ಅದು ಬ್ರೀಚ್‌ಡ್ ಟ್ಯಾಂಕ್. ಹೊನ್ನೆಮಡು ಹೊಸದಾಗಿ ನಿರ್ಮಾಣ ಆಗುವ ಕೆರೆ. ಆ ಬ್ರೀಚ್ ಟ್ಯಾಂಕ್ ಕಟ್ಟಬೇಕು ಎಂದು ಹತ್ತಾರು ವರ್ಷಗಳಿಂದ ಜನಗಳು ಹೊಡೆದಾಡುತ್ತಿದ್ದಾರೆ. ಸರ್ಕಾರದವರು ಕಟ್ಟಲಿಲ್ಲ. ಅದನ್ನು ಕೆಲವು ಮಹನೀಯರು ಸೇರಿಕೊಂಡು ಈ ಕೆರೆ ಆಗದ ಹಾಗೆ ತಡೆಗಟ್ಟಿ ಮಂಡ್ಯಾ ತಾಲ್ಲೂಕಿನ ಜನಗಳನ್ನು ಎತ್ತಿಕಟ್ಟಿ ಇನ್ನೊಂದು ಕೆರೆ ಆಗಬೇಕಾಗಿದೆ ಎಂದು ಎಜಿಟೇಷನ್ ಶುರು ಮಾಡಿದರು. ಸೂಪರಿಂಟೆಂಡಿಂಗ್ ಇಂಜಿನಿಯರು, ಎರಡೂ ಕೆರೆ ಬೇಡಿ, ಪಿಕ್ ಅಪ್ ಇರುವುದನ್ನು ಇಂಪ್ರೂವ್ ಮಾಡಿಸಿ, ಕೆಲವು ಕಾಲ ನೋಡೋಣ, ಆಮೇಲೆ ಕೆರೆ ಕಟ್ಟಿಸೋಣ ಎಂದು ರಿಪೋರ್ಟ್ ಮಾಡಿದರು. ಆ ರಿಪೋರ್ಟ್ ಎಲ್ಲಿದೆಯೋ ಗೊತ್ತಿಲ್ಲ. ಈಗಾಗಲೇ ಅವರನ್ನು ಇನ್‌ಫ್ಲುಯೆನ್ಸ್ ಮಾಡಿ ಹೊನ್ನೆಮಡು ಕೆರೆ ಆಗಬೇಕು ಎಂದು ಮಂಡ್ಯ ಎಗ್ಜಿಕ್ಯುಟೀವ್ ಇಂಜಿನಿಯರ್ ಮಿ॥ ಹಮೀದ್ ಸಾಹೇಬರು ಶಿಫಾರಸ್ಸು ಮಾಡಿ ಚೀಫ್ ಎಂಜಿನಿಯರ್ ಅವರಿಗೆ ಬುದ್ದು ರಿಕಾರ್ಡು ತಂದು ಕೊಟ್ಟಿದ್ದಾರೆ. ಇಷ್ಟು ಇನ್‌ಫ್ಲುಯೆನ್ಸ್ ನಡೆಯುತ್ತದೆ. ಅರಕನಕೆರೆಯವರಿಗೆ ಅಷ್ಟು ಇನ್‌ಫ್ಲುಯೆನ್ಸ್ ಇಲ್ಲ. ಮಂಡ್ಯದ ಪ್ರತಿನಿಧಿಗಳು ಮಂಡ್ಯದಲ್ಲಿ ಸೇರಿಕೊಂಡು ಅರಕನಕೆರೆಯನ್ನು ಕಟ್ಟಿಸಲು ಅವ

ಕಾಶ ಕೊಡಬಾರದೆಂದು ಪ್ರಯತ್ನ ಮಾಡುತ್ತಾರೆ. ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕ . ಎರಡು ಕೆರೆ ಬೇಡಿ, ಎರಡುಕಡೆ ಪಿಕಪ್ ಇರುವುದನ್ನು ಅಭಿವೃದ್ಧಿ ಮಾಡಿ ಎಂದುಹೋದ ಸಾರಿ ಶ್ರೀ ವೀರಣ್ಣಗೌಡರು ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳಾಗಿದ್ದಾಗ ಅವರಿಗೆ ನಾನು ಕಾಗದ ಬರೆದು ಕಳುಹಿಸಿದ್ದೆ. ಅವರು ರೆಕಾರ್ಡ್ ಬರಲಿ, ಆಮೇಲೆ ತೀರ್ಮಾನ ಮಾಡೋಣ ಎಂದು ಹೇಳಿದ್ದರು. ಈಗ ರೆಕಾರ್ಡು ಚೀಫ್ ಎಂಜಿನಿಯರಿಗೆ ಬಂದಿದೆ. ಈ ವಿಷಯದಲ್ಲಿ ತಾವು ಸರಿಯಾದ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು. ತಾವೂ ಕೂಡ ಸ್ಥಳಕ್ಕೆ ಹೋಗಿ ಅದನ್ನು ನೋಡಿಲ್ಲ. ಜನರು ಬಹಳ ತೊಂದರೆ ಪಡುತ್ತಿದ್ದಾರೆ. ಅರಕನ ಕೆರೆಯನ್ನು ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಯಾವುದು ಆಗಬೇಕು ಎಂದು ತಮ್ಮ ಸಲಹೆ.

7 P.M.

ಶ್ರೀ ಬಿ. ಚಾಮಯ್ಯ.—ಮೊದಲನೆಯದು ಅರಕನ ಕೆರೆ ಬ್ರೀಚ್‌ಡ್ ಟ್ಯಾಂಕ್ ಅದನ್ನು ಮಾಡಬೇಕು. ಜಾಗ್ರತೆಯಾಗಿ ಧೈರ್ಯದಿಂದ ಮಾಡಬೇಕು. ಅವರು ಬರುತ್ತಾರೆ ಇವರು ಬರುತ್ತಾರೆ ಎಂದು ನೋಡಿದರೆ ಆಗುವುದಿಲ್ಲ. ತಾವು ಧೈರ್ಯಸ್ಥರು ಎಂದು ನಮಗೆ ಗೊತ್ತಿದೆ, ಅದನ್ನು ಮಾಡಿಸಿಕೊಡಿ.

Sri H. M CHANNABASAPPA.—You are saying that because you have love for me.

ಶ್ರೀ ಬಿ. ಚಾಮಯ್ಯ.—ಆ ಕೆಲಸವನ್ನು ನೀವು ಮಾಡಿ ಹೆಸರು ತೆಗೆದುಕೊಳ್ಳಿ. ಆ ಪ್ರಾಂತದವರಿಗೆ 40-50 ಎಕರೆ ಜಮೀನು ಸಾಗುವಳಿ ಆಗುತ್ತದೆ. ಅದು ಬೆಂಗಾಡು ಪ್ರದೇಶ, ಈ ಪ್ರದೇಶದಲ್ಲಿ ಫಸಲು ಬೆಳೆದು ತಿನ್ನುವುದಕ್ಕೆ ಅನ್ನ ಆಗುತ್ತದೆ. ಪಾಂಡವಪುರದ ಸಹಕಾರ ಕಾರ್ಖಾನೆಯ ವಿಷಯದಲ್ಲಿ ಆ ಮಹನೀಯರು ಕೆಲವು ವಿಷಯಗಳನ್ನು ಈ ಸಭೆಯಲ್ಲಿ ಹೇಳಿದರು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ರಾಮ ರಾಮ !

ಶ್ರೀ ಬಿ. ಚಾಮಯ್ಯ.—"ರಾಮ" ಎಂದರೆ ಇಲ್ಲದ್ದನ್ನು ಹೇಳಿದರೆ ಏನು ಪ್ರಯೋಜನ? ಪಾಂಡವಪುರದ ಸಕ್ಕರೆ ಕಾರ್ಖಾನೆಯ ಆಡಳಿತದಲ್ಲೂ ಕೂಡ ಶ್ರೀ ಮರಿಯಪ್ಪನವರು ಕೈಹಾಕುತ್ತಾರೆ, ಎಂದರೆ ಎಲ್ಲಾ ನಿಜಕ್ಕೆ ದೂರವಾದುದು. ಕೆಳಗೆ ಇರುವವರನ್ನು ಮೇಲಕ್ಕೆ ಎತ್ತುವುದಕ್ಕೂ ಮೇಲೆ ಇರುವವರನ್ನು ಕೆಳಗೆ ತರುವುದಕ್ಕೂ ಪ್ರಯತ್ನ ಪಡುತ್ತಿದ್ದಾರೆ; ಮತ್ತು ಸಕ್ಕರೆ ಕಂಪನಿಯ ಪ್ರಾರಂಭ ಆಗಕೂಡದು ಎಂದು ವಿರೋಧವಾಗಿದ್ದವರನ್ನು ಡೈರೆಕ್ಟರ್ ಆಗಿ ನೇಮಿಸುವುದಕ್ಕೆ ಶ್ರೀ ಮರಿಯಪ್ಪನವರು ಪ್ರಯತ್ನ ಪಡುತ್ತಿದ್ದಾರೆ ಎಂದು ಹೇಳಿದರು. ಇವೆಲ್ಲ ಸುಳ್ಳು. ಸಕ್ಕರೆ ಕಾರ್ಖಾನೆ ಪ್ರಾರಂಭವಾಗಬಾರದೆಂದು ಯಾರೂ ಹೇಳಿರಲಿಲ್ಲ. ಸಕ್ಕರೆ ಕೈಗಾರಿಕೆ ಪ್ರಾರಂಭ ಆಗಬಾರದು ಎನ್ನುವುದಕ್ಕೆ ಕಾರಣ ಹೀಗಿದೆ. ಯಾವುದೋ ಇನ್ನೊಂದು ಸೊಸೈಟಿ ಇತ್ತು, ಆ ಸೊಸೈಟಿ ಹೆಸರಿನಲ್ಲಿ ಒಂದು ಲೈಸೆನ್ಸ್ ಬಂತು, ಸೊಸೈಟಿಗೆ ಸಂಬಂಧಪಟ್ಟವರು ತಮ್ಮ ಸೊಸೈಟಿ ಮೂಲಕ ಸಕ್ಕರೆ ಕೈಗಾರಿಕೆ ನಡೆಯಲಿ ಎಂದು ಪ್ರಯತ್ನ ಪಡುತ್ತಿದ್ದರೇ ವಿನಾ ಅಲ್ಲಿ ಸಕ್ಕರೆ ಕೈಗಾರಿಕೆ ಸ್ಥಾಪಿಸುವುದು ಬೇಡ ಎಂದು ಯಾರೂ ಹೇಳಲಿಲ್ಲ. ಆ ಸಕ್ಕರೆ ಕಾರ್ಖಾನೆಯ ಡೈರೆಕ್ಟರುಗಳ ಚುನಾವಣೆ ಆಯಿತು. ಈಗ ನಾನೂ ಒಬ್ಬ ಡೈರೆಕ್ಟರ್ ಆಗಿ ಚುನಾಯಿತನಾಗಿದ್ದೇನೆ. ಆದರೆ ಅಲ್ಲಿಯ ಆಡಳಿತ ಸರಿಯಾಗಿಲ್ಲ. ತಾವು ನೋಡಬೇಕು. ಅದರಲ್ಲಿ ಸರ್ಕಾರದ ಇಂಟರೆಸ್ಟ್ ಇದೆ. ಅದಕ್ಕೆ ಜನಗಳು 15 ಲಕ್ಷ ರೂಪಾಯಿಗಳ ಷೇರು ಕೊಟ್ಟಿದ್ದಾರೆ. ಸರ್ಕಾರದವರು 20 ಲಕ್ಷ ರೂಪಾಯಿಗಳ ಷೇರು ತೆಗೆದುಕೊಂಡಿದ್ದಾರೆ; ಮತ್ತು 80 ಲಕ್ಷ ರೂಪಾಯಿಗಳಿಗೆ ಗ್ಯಾರಂಟಿ ಕೊಟ್ಟಿದ್ದಾರೆ. ಸರ್ಕಾರದ ಇಂಟರೆಸ್ಟ್ ಇರುವಾಗ, ಆ ಸಂಸ್ಥೆಯ ಆಡಳಿತ ಸರಿಯಾಗಿ ನಡೆಯದಿದ್ದರೆ, ಸರ್ಕಾರದ ಮೇಲೆ ಕೂಡ ದುಷ್ಪರಿಣಾಮ ಉಂಟಾಗುತ್ತದೆ. ಆ ಸಂಸ್ಥೆಯಲ್ಲಿ ಒಬ್ಬ ಡೈರೆಕ್ಟರು ಸರ್ವಾಧಿಕಾರಿಯಾಗಿದ್ದಾರೆ. ಅಲ್ಲಿಗೆ ಬರುವ ಸೆಕ್ರೆಟರಿಗಳು ಅಲ್ಲಿ ನಿಭಾಯಿಸುವುದಕ್ಕೆ ಅವಕಾಶವೇ ಇಲ್ಲ. ಸರ್ಕಾರದವರು ಇದಕ್ಕೆ ನಿಗಾಕೊಡುತ್ತಾ ಇಲ್ಲ. ಈಗ ಇರುವ ಚೇರ್ಮನ್ನರನ್ನು ಮುಂದುವರಿಸಿದರೆ ಕೆಲಸ ಸರಿಯಾಗಿ ನಡೆಯುವುದಿಲ್ಲ. ಚೇರ್ಮನ್ನರ ಬದಲಾವಣೆಯಾಗಬೇಕು. ಹಿಂದೆ ಇದ್ದ ಸೆಕ್ರೆಟರಿಯವರನ್ನು ಈ ಡೈರೆಕ್ಟರು ತಮ್ಮ ಪ್ರಭಾವದಿಂದ ಟ್ರಾನ್ಸ್‌ಫರ್ ಮಾಡಿಸಿದರು. ಈಗ ಇರುವ ಸೆಕ್ರೆಟರಿಯವರು ಸಾಧು ಮನುಷ್ಯರು, ಏಬಲ್‌ಮ್ಯಾನ್. ಅಂಥವರ ಮೇಲೆ, ಸಣ್ಣ ಜನಗಳನ್ನು ಎತ್ತಿ ಕಟ್ಟಿ ಇಲ್ಲದ ಸಲ್ಲದ ಮಾತುಗಳನ್ನು ಆಡಿಸುತ್ತಾರೆ. ಸೆಕ್ರೆಟರಿಯವರನ್ನು ಸಣ್ಣ ಪುಟ್ಟ ಮಾತುಗಳಿಂದ ಎತ್ತಿ ಆಡಿಸುವುದು ಸಾಧುವಲ್ಲ. ಸರ್ಕಾರದವರು ಈ ವಿಚಾರದಲ್ಲಿ ನಿಗಾ ಕೊಟ್ಟು ಪರಿಶೀಲಿಸಬೇಕು ಮತ್ತು ಕೆಲಸಕಾರ್ಯಗಳನ್ನು ದಕ್ಷತೆಯಿಂದ ನೋಡುವಂಥ ಸರಿಯಾದವರನ್ನು ಚೇರ್ಮನ್ನರನ್ನಾಗಿ ಅಪಾಯಿಂಟ್ ಮಾಡಬೇಕು. ಕೆಳಧಿಕಾರಿಗಳಿಗೆ ಕೆಲಸ ಮಾಡುವುದಕ್ಕೆ ಇವರು ಇರುವ ಸೌಕರ್ಯಗಳನ್ನೂ ಕೊಡುವುದಿಲ್ಲ. ಒಂದು ವ್ಯಾನು, ಒಂದು ಜೀಪು ಎರಡೂ ಈ ಕಂಪೆನಿಯಲ್ಲಿವೆ. ಒಬ್ಬ ಡೈರೆಕ್ಟರು ಲಾಯರ್ ಸಾಹೇಬರು. ವ್ಯಾನಾಗಲಿ, ಜೀಪಾಗಲಿ ಸೆಕ್ರೆಟರಿಯವರ ಸುಫರ್ದಿನಲ್ಲಿಲ್ಲ. ಚೇರ್ಮನ್ನರನ್ನು ಯಾರೂ ಪ್ರಶ್ನಿಸುವ ಹಾಗೆಯೇ ಇಲ್ಲ. ಸರ್ಕಾರದ ಸೆಕ್ರೆಟರಿ ಇದ್ದರೂ ಸಹ, ಅವರು ನಿಸ್ಸಹಾಯಕರಾಗಿದ್ದಾರೆ. ಸಕ್ಕರೆ ಕಂಪನಿಯ ಜೀಪ್ ವ್ಯಾನು ಈ ಡೈರೆಕ್ಟರ ಸ್ವಂತ ಉಪಯೋಗಕ್ಕೆ ಇವೆ. ಇಂಥ ವಿಚಾರಗಳನ್ನೆಲ್ಲ ತಡೆಗಟ್ಟಬೇಕು. ಸರ್ಕಾರ ಇದನ್ನೆಲ್ಲ ತಡೆಗಟ್ಟದೆ ಹೋದರೆ, ಸಕ್ಕರ ಕಂಪನಿ ಅಭಿವೃದ್ಧಿಯಾಗುವುದಿಲ್ಲ. ಇಷ್ಟು ಹೊತ್ತಿಗೇ ಅದು ಶುರುವಾಗಬೇಕಾಗಿದ್ದಿತು. ನಾಲ್ಕುವರ್ಷ ಚಿಲ್ಲರೆ ಆದರೂ ಕೂಡ, ವರ್ಕ್ ಆಗುತ್ತಾ ಇಲ್ಲ. ಈ ಡೈರೆಕ್ಟರು ಎಲ್ಲರ ಮೇಲೂ ಪ್ರಭಾವ ಬೀರಿ, ತಮಗೆ ಬೇಕು ಬೇಕಾದವರನ್ನು ನೌಕರರನ್ನಾಗಿ ಅಪಾಯಿಂಟ್ ಮಾಡಿಸಿ, ಸಕ್ಕರೆ ಕಂಪನಿ ಆಡಳಿತವನ್ನು ಅವ್ಯವಸ್ಥೆ ಮಾಡಿದ್ದಾರೆ. ನಾನು ಹೇಳುವುದನ್ನು ತಾವೆಲ್ಲರೂ ಗಮನದಲ್ಲಿಟ್ಟುಕೊಂಡು, ಕಂಪನಿ ಆಡಳಿತ ತೃಪ್ತಿಕರವಾದ ಸ್ಥಿತಿಯಲ್ಲಿ ನಡೆಯುವುದಕ್ಕೆ, ಸಭ್ಯಸ್ತರಾದ ಒಳ್ಳೆಯವರನ್ನು ಡೈರೆಕ್ಟರುಗಳಾಗಿ ನಾಮಕರಣ ಮಾಡಿ; ಸಕ್ಕರೆ ಕಂಪನಿ ಅಭಿವೃದ್ಧಿಯಾಗುವುದಕ್ಕೆ ಸಹಾಯಮಾಡಿ. ಸಕ್ಕರೆ ಕಂಪೆನಿ ಉದ್ಧಾರಮಾಡಿ ಆ ಪ್ರಾಂತ್ಯದ ಜನಗಳಿಗೆ ಅದರಿಂದ ಲಾಭ ತರತಕ್ಕಂಥ ಸಾಮರ್ಥ್ಯವಿರುವವರನ್ನು ಚೇರ್ಮನ್ನರಾಗಿ ನೇಮಕ ಮಾಡಿ. ಈ ವಿಷಯದಲ್ಲಿ ಇನ್ನು ಜಾಸ್ತಿ ಹೇಳಲು ಇಷ್ಟಪಡುವುದಿಲ್ಲ.

ಪ್ರೊಹಿಬಿಷನ್ ವಿಷಯದಲ್ಲಿ ಎಲ್ಲರೂ ಮಾತನಾಡಿದರು. ಅದರಿಂದ ಮೂರು ಕೋಟಿ ರೂಪಾಯಿಗೆ ಸ್ವಲ್ಪ ಕಡಮೆ ವರಮಾನ ಬರುತ್ತಿದೆ. ಪ್ರೊಹಿಬಿಷ

(ಶ್ರೀ ಬಿ. ಚಾಮಯ್ಯ)

ನ್ನನ್ನು ಎಲ್ಲ ಕಡೆಗೂ ಜಾರಿಗೆ ತರುತ್ತೇವೆ ಎನ್ನುವ ಧೈರ್ಯವಿದೆಯೇ? ಇಲ್ಲ. ಉಲ್ಟಾ ಅರ್ಧಂಬರ್ಧ ಮಾಡಿರುತ್ತೀರಿ. ಶ್ರೀ ಮರಿಯಪ್ಪನವರ ತಾಲ್ಲೂಕಾದ ನಾಗಮಂಗಲದಲ್ಲಿಯೇ ಹೆಚ್ಚಾಗಿ ಕಳ್ಳಭಟ್ಟಿ ಸಾರಾಯಿ ತಯಾರಾಗುತ್ತಿದೆ. ಇದರಿಂದ ಜನಗಳ ಆರೋಗ್ಯಸ್ಥಿತಿ ಕೆಟ್ಟು ಹೋಗುತ್ತಿದೆ. ಪ್ರೊಹಿಬಿಷನ್ನನ್ನು ಸಂಪೂರ್ಣವಾಗಿ ಜಾರಿಗೆ ತರುವ ಧೈರ್ಯವಿಲ್ಲದಿದ್ದರೆ ನಿಲ್ಲಿಸಿಬಿಡಿ. ಆರೇಳುಕೋಟಿ ರೂಪಾಯಿ ವರಮಾನ ಬರುತ್ತದೆ. ಆ ಹಣವನ್ನೆಲ್ಲಾ ಹರಿಜನೋದ್ಧಾರಕ್ಕೆ ಉಪಯೋಗಿಸಿಕೊಳ್ಳಿ.

ನಮ್ಮ ಸ್ನೇಹಿತರಾದ ಬೈರೇಗೌಡರು ಪೋಲೀಸು ಇಲಾಖೆಯ ವಿಚಾರ ಹೇಳುತ್ತಾ ಅದು ಜನಗಳಿಗೆ ರಕ್ಷಣೆ ಕೊಡುವ ಇಲಾಖೆಯಾಗಿರಬೇಕೆಂದು ಹೇಳಿದರು. ಅವರು ಹೇಳಿದ್ದು ನ್ಯಾಯ. ಪೋಲೀಸು ಇಲಾಖೆಯಲ್ಲಿ ದಕ್ಷತೆ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ನೋಡಿ. ಮಂಡ್ಯಟೌನಿನಲ್ಲಿ ಎರಡು ಕೃತ್ಯಗಳಾದುವು. ಅವುಗಳು ಈ ಇಲಾಖೆಗೆ ಕೀರ್ತಿ ತರುವಂಥ ಸಂಗತಿಗಳಲ್ಲ. ಪೋಲಿಸು ಇಲಾಖೆಗೆ ಹೆಚ್ಚಿಗೆ ದುಡ್ಡು ಒದಗಿಸಿದ್ದೀರಿ. ಇದು ನ್ಯಾಯವಲ್ಲ. ಇಷ್ಟೊಂದು ಭಾರಿ ಮೊಬಲಗನ್ನು ಈ ಖಾತೆಗೆ ಕೊಡುವಬದಲು, ಅದನ್ನು ಎಜುಕೇಷನ್ ಡಿಪಾರ್ಟ್‌ಮೆಂಟಿಗಾಗಲಿ ಅಥವಾ ಮತ್ತಾವುದಾದರೂ ಅಭಿವೃದ್ಧಿ ಕಾರ್ಯಕ್ಕಾಗಲೀ ಒದಗಿಸಿದ್ದರೆ ಚೆಂದವಾಗಿತ್ತು. ಎಂಟು ಘಂಟೆ ರಾತ್ರಿಯಲ್ಲಿ ಮಂಡ್ಯ ಡೆಪ್ಯುಟಿ ಕಮೀಷನರ ಮನೆಗೆನುಗ್ಗಿ ಅವರ ಹೆಂಗಸರ ಆಭರಣಗಳನ್ನು ಯಾರೋ ತೆಗೆದುಕೊಂಡು ಹೋದರು. ಇವತ್ತಿನ ವರೆಗೂ ಆ ಕೇಸು ಪತ್ತೆಯಾಗಿಲ್ಲ. ಪೋಲೀಸು ಸೂಪರಿಂಟೆಂಡೆಂಟರ ಮನೆಯೂ ಇವರ ಮನೆ ಎದುರಿಗೇ ಒಂದು ಫರ್ಲಾಂಗಿನಲ್ಲಿದೆ. ಪೋಲೀಸು ದಕ್ಷತೆ ಎಲ್ಲಿದೆ? ಮಂಡ್ಯದಲ್ಲಿ ಒಬ್ಬ ಹೆಣ್ಣುಮಗಳ ಮೇಲೆ ಅತ್ಯಾಚಾರ ನಡೆಯಿತು. ಯಾರು ಅತ್ಯಾಚಾರವನ್ನು ನಡೆಸಿ ಕೃತ್ಯಕ್ಕೊಳಗಾಗಿದ್ದರೊ, ಇನ್‌ಫ್ಲೂಯನ್ಸಿಗೆ ಒಳಗಾಗಿ ಅವರನ್ನು ಬಿಟ್ಟುಬಿಟ್ಟರು. ನೀವು ಇರುವುದು ಏತಕ್ಕೆ? ನಿಮ್ಮ ಪಾರ್ಟಿಗೆ ಸೇರಿದವರು ಏನು ಬೇಕಾದರೂ ಮಾಡಬಹುದೋ? ನಿಮ್ಮ ಪಾರ್ಟಿಯವರು ದಾರಿತಪ್ಪಿ ನಡೆದಾಗ ಅವರಿಗೆ ಬುದ್ಧಿಕಲಿಸಿದರೆ, ಬಾಕಿಯವರಿಗೆ ಭಯಬರುತ್ತದೆ. ನಿಮಗೂ ಒಳ್ಳೆಯ ಹೆಸರು ಬರುತ್ತದೆ. ನಿಮ್ಮ ಪಾರ್ಟಿಗೇ ಸೇರಿದವರ ಮೇಲೆ, ಇಷ್ಟು ಉಗ್ರ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಗೊತ್ತಾದರೆ, ಬೇರೆ ಪಂಗಡಗಳಲ್ಲಿದ್ದು ಅಪರಾಧ ಮಾಡುವವರಿಗೆ ಭಯವನ್ನುಂಟುಮಾಡುತ್ತದೆ. ಈ ರೀತಿ ಮಾಡಬೇಕು. ಈ ಕೃತ್ಯಗಳ ವಿಷಯದಲ್ಲಿ ಸರ್ಕಾರ ಕಣ್ಣುಮುಚ್ಚಿಕೊಂಡಿರುವುದು ಸರಿಯಲ್ಲ.

ಹಳ್ಳಿಗಾಡಿನ ವಿದ್ಯಾರ್ಥಿಗಳು ದಿನೇ ದಿನೇ ಹೈಸ್ಕೂಲು, ಕಾಲೇಜುಗಳಿಗೆ ಹೆಚ್ಚು ಹೆಚ್ಚಾಗಿ ಬರುತ್ತಾ ಇದ್ದಾರೆ. ಅವರಿಗೆ ಸ್ಕಾಲರ್‌ಷಿಪ್ಪುಗಳನ್ನು ಹೆಚ್ಚಾಗಿ ಒದಗಿಸಬೇಕು. ನಾನೂ ಸ್ಕಾಲರ್‌ಷಿಪ್ ಕಮಿಟಿಯಲ್ಲಿ ಮೆಂಬರು. ನೂರಾರು ಹುಡುಗರುಗಳಿಗೆ 20-30 ಸ್ಕಾಲರ್‌ಷಿಪ್ಪುಗಳನ್ನು ಹಂಚುವುದಕ್ಕೆ ಆಗುತ್ತದೆಯೇ? ತಾವೆಲ್ಲಾ ಹಿಂದಿನಿಂದಲೇ ಕಾಂಗ್ರೆಸ್ಸಿಗೆ ಸೇರಿದವರು. ಈ ವಿದ್ಯಾರ್ಥಿಗಳ ಅಭಿವೃದ್ಧಿಯ ವಿಷಯದಲ್ಲಿ ತಮಗೆ ಆಸಕ್ತಿ ಇರಬೇಕು. ಅವರಿಗೆ ಹೆಚ್ಚಿಗೆ ಬೆಂಬಲ ಕೊಡಬೇಕು. ಐದು ಲಕ್ಷ ರೂಪಾಯಿ ಹೆಚ್ಚಾಗಿ ಕೊಟ್ಟಿದ್ದೀರಿ ಇನ್ನೂ 10—15 ಲಕ್ಷ ರೂಪಾಯಿ ಹೆಚ್ಚಿಗೆ ಕೊಡಿ. ಬಡ ವಿದ್ಯಾರ್ಥಿಗಳು ಮುಂದುವರಿಯಲಿ. ಬಡವರು ಮುಂದುವರಿದು ಜೀವನ ಮಾಡುವುದಕ್ಕೆ ಅನುಕೂಲವಾಗಿಲ್ಲ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ರಾಚಯ್ಯನವರು ಒಂದು ವಿಷಯ ಹೇಳಿದರು. ಹರಿಜನರಿಗೆ ಎತ್ತು ತೆಗೆಯುವುದಕ್ಕೆ, ಮನೆಕಟ್ಟುವುದಕ್ಕೆ ದುಡ್ಡು ಕೊಡುತ್ತಾ ಇದ್ದೇವೆಂದು ಹೇಳಿದರು. ಒಂದು ತಾಲ್ಲೂಕಿಗೆ ಎರಡು ಜೊತೆ, ಮೂರು ಜೊತೆಗೆ ಆಗುವಷ್ಟು ಕೊಡುತ್ತೀರಿ. ಸಾವಿರಾರು ಸಂಸಾರಗಳಿರುವುದರಿಂದ, ಎಲ್ಲರಿಗೂ ಎತ್ತು ಕೊಡುವುದಕ್ಕಾಗುತ್ತದೆಯೇ? ಒಂದು ಜೊತೆ ಇಬ್ಬರಿಗೆ ಹಂಚಿಕೊಡುತ್ತೀರ? 250 ರೂಪಾಯಿ ಇಬ್ಬರಿಗೆ ಹಂಚುತ್ತೀರ—125 ರೂಪಾಯಿ ಸರ್ಕಾರ ಕೊಟ್ಟರೆ, 125 ರೂಪಾಯಿ ಪಾರ್ಟಿಕೊಡಬೇಕು. ಇದರಿಂದ ಅವನಿಗೆ ಏನೂ ಪ್ರಯೋಜನವಾಗುವುದಿಲ್ಲ. ಮನೆಕಟ್ಟುವುದಕ್ಕೆ ಹೆಂಚುಗಳು, ಮುಂತಾದ ಸಾಮಾನುಗಳಿಗೋಸ್ಕರ 400 ರೂಪಾಯಿ ಕೊಡುತ್ತಾ ಇದ್ದೀರಿ. ಈ ಹೆಂಚಿನ ಸಪ್ಲೈಯನ್ನೂ ಕೂಡ ಕಂಟ್ರಾಕ್ಟರಿಗೆ ಕೊಟ್ಟುಬಿಡುತ್ತೀರಿ. ಅವರು ಕೊಡುವ ಹೆಂಚು ಬಹಳ ಕಡಮೆ ದರ್ಜೆಯದು, ಆದ್ದರಿಂದ ಸರ್ಕಾರ ಕೊಡುವ ಹೆಂಚು ಮೂರು ದಿವಸ ಬಾಳಿಕೆ ಬರುವುದಿಲ್ಲ. ಅಂಥ ಕಡಮೆ ದರ್ಜೆ ಹೆಂಚು ಮತ್ತಿತರ ಸಾಮಾನುಗಳನ್ನು ಹರಿಜನರ ಮನೆಗಳಿಗೆ ಸಪ್ಲೈಆಗದಹಾಗೆ ಶ್ರೀ ರಾಚಯ್ಯನವರು ನೋಡಿಕೊಳ್ಳಬೇಕು.

ಶ್ರೀ ಎನ್. ರಾಚಯ್ಯ (ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು).—ತಾಲ್ಲೂಕುಗಳಲ್ಲಿ ಪ್ರತಿಯೊಂದು ಕುಟುಂಬದವರೂ ಮನೆ ಕಟ್ಟಿಕೊಳ್ಳಲು ಒಂದು ಯೋಜನೆ ಇದೆ. ಅದರಲ್ಲಿ 750 ರೂಪಾಯಿನಂತೆ ಒಂದು ಸ್ಕೀಮು, 1,500 ರೂಪಾಯಿನಂತೆ ಒಂದು ಸ್ಕೀಮುನ್ನ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಕೇಂದ್ರ ಸರ್ಕಾರದವರೂ ಒಪ್ಪಿರುತ್ತಾರೆ. ಸ್ವಂತ ಜವಾಬ್ದಾರಿಯಿಂದ ಕೆಲಸ ಮಾಡಿದರೆ, ಕಟ್ಟುವವರೇ ಮೆಟೀರಿಯಲ್ ತೆಗೆದುಕೊಳ್ಳಬಹುದು. ಸರಿಪಡಿಸುತ್ತೇವೆ.

ಶ್ರೀ ಬಿ. ಚಾಮಯ್ಯ.—ನೇರವಾಗಿ ಕೆಲಸ ನಡೆಯುವುದಿಲ್ಲ. ಏಜಂಟುರುಗಳು ಇರುತ್ತಾರೆ. ಏಜಂಟರುಗಳಿಗೆ ದುಡ್ಡು ಕೊಟ್ಟಿರುತ್ತಾರೆ.

ಶ್ರೀ ಎನ್. ರಾಚಯ್ಯ.—ಆಧಾರವಿಲ್ಲದೆ ಸಾಲ ಕೊಡುತ್ತಾರೆ. ಪರ್ಸೊನಲ್ ಸೆಕ್ಯುರಿಟಿ, ಸ್ಟೇಟ್ ಮತ್ತು ಮನೆ ಆಧಾರದ ಮೇಲೆ ಸಾಲಕೊಡುತ್ತಾರೆ.

ಶ್ರೀ ಬಿ. ಚಾಮಯ್ಯ.—ಒಂದು ಕಡೆಯಿಂದ ಮನೆಗಳನ್ನು ಪೂರೈಸಿಕೊಂಡು ಹೋದರೆ ಜನಗಳಿಗೆ ಅನುಕೂಲವಾಗುತ್ತದೆ. ಅಲ್ಲೊಂದು ಮನೆ, ಇಲ್ಲೊಂದು ಮನೆ ಕಟ್ಟಿಸಿದರೆ ಪ್ರಯೋಜನವಾಗುತ್ತದೆಯೆ? ಹರಿಜನರೆಲ್ಲರೂ ಬಡವರೇ. ಬಾಕಿ ಜನಾಂಗಗಳಲ್ಲಿಯೂ ಬಡವರು ಬೇಕಾದಷ್ಟು ಇದ್ದಾರೆ. ಅವರಿಗೂ ಸಹ ಸಹಾಯ ಮಾಡಬೇಕು. ಹಾಗೆ ಮಾಡಿದರೆ ವೆಲ್‌ಫೇರ್ ಸ್ಟೇಟ್ ಆಗುತ್ತದೆ. ಇಲ್ಲಿ ಕುಳಿತುಕೊಂಡು ನಾವು ಮಾತನಾಡಿದರೆ, ನೀವು ರಿಪ್ಲೈ ಕೊಟ್ಟರೆ ಆಗುವುದಿಲ್ಲ. ದೇಶ ಮುಂದುವರಿಯಬೇಕಾದರೆ, ವೆಲ್‌ಫೇರ್ ಸ್ಟೇಟ್ ಆಗಬೇಕಾದರೆ, ಪ್ರತಿಯೊಬ್ಬರೂ ಸುಖವಾಗಿ ಜೀವನ ಮಾಡಬೇಕು, ಬಟ್ಟೆಹಾಕಿಕೊಳ್ಳಬೇಕು; ಪ್ರತಿಯೊಬ್ಬರಿಗೂ ಮನೆ ಇರಬೇಕು. ಇಷ್ಟಾದರೆ ಮಾತ್ರ ದೇಶ ಮುಂದುವರಿಯುತ್ತದೆ.

ಬೆಗ್ಗರ್ ಪ್ರಾಬ್ಲಮ್ ನಮ್ಮದೇಶದಲ್ಲಿ ವಿಪರೀತವಾಗಿ ಹೋಗಿದೆ. ಈ ವಿಷಯದಲ್ಲಿ ಶ್ರೀ ಮರಿಯಪ್ಪನವರು ಅವರ ಅಡ್ರೆಸ್ಸಿನಲ್ಲಿ ಏನೂ ಹೇಳಿಲ್ಲ. ಈ ಸಮಸ್ಯೆಯನ್ನು ಸಾಲ್ವ್ ಮಾಡದೆಹೋದರೆ, ನಮ್ಮ ದೇಶ ಅಧೋಗತಿಗೆ ಹೋಗುತ್ತದೆ. ಜಪಾನಿನಂತೆ

ಅವರಿಗೆ ರೆಸ್ಟ್‌ಹೌಸ್, ವರ್ಕ್‌ಹೌಸ್ ಸ್ಟಾರ್ಟ್‌ಮಾಡಿ. ಭಿಕ್ಷುಕರು ಕೆಲಸಮಾಡಿ ಸಂಪಾದನೆ ಮಾಡಬೇಕು.

ನಮ್ಮ ಕಾನ್‌ಸ್ಟಿಟ್ಯೂಷನ್ ಪ್ರಕಾರ ಪ್ರೈಮರಿ ಎಜುಕೇಷನ್ ಜವಾದ್ದಾರಿ ಸರ್ಕಾರದ್ದೇ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಎಜುಕೇಷನ್ ಸೆಸ್ ತೆಗೆದುಕೊಳ್ಳುತ್ತಾ ಇದ್ದೀರಿ, ಎಜುಕೇಷನ್ ಮಾತ್ರ ಕೊಡುತ್ತಾ ಇಲ್ಲ. ಎಲ್ಲಾ ಗ್ರಾಮಗಳಲ್ಲಿಯೂ ಪ್ರೈಮರಿ ಎಜುಕೇಷನ್ ಸ್ಕೂಲುಗಳನ್ನು ಸ್ಥಾಪಿಸುವುದಕ್ಕೆ ಪ್ರಯತ್ನಮಾಡಿ. ಎಲ್ಲರೂ ವಿದ್ಯಾವಂತರಾದರೆ ದೇಶ ಮುಂದುವರಿಯುತ್ತದೆ. ಪ್ರೈಮರಿಸ್ಕೂಲು ಸ್ಥಾಪನೆ ಮಾಡಿದರೆ ಸಾಲದು. ಸ್ಕೂಲುಗಳಿಗೆ ಕಟ್ಟಡಗಳಿಲ್ಲ. ಎಷ್ಟೋ ಕಡೆ ಸ್ಕೂಲುಗಳನ್ನು ಚಾವಡಿಗಳಲ್ಲಿ ನಡೆಸುತ್ತಿದ್ದಾರೆ. ಸ್ಕೂಲುಗಳಿಗೆ ಕಟ್ಟಡಗಳನ್ನು ತಯಾರು ಮಾಡಿಸಿ. ಜನಗಳು ವಿದ್ಯಾವಂತರಾದರೆ ದೇಶ ಮುಂದುವರಿಯುತ್ತದೆ.

ಪ್ಯಾಡಿ ಪ್ರೊಕ್ಯೂರ್‌ಮೆಂಟ್ ಆರ್ಡರ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ನೀವುಗಳೆಲ್ಲಾ ವ್ಯವಸಾಯ ಮಾಡಿದವರು. ವ್ಯವಸಾಯಗಾರರಿಗೆ ಏನು ತೊಂದರೆ ಇದೆ ಎನ್ನುವುದು ಗೊತ್ತಿದೆ. ನೀವು ಕ್ಯಾಬಿನೆಟ್ಟಿನಲ್ಲಿದ್ದುಕೊಂಡು ಜನವರಿ ತಿಂಗಳಿನಲ್ಲಿ ಆರ್ಡರ್ ಕಳುಹಿಸಿದ್ದೀರಲ್ಲಾ ?

ಶ್ರೀ ಎನ್. ರಾಚಯ್ಯ.—ಕೇಂದ್ರ ಸರ್ಕಾರದ ಒಂದು ನೀತಿಗೆ ಅನುಸಾರವಾಗಿ ಈ ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಯಿತು. ಉದ್ದೇಶಪೂರ್ವಕವಾಗಿ ತೊಂದರೆ ಕೊಡಬೇಕು ಎನ್ನುವುದು ಸರ್ಕಾರದ ಮನೋಭಾವವಲ್ಲ.

ಶ್ರೀ ಬಿ. ಚಾಮಯ್ಯ.—ಈ ಆರ್ಡರಿಂದ ರೈತರಿಗೆ ಎಷ್ಟು ತೊಂದರೆಯಾಗುತ್ತದೆ! ಈ ಆರ್ಡರನ್ನು ಹೊರಡಿಸುವುದಕ್ಕೆ ಮುಂಚೆ ರೈತರು ಭತ್ತವನ್ನು ಮಾರಿಬಿಟ್ಟಿದ್ದರೆ ಏನು ಮಾಡಬೇಕು ? ಪಲ್ಲ ಒಂದಕ್ಕೆ 30—31 ರೂಪಾಯಿ ಹಾಗೆ ಸಣ್ಣ ಭತ್ತ ಮಾರಾಟವಾಗುತ್ತಿರುವಾಗ,—ರೈತನಿಂದ ವರ್ತಕರು, ಮಿಲ್ಲಿನವರು ಸ್ಟಾಕ್ ಮಾಡಿಕೊಂಡಿರುತ್ತಾರೆ,—25—26 ರೂಪಾಯಿನಂತೆ ರೈತನಿಗೆ ಕೊಡುತ್ತೀರಲ್ಲ, ಅದು ಯಾವ ನ್ಯಾಯ ? ಯಾವ ರೈತನನ್ನು ನೀವು ಉದ್ಧಾರ ಮಾಡಿದ ಹಾಗಾಯಿತು ? ಅವನನ್ನು ಕೊಲ್ಲುವುದಕ್ಕೆ ತಯಾರಾಗಿದ್ದೀರಿ. ಅವನಿಗೆ ಒಂದೆರಡು ಕಾಸು ಹೆಚ್ಚಿಗೆ ಬರುವುದನ್ನು ತಡೆಗಟ್ಟುತ್ತಿದ್ದೀರಿ. ಅವನನ್ನು ನೀವು ಉದ್ಧಾರ ಮಾಡುವುದು ಹೇಗೆ? ನಾವು ಬೆಳೆಯಬೇಕಾದರೆ, cost of production ಎಷ್ಟಾಗುತ್ತದೆನ್ನುವುದನ್ನು ಯೋಚನೆ ಮಾಡಬೇಕು. ತಾವು ಎಲ್ಲಾ ರೈತರು. ಚನ್ನಬಸಪ್ಪನವರೂ ಭತ್ತ ಬೆಳೆದಿದ್ದಾರೆ. ಅವರು ಮಂತ್ರಿಮಂಡಲದಲ್ಲಿಲ್ಲವೇ ? ನೀವು ಬಡ ರೈತರಿಗೋಸ್ಕರ ಹೋರಾಡುವವರು, ಏತಕ್ಕೆ ಇಷ್ಟು ಕಡಮೆ ದರ ಕೊಡಬೇಕು ? ನೀವೆಲ್ಲಾ ಮಂತ್ರಿಮಂಡಲದಲ್ಲಿದ್ದುಕೊಂಡು ರೈತರಿಗೆ ಈ ರೀತಿ ತೊಂದರೆ ಮಾಡುತ್ತಾ ಇದ್ದೀರಿ. ಇದು ನ್ಯಾಯವಲ್ಲ. ಹೀಗೆ ಕಡ್ಡಾಯ ಮಾಡುವುದು ಸರಿಯಲ್ಲ ಎಂದು ಕೇಂದ್ರ ಸರ್ಕಾರದವರ ಮೇಲೆ ನೀವು ಒತ್ತಾಯ ಮಾಡಬೇಕು. ನೀವು ದಪ್ಪಕ್ಕಿಗೆ ರೇಟು ಕೊಟ್ಟಿರುವುದು ಹೋಗಲಿ. ಸಣ್ಣ ಭತ್ತ ಏಕೆ ಪ್ರೊಕ್ಯೂರ್ ಮಾಡಿಕೊಳ್ಳಬೇಕು ? ಇದನ್ನೂ ಕಂಟ್ರೋಲ್ ರೇಟಿನಲ್ಲಿ ಸರ್ಕಾರಕ್ಕೆ ಕೊಡಬೇಕೆಂದು ಮಾಡಿರುವುದು ಬಹಳ ಅನ್ಯಾಯ. ದಪ್ಪ ಭತ್ತ ಬಡವರಿಗೆ ಬೇಕು. ಅದನ್ನು ಕೊಂಡು ಬಡಜನಗಳಿಗೆ ಮಾರಾಟ ಮಾಡಿ, ಸಣ್ಣ ಭತ್ತದಿಂದ ರೈತರಿಗೆ ಬರುವ ದುಡ್ಡಿಗೆ ಅಡ್ಡಿ ಬರಬೇಕಾಗಿಲ್ಲ. ರೈತನು ಸುಖವಾಗಿ ಜೀವನ ಮಾಡುವುದಕ್ಕೆ ಏಕೆ ಅಡ್ಡಿ ಮಾಡುತ್ತೀರಿ? ಅವನಿಗೆ ಕಡಮೆ ದರದಿಂದ ಆಗುವ ನಷ್ಟವನ್ನು ಸಬ್‌ಸಿಡೈಸ್ ಮಾಡಿಕೊಡಬೇಕು.

The House adjourned at Twenty Minutes past Seven of the Clock to meet again at Thirty Minutes past Eight of the Clock on Friday, the 13th March 1959.